1. ಸಂತಾಪ ಸೂಚನೆ

ಮಾನ್ಯ ಸಭಾಧ್ಯಕ್ಷರು:

ಗಂಗಾಧರಪ್ಪ, ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಡಾ: ರಾಷ್ಟ್ರದ ಮಾಜಿ ಪ್ರಧಾನಮಂತ್ರಿಯಾಗಿದ್ದ ಐ.ಕೆ.ಗುಜ್ರಾಲ್, ಕರ್ನಾಟಕದ ಮಾಜಿ ಸಚಿವರಾಗಿದ್ದ ಬಿ.ಮುನಿಯಪ್ಪ ಮುದ್ದಪ್ಪ, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಹೆಚ್.ಪುಟ್ಟದಾಸ್,ಜಿ.ಜಿ.ಯಲ್ಲಿಗುತ್ತಿ, ಬಿ.ಆರ್.ಧನಂಜಯ, ಎಂ. ಶಂಕರರೆಡ್ಡಿ, ಡಿ.ಬಿ. ಸಿ.ಬಂದೀಗೌಡ, ಮತ್ತು ಕೇಂದ್ರದ ಸಚಿವರಾ–ಗಿದ್ದ ವಿಲಾಸ್‌ರಾವ್ ದೇಶಮುಖ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥರಾಗಿದ್ದ ಕೆ.ಎಸ್.ಸುದರ್ಶನ್, ಶಿವಸೇನೆಯ ಮುಖ್ಯಸ್ಥರಾಗಿದ್ದ ಬಾಳಾಸಾಹೇಬ್ ಠಾಕ್ರೆ, ಕ್ಷೀರಕ್ರಾಂತಿ ಹರಿಕಾರ ಡಾ: ವರ್ಗೀಸ್ ಕುರಿಯನ್, ಹಿರಿಯ ಪತ್ರಕರ್ತ ವಿ.ಎನ್. ಸುಬ್ಬರಾವ್ ಹಾಗೂ ಡಾ: ಅನಿಲ್ ಕಮತಿ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಐ.ಕೆ. ಗುಜ್ರಾಲ್

ಐ.ಕೆ. ಗುಜ್ರಾಲ್ ಅವರು 4ನೇ ಡಿಸೆಂಬರ್ 1919ರಲ್ಲಿ ಪಂಜಾಬ್ ಪ್ರಾಂತ್ಯದ ಝೀಲಮ್‌ನಲ್ಲಿ ಜನಿಸಿದ್ದು, ಬಿ.ಕಾಂ. ಪದವಿ ಮತ್ತು ಸ್ನಾತಕೋತ್ತರ ಹಾಗೂ ಪಿ.ಎಚ್.ಡಿ.ಯನ್ನು ಪಡೆದಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ನಾಯಕತ್ವದ ಗುಣವನ್ನು ರೂಢಿಸಿಕೊಂಡಿದ್ದು, ಎಡ ಪಂಥೀಯ ಸಂಘಟನೆ–ಯಲ್ಲಿ ಪಾಲ್ಗೊಂಡಿದ್ದರು.

1958ರಲ್ಲಿ ನವದೆಹಲಿಯ ನಗರಸಭೆಯ ಉಪಾಧ್ಯಕ್ಷರಾಗಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರಲ್ಲದೆ 1964 ರಲ್ಲಿ ರಾಜ್ಯಸಭೆಗೆ ಕಾಂಗ್ರೆಸ್ ಪಕ್ಷದಿಂದ ಚುನಾಯಿತರಾಗಿದ್ದರು. 1967 ರಿಂದ 1976ರ ಅವಧಿಯಲ್ಲಿ ಸಂಸದೀಯ ವ್ಯವಹಾರ ದೂರಸಂಪರ್ಕ ಮತ್ತು ವಸತಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರಲ್ಲದೆ 1975 ರಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದಂತಹ ಸಂದರ್ಭದಲ್ಲಿ ಮಹತ್ವದ ಮಾಹಿತಿ ಮತ್ತು ಪ್ರಸಾರ

ಖಾತೆಯನ್ನು ಹೊಂದಿದ್ದರು. ದಿವಂಗತರು 1976 ರಿಂದ 1980ರವರೆಗೆ ರಷ್ಯಾದ ರಾಯಭಾರಿಯಾಗಿಯೂ ಕಾರ್ಯನಿರ್ವ-ಹಿಸಿರುತ್ತಾರೆ.

1989ರಲ್ಲಿ ಪಂಜಾಬಿನ ಜಲಂಧರ್ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿ ಲೋಕಸಭಾ ಸದಸ್ಯರಾಗಿದ್ದರಲ್ಲದೆ, ವಿದೇಶಾಂಗ ಖಾತೆಯ ಸಚಿವರಾಗಿ ಕಾರ್ಯನಿರ್ವಹಿಸಿದ್ದು, ಉತ್ತಮ ರಾಜತಾಂತ್ರಿಕ ವಿದೇಶಾಂಗ ನೀತಿಯನ್ನು ಹೊಂದಿದ್ದರು. ಅವರ ವಿದೇಶಾಂಗ ನೀತಿಗೆ "ಗುಜ್ರಾಲ್ ಸಿದ್ಧಾಂತ" ಎಂದೇ ಕರೆಯುತ್ತಿದ್ದರು.

1992ರಲ್ಲಿ ರಾಜ್ಯಸಭೆಗೆ ಆಯ್ಕೆಗೊಂಡಿದ್ದು, 1996 ರಿಂದ 1997ರವರೆಗೆ 2ನೇ ಬಾರಿಗೆ ವಿದೇಶಾಂಗ ಸಚಿವರಾಗಿ ಕಾರ್ಯನಿರ್ವ-ಹಿಸಿದ್ದರಲ್ಲದೆ, 21ನೇ ಏಪ್ರಿಲ್ 1997 ರಿಂದ 19ನೇ ಮಾರ್ಚ್ 1998ರವರೆಗೆ ರಾಷ್ಟ್ರದ ಪ್ರಧಾನಮಂತ್ರಿಯಾಗಿಯೂ ಸಹ ಗುಜ್ರಾಲ್‌ರವರು ಅತ್ಯಂತ ಜಾಣ್ಮೆ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರು.

ಅಜಾತಶತ್ರು, ಸೌಮ್ಯ ಸ್ವಭಾವದ ಐ.ಕೆ. ಗುಜ್ರಾಲ್ ಅವರ ನಿಧನ-ದಿಂದ ರಾಷ್ಟ್ರವು ಒಬ್ಬ ಪ್ರತಿಭಾವಂತ ರಾಜತಾಂತ್ರಿಕ ಆಡಳಿತಗಾರರನ್ನು ಕಳೆದುಕೊಂಡಂತಾಗಿದೆ.

ಐ.ಕೆ. ಗುಜ್ರಾಲ್ ಅವರು ದಿನಾಂಕ: 30.11.2012 ರಂದು ನಿಧನ ಹೊಂದಿರುತ್ತಾರೆ.

2. ಬಿ. ಮುನಿಯಪ್ಪ ಮುದ್ದಪ್ಪ

ಬಿ.ಮುನಿಯಪ್ಪ ಮುದ್ದಪ್ಪ ಅವರು ದಿನಾಂಕ: 01.06.1946 ರಲ್ಲಿ ಜನಿಸಿದ್ದು ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರಲ್ಲದೆ ಸಮಾಜ-ಸೇವಕರೂ ಸಹ ಆಗಿದ್ದರು. ತಾಲ್ಲೂಕು ಸಮಿತಿಯ ಅಧ್ಯಕ್ಷರಾಗಿ, ಜಿಲ್ಲಾ ಪಂಚಾಯತ್ ಸದಸ್ಯರಾಗಿ ದಿವಂಗತರು ಸೇವೆ ಸಲ್ಲಿಸಿದ್ದು, 1994ರಲ್ಲಿ ಹತ್ತನೇ ವಿಧಾನಸಭೆಗೆ ಸಿಲ್ಕಲ ಕ್ಷೇತ್ರದಿಂದ ಆಯ್ಕೆಗೊಂಡಿದ್ದರು. ದಿನಾಂಕ: 17.12.1994 ರಿಂದ 30.05.1996 ರವರೆಗೆ ಬೃಹತ್ ನೀರಾವರಿ ರಾಜ್ಯ ಸಚಿವರಾಗಿ 31.05.1996 ರಿಂದ 24.07.1999 ರವರೆಗೆ ಮುಜರಾಯಿ ಖಾತೆಯ ಸಚಿವರಾಗಿಯೂ ಸಹ ಕಾರ್ಯನಿರ್ವಹಿಸಿರುತ್ತಾರೆ.

ಬಿ. ಮುನಿಯಪ್ಪ ಮುದ್ದಪ್ಪ ಅವರು ದಿನಾಂಕ: 01.12.2012 ರಂದು ನಿಧನ ಹೊಂದಿರುತ್ತಾರೆ.

3. ಡಾ: ಹೆಚ್. ಪುಟ್ಟದಾಸ್

ಡಾ: ಹೆಚ್. ಪುಟ್ಟದಾಸ್ ಅವರು ದಿನಾಂಕ: 4ನೇ ಮಾರ್ಚ್ 1935 ರಂದು ಮಳವಳ್ಳಿ ತಾಲ್ಲೂಕು ಹೊಸಹಳ್ಳಿಯಲ್ಲಿ ಜನಿಸಿರುತ್ತಾರೆ. ಎಂ.ಬಿ.ಬಿ.ಎಸ್. ಪದವೀಧರರಾಗಿದ್ದ ದಿವಂಗತರು ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಡಾ: ಹೆಚ್. ಪುಟ್ಟದಾಸ್ ಅವರು 1967 ರಿಂದ 1977 ರವರೆಗೆ ಕ್ರಮವಾಗಿ ನಾಲ್ಕು ಮತ್ತು ಐದನೇ ವಿಧಾನಸಭೆಗೆ ಸಾತನೂರು ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಡಾ: ಹೆಚ್.ಪುಟ್ಟದಾಸ್ ಅವರು ದಿನಾಂಕ: 26.08.2012 ರಂದು ನಿಧಾನ ಹೊಂದಿರುತ್ತಾರೆ.

4. ಜಿ.ಜಿ. ಯಲ್ಲಿಗುತ್ತಿ

ಜಿ.ಜಿ. ಯಲ್ಲಿಗುತ್ತಿ ಅವರು 1947 ರಲ್ಲಿ ಬೀಳಗಿ ತಾಲ್ಲೂಕು ಕಂದಗ–ಲ್‌ನಲ್ಲಿ ಜನಿಸಿರುತ್ತಾರೆ. ದಿವಂಗತರು ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಜಿ.ಜಿ. ಯಲ್ಲಿಗುತ್ತಿ ಅವರು 1989 ರಲ್ಲಿ ಬೀಳಗಿ ಕ್ಷೇತ್ರದಿಂದ ಒಂಭತ್ತನೇ ವಿಧಾನಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ.

ಜಿ.ಜಿ. ಯಲ್ಲಿಗುತ್ತಿ ಅವರು ದಿನಾಂಕ: 30.08.2012 ರಂದು ನಿಧನ ಹೊಂದಿರುತ್ತಾರೆ.

5. ಬಿ.ಆರ್. ಧನಂಜಯ

ಬಿ.ಆರ್. ಧನಂಜಯ ಅವರು ದಿನಾಂಕ: 29.09.1939 ರಂದು ಜನಿಸಿದ್ದು, ಬಿ.ಎ. ಪದವೀಧರರಾಗಿರುತ್ತಾರೆ. ವೃತ್ತಿಯಲ್ಲಿ ಕೃಷಿಕರು ಮತ್ತು ಸಮಾಜಸೇವಕರಾಗಿದ್ದರು.

ಬಿ.ಆರ್. ಧನಂಜಯ ಅವರು 1967 ರಲ್ಲಿ ರಾಮನಗರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ.

ಬಿ.ಆರ್.ಧನಂಜಯ ಅವರು ದಿನಾಂಕ: 16.10.2012 ರಂದು ನಿಧನ ಹೊಂದಿರುತ್ತಾರೆ.

6. ಎಂ. ಶಂಕರರೆಡ್ಡಿ

ಎಂ. ಶಂಕರರೆಡ್ಡಿ ಅವರು ಬಳ್ಳಾರಿ ಜಿಲ್ಲೆ ಶಿರಗುಪ್ಪ ತಾಲ್ಲೂಕು ಬಿ.ಎಂ. ಸುಗರ್ ಎಂಬ ಗ್ರಾಮದಲ್ಲಿ 1937 ರಲ್ಲಿ ಜನಿಸಿರುತ್ತಾರೆ. ದಿವಂಗತರು ಬಿ.ಇ.ಕೋರ್ಸ್‌ನ್ನು ಮುಗಿಸಿ, ವೃತ್ತಿಯಲ್ಲಿ ಕೃಷಿಕರಾಗಿದ್ದರಲ್ಲದೆ ಶೈಕ್ಷಣಿಕ ಕ್ಷೇತ್ರ-ದ ಪ್ರಗತಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು.

ದಿವಂಗತರು ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಕಾರ್ಯನಿರ್ವ-ಹಿಸಿರುತ್ತಾರೆ.

ಎಂ. ಶಂಕರರೆಡ್ಡಿ ಅವರು 1983, 1989 ಮತ್ತು 1999ರಲ್ಲಿ ಶಿರಗುಪ್ಪ ಕ್ಷೇತ್ರದಿಂದ ಕ್ರಮವಾಗಿ ಏಳು, ಒಂಭತ್ತು ಮತ್ತು ಹನ್ನೊಂದನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಎಂ. ಶಂಕರರೆಡ್ಡಿ ಅವರು ದಿನಾಂಕ: 24.11.2012 ರಂದು ನಿಧನ ಹೊಂದಿರುತ್ತಾರೆ.

7. ಡಿ.ಬಿ.ಗಂಗಾಧರಪ್ಪ

ಡಿ.ಬಿ. ಗಂಗಾಧರಪ್ಪ ಅವರು ದಿನಾಂಕ: 1ನೇ ಜುಲೈ 1937 ರಂದು ಅರಸೀಕೆರೆಯಲ್ಲಿ ಜನಿಸಿರುತ್ತಾರೆ. ದಿವಂಗತರು ಸ್ನಾತಕೋತ್ತರ ಪದವೀಧರ-ರಾಗಿದ್ದು, ವೃತ್ತಿಯಲ್ಲಿ ಕೃಷಿಕರು ಮತ್ತು ಪ್ರವೃತ್ತಿಯಲ್ಲಿ ವ್ಯಾಪಾರಸ್ಥರಾಗಿದ್ದರು. ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಸಹಕಾರ ಸಂಘ ಸಂಸ್ಥೆಗಳ ಕಾರ್ಯದರ್ಶಿಗಳಾಗಿ, ಯಳಂದ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿ ಮತ್ತು ಹಲವಾರು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಡಿ.ಬಿ. ಗಂಗಾಧರಪ್ಪ ಅವರು 1978 ರಲ್ಲಿ ಅರಸೀಕೆರೆ ಕ್ಷೇತ್ರದಿಂದ ಆರನೇ ವಿಧಾನಸಭೆಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರಲ್ಲದೆ, 1985 ರಲ್ಲಿ ಪುನಃ ಅದೇ ಕ್ಷೇತ್ರದಿಂದ ಎಂಟನೇ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಡಿ.ಬಿ. ಗಂಗಾಧರಪ್ಪ ಅವರು ಉತ್ತಮ ಜನಪ್ರತಿನಿಧಿಯಾಗಿದ್ದರಲ್ಲದೆ ಗ್ರಾಮಾಂತರ ಪ್ರದೇಶದಲ್ಲಿ ಜನರು ಇವರನ್ನು ಗುರುಗಳೆ ಎಂದು ಪ್ರೀತಿಯಿಂ-ದ ಕರೆಯುತ್ತಿದ್ದರು.

ಡಿ.ಬಿ. ಗಂಗಾಧರಪ್ಪ ಅವರು ದಿನಾಂಕ: 03.12.2012 ರಂದು ನಿಧನ ಹೊಂದಿರುತ್ತಾರೆ.

8. ಡಾ: ಸಿ. ಬಂದೀಗೌಡ

ಡಾ:ಸಿ. ಬಂದೀಗೌಡ ಅವರು 1917ರಲ್ಲಿ ಶ್ರೀ ರಂಗಪಟ್ಟಣ ತಾಲ್ಲೂಕು ಶ್ರೀನಿವಾಸ ಅಗ್ರಹಾರದಲ್ಲಿ ಜನಿಸಿರುತ್ತಾರೆ. ದಿವಂಗತರು ಎಂ.ಬಿ.ಬಿ.ಎಸ್. ಪದವೀಧರರಾಗಿದ್ದು, ವೃತ್ತಿಯಲ್ಲಿ ವೈದ್ಯರು ಮತ್ತು ಪ್ರವೃತ್ತಿಯಲ್ಲಿ ಕೃಷಿಕ-ರಾಗಿದ್ದರು.

ದಿವಂಗತರು "ಕ್ವಿಟ್ ಇಂಡಿಯಾ" ಚಳುವಳಿಯಲ್ಲಿ ಭಾಗವಹಿಸಿ-ದ್ದರಲ್ಲದೆ ಸ್ವಾತಂತ್ರ್ಯ ಹೋರಾಟದಲ್ಲಿಯೂ ಸಹ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದರು. ಸುಮಾರು 52 ವರ್ಷಗಳ ಕಾಲ ವೈದ್ಯರಾಗಿ ಸೇವೆ ಸಲ್ಲಿಸಿರುವ ಬಂದೀಗೌಡರು 'ಒಂದಾಣೆ ಡಾಕ್ಟರ್' ಎಂದೇ ಹೆಸರುವಾಸಿಯಾಗಿದ್ದರು.

ಡಾ:ಸಿ. ಬಂದೀಗೌಡ ಅವರು 1945 ರಿಂದ 1950 ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸದಸ್ಯರಾಗಿದ್ದರು ಮತ್ತು 1964ರಲ್ಲಿ ಮೈಸೂರು ದಕ್ಷಿಣ-ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ.

ಡಾ:ಸಿ. ಬಂದೀಗೌಡ ಅವರು ದಿನಾಂಕ: 18.11.2012 ರಂದು ನಿಧನ ಹೊಂದಿರುತ್ತಾರೆ.

9. ವಿಲಾಸರಾವ್ ದೇಶಮುಖ್

ವಿಲಾಸರಾವ್ ದೇಶಮುಖ್ ಅವರು ದಿನಾಂಕ 26.05.1945 ರಂದು ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಬಾಭಲ್‌ಗಾಂವ್‌ನಲ್ಲಿ ಜನಿಸಿರುತ್ತಾರೆ. ಕಾನೂನು ಪದವೀಧರರಾಗಿದ್ದ ದಿವಂಗತರು ಕ್ರೀಡೆ ಮತ್ತು ಸಂಗೀತ ಕ್ಷೇತ್ರ-ದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದ್ದರು.

1974ರಲ್ಲಿ ಉಸ್ಮಾನಾಬಾದ್ ಜಿಲ್ಲಾ ಪಂಚಾಯತ್ ಸದಸ್ಯರಾಗುವ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದ ದಿವಂಗತರು 1980 ರಿಂದ 1995 ಮತ್ತು 1999 ರಿಂದ 2009ರ ಅವಧಿಯಲ್ಲಿ ಮಹಾರಾಷ್ಟ್ರ ವಿಧಾನ-ಸಭೆಗೆ ಸತತವಾಗಿ ಚುನಾಯಿತರಾಗಿ, ಗೃಹ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಕೈಗಾರಿಕೆ ಮತ್ತು ಲೋಕೋಪಯೋಗಿಯಂತಹ ಮಹತ್ವದ ಇಲಾಖೆಗಳ ಸಚಿವರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಿರುತ್ತಾರೆ.

ದಿವಂಗತರು 1999 ರಿಂದ 2003 ರವರೆಗೆ ಮತ್ತು 2008 ರಿಂದ 2009 ರವರೆಗೆ ಎರಡು ಬಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಲ್ಲದೆ 2011 ರಿಂದ 2012 ರವರೆಗೆ ಕೇಂದ್ರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ.

ವಿಲಾಸ್‌ರಾವ್ ದೇಶಮುಖ್ ಅವರು ದಿನಾಂಕ 14.08.2012 ರಂದು ನಿಧನ ಹೊಂದಿರುತ್ತಾರೆ.

10. ಕೆ. ಎಸ್. ಸುದರ್ಶನ್

ಕೆ.ಎಸ್. ಸುದರ್ಶನ್ ಅವರು 1931 ರಲ್ಲಿ ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು ಕುಪ್ಪಳ್ಳಿಯಲ್ಲಿ ಜನಿಸಿದ್ದರು. ಸರಳ ಸಜ್ಜನಿಕೆಯ ಮತ್ತು ಶಿಸ್ತುಬದ್ಧ ಜೀವನವನ್ನು ರೂಪಿಸಿಕೊಂಡಿದ್ದ ಅಪರೂಪದ ವ್ಯಕ್ತಿಯಾಗಿದ್ದ ಸುದರ್ಶನ್ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಾಮಾನ್ಯ ಸದಸ್ಯರಾಗಿದ್ದರಲ್ಲದೆ ಆರು ದಶಕಗಳ ಕಾಲ ಆರ್.ಎಸ್.ಎಸ್. ಪ್ರಚಾರಕರಾಗಿ-ದ್ದರು. 2000 ದಲ್ಲಿ ಸಂಘದ ಮುಖ್ಯಸ್ಥರಾಗಿಯೂ ಸಹ ಸೇವೆ ಸಲ್ಲಿಸಿದ್ದರು ಮತ್ತು ಸ್ವದೇಶಿ ಚಿಂತಕರಾಗಿದ್ದರು.

ಕೆ.ಎಸ್. ಸುದರ್ಶನ್ ಅವರು ದಿನಾಂಕ: 15.09.2012 ರಂದು ನಿಧನ ಹೊಂದಿರುತ್ತಾರೆ.

11. ಬಾಳಾಸಾಹೇಬ್ ಠಾಕ್ರೆ

ಬಾಳಾಸಾಹೇಬ್ ಠಾಕ್ರೆ ಅವರು ದಿನಾಂಕ 23.01.1926 ರಂದು ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿರುತ್ತಾರೆ. ಠಾಕ್ರೆ ಅವರು ಪ್ರತಿಭಾವಂತ

ಕಲಾವಿದರಾಗಿದ್ದರು. 1950 ರಲ್ಲಿ 'ಫ್ರೀಪ್ರೆಸ್ ಜರ್ನಲ್' ಪತ್ರಿಕೆಯಲ್ಲಿ ವ್ಯಂಗಚಿತ್ರಕನಾಗಿ ವೃತ್ತಿ ಜೀವನ ಆರಂಭಿಸಿದ್ದರು. ಮರಾಠಿಗರ ಹಿತಾಸಕ್ತಿಗಾಗಿ 1966ರಲ್ಲಿ ವೃತ್ತಿಯಿದ ಹೊರಬಂದು 'ಮಾರ್ಮಿಕ್' ಎಂಬ ರಾಜಕೀಯ ವಾರ ಪತ್ರಿಕೆಯನ್ನು ಪ್ರಾರಂಭಿಸಿದ್ದರು. 1966 ರಲ್ಲಿ ಶಿವಸೇನೆ ಎಂಬ ರಾಜಕೀಯ ಪಕ್ಷವನ್ನು ಸ್ಥಾಪಿಸಿ ಅದರ ಸರ್ವೋಚ್ಛ ನಾಯಕರಾಗಿ ಬದುಕಿ-ರುವವರೆಗೆ ಕಾರ್ಯನಿರ್ವಹಿಸಿರುತ್ತಾರೆ. ಅಲ್ಲದೆ 1989 ರಲ್ಲಿ ಶಿವಸೇನಾ ಮುಖವಾಣಿ 'ಸಾಮ್ನಾ' ಪತ್ರಿಕೆಯನ್ನು ಪ್ರಾರಂಭಿಸಿದ್ದರು ಮತ್ತು ಕಾಲಕಾಲಕ್ಕೆ ತಮ್ಮ ವಿಚಾರಧಾರೆಯ ನಿಷ್ಠೂರ ನುಡಿಗಳ ಲೇಖನಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಬಾಳಾಸಾಹೇಬ ಠಾಕ್ರೆ ಅವರು ಮಹಾರಾಷ್ಟ್ರದ ಹುಲಿ ಎಂದೇ ಜನಜನಿತರಾಗಿದ್ದರು.

ಬಾಳಾಸಾಹೇಬ ಠಾಕ್ರೆ ಅವರು ದಿನಾಂಕ 17.11.2012 ರಂದು ನಿಧನ ಹೊಂದಿರುತ್ತಾರೆ.

12. ಡಾ: ವರ್ಗೀಸ್ ಕುರಿಯನ್

ಡಾ: ವರ್ಗೀಸ್ ಕುರಿಯನ್ ಅವರು ದಿನಾಂಕ 26.11.1921 ರಂದು ಕೇರಳದ ಕೋಯಿಕೋಡ್‌ನಲ್ಲಿ ಜನಿಸಿದ್ದರು. 1940 ರಲ್ಲಿ ಲೋಯಲಾ ಕಾಲೇಜಿನಿಂದ ಪದವಿಯನ್ನು ಪಡೆದುಕೊಂಡಿದ್ದು, 1948 ಅಮೇರಿಕಾ ಮಿಚಿಗನ್ ಸ್ಟೇಟ್ ವಿಶ್ವವಿದ್ಯಾಲಯದಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿಯನ್ನು ಪಡೆದಿದ್ದರು.

1949 ರಲ್ಲಿ ಗುಜರಾತ್‌ನ ಆನಂದ ಸರ್ಕಾರಿ ಕೆನೆ ಘಟಕಕ್ಕೆ ಸೇರ್ಪಡೆಗೊಳ್ಳುವುದರ ಮೂಲಕ ವೃತ್ತಿಯನ್ನು ಆರಂಭಿಸಿ 'ಕ್ಷಿಪ್ರ ಕ್ಷೀರ ಕ್ರಾಂತಿ'ಯ ಭಾಷ್ಯ ಬರೆದ ವರ್ಗೀಸ್‌ರವರು ಕ್ಷೀರ ಕ್ರಾಂತಿಯ ಹರಿಕಾರ ಎನಿಸಿಕೊಂಡಿದ್ದರು.

ಡಾ: ಕುರಿಯನ್‌ರವರಿಗೆ ವಿಶ್ವ ಆಹಾರ ಪ್ರಶಸ್ತಿ, ಪದ್ಮಶ್ರೀ, ಪದ್ಮ ಭೂಷಣ ಮತ್ತು ಪದ್ಮ ವಿಭೂಷಣದಂತಹ ಅತ್ಯುನ್ನತ ಪ್ರಶಸ್ತಿಗಳು ಅರಸಿ ಬಂದಿದ್ದವು.

ಡಾ: ವರ್ಗೀಸ್ ಕುರಿಯನ್ ಅವರು ದಿನಾಂಕ 09.09.2012 ರಂದು ನಿಧನ ಹೊಂದಿರುತ್ತಾರೆ.

13. ವಿ.ಎನ್. ಸುಬ್ಬರಾವ್

ವಿ.ಎನ್.ಸುಬ್ಬರಾವ್ ಅವರು ಮೂಲತಃ ಬೆಂಗಳೂರಿನವರಾಗಿದ್ದರು. ಬಿ.ಎ. ಆನರ್ಸ್ ಪದವೀಧರರಾಗಿದ್ದ ದಿವಂಗತರು 'ಛಾಯಾಲೋಕ' ಪತ್ರಿಕೆ–ಯಲ್ಲಿ ಪತ್ರಕರ್ತರಾಗಿ ಸೇರ್ಪಡೆಗೊಳ್ಳುವುದರ ಮೂಲಕ ಕನ್ನಡ ಪತ್ರಿಕೋದ್ಯಮದಲ್ಲಿ ವೃತ್ತಿಯನ್ನಾರಂಭಿಸಿದ್ದರು. ನಂತರ ಪ್ರಖ್ಯಾತ ಇಂಗ್ಲೀಷ ಪತ್ರಿಕೆ 'ಸ್ಕ್ರೀನ್' ನಲ್ಲಿ ಕನ್ನಡದ ಪ್ರತಿನಿಧಿಯಾಗಿ ಮುಂಬೈಯಲ್ಲಿ ಕಾರ್ಯ–ನಿರ್ವಹಿಸಿದ್ದರು. ನಂತರ ಇಂಡಿಯನ್ ಎಕ್ಸ್‌ಪ್ರೆಸ್, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದರಲ್ಲದೆ, 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿಯೂ ಸಹ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಕರ್ನಾಟಕದ ಪತ್ರಿಕೋದ್ಯಮದಲ್ಲಿನ ಹಲವಾರು ಘಟನೆಗಳ ವಿಶಿಷ್ಟ ರೂಪದ ವರದಿ ವಿಶ್ಲೇಷಣೆಯ ಮೂಲಕ ಬಹುಮುಖ ಪ್ರತಿಭೆಯ ವ್ಯಕ್ತಿ ಎನಿಸಿಕೊಂಡಿದ್ದ ಶ್ರೀಯುತರು ಬಹುಜನ ಮಿತ್ರ ಎನ್ನುವಂತಹ ವ್ಯಕ್ತಿಯಾಗಿದ್ದರು.

'ಮೇನಕಾ ಚಲನಚಿತ್ರ ಪತ್ರಿಕೆ'ಯನ್ನು ಆರಂಭಿಸಿ ಆ ಮೂಲಕ ಪತ್ರಿಕಾ ವರದಿಗಾರಿಕೆಗೆ ಮೇರು ಪರ್ವತರಾಗಿ ಗುರುತಿಸಿಕೊಂಡಿದ್ದರು. ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು ವರದಿಗಾರರ ಕೂಟ, ಕರ್ನಾಟಕ ಚಲನಚಿತ್ರ ಪರ್ತಕರ್ತರ ಪರಿಷತ್ತು ಮತ್ತು ಕನ್ನಡ ಚಲನಚಿತ್ರ ಪತ್ರಕರ್ತರ ವೇದಿಕೆ5ಗಳಲ್ಲಿಯೂ ಸಹ ದಿವಂಗತರು ಕಾರ್ಯನಿರ್ವಹಿಸಿದ್ದರು.

ಶ್ರೀಯುತರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯು ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿರುತ್ತವೆ.

ವಿ.ಎನ್. ಸುಬ್ಬರಾವ್ ಅವರು 09.10.2012 ರಂದು ನಿಧನ ಹೊಂದಿರುತ್ತಾರೆ.

14. ಡಾ: ಅನಿಲ್ ಬಾಬುರಾವ್ ಕಮತಿ

ಡಾ: ಅನಿಲ್ ಬಾಬುರಾವ್ ಕಮತಿ ಅವರು 1954 ರಲ್ಲಿ ಜನಿಸಿದ್ದು, ಖ್ಯಾತ ವೈದ್ಯರಾಗಿದ್ದರಲ್ಲದೆ, ಸಾಹಿತಿಯಾಗಿ ಮತ್ತು ಕನ್ನಡ ನಾಡು ನುಡಿಗಾಗಿ ಶ್ರಮಿಸಿದವರಾಗಿರುತ್ತಾರೆ. ಬೆಳಗಾವಿ ಗಡಿ ಭಾಗದ ಕನ್ನಡಿಗರ ಮತ್ತು ಕನ್ನಡ ಭಾಷೆಯ ಹಿತಚಿಂತಕರ ಬಗ್ಗೆ ಅಪಾರ ಗೌರವ ಭಾವನೆಯನ್ನು ಹೊಂದಿದ--ವರಾಗಿದ್ದರು.

ದಿವಂಗತರು ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದರು.

ಡಾ: ಅನಿಲ್ ಬಾಬುರಾವ್ ಕಮತಿ ಅವರು ದಿನಾಂಕ 03.12.2012 ರಂದು ನಿಧನ ಹೊಂದಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್, ಮಾನ್ಯ ಮುಖ್ಯಮಂತ್ರಿಗಳು:- ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ವಿಧಾನಸಭಾ ಅಧಿವೇಶನದ ನಂತರ ಇಲ್ಲಿಯವರೆಗೆ ಹಲವಾರು ಗಣ್ಯ ಮಹನೀಯರು ನಮ್ಮನ್ನು ಅಗಲಿದ್ದಾರೆ. ಅವರ ಗೌರವಾರ್ಥ-ವಾಗಿ ತಾವೇನು ಸಂತಾಪ ಸೂಚನಾ ನಿರ್ಣಯವನ್ನು ಮಂಡನೆ ಮಾಡಿದ್ದೀರಿ ಅದಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಪ್ರಮುಖವಾಗಿ ಈ ದೇಶದ ಪ್ರಧಾನ ಮಂತ್ರಿಯಾಗಿ ಕಾರ್ಯನಿರ್ವಹಣೆ ಮಾಡಿದಂತಹ ಮಾನ್ಯ ಐ.ಕೆ.ಗುಜ್ರಾಲ್ ರವರು ಒಬ್ಬ ಸಜ್ಜನ ರಾಜಕಾರಣಿ ಮತ್ತು ವೈಚಾರಿಕ ಹಿನ್ನೆಲೆಯಲ್ಲಿ ಬೆಳೆದು ಬಂದಂತಹ ವ್ಯಕ್ತಿ ಯಾಗಿದ್ದರು. ವಿದ್ಯಾರ್ಥಿ ದಿಸೆಯಿಂದಲೂ ಸಹ ಅವರು ಒಬ್ಬ ಹೋರಾಟಗಾರರಾಗಿ ಬೆಳೆದು ಬಂದಂತಹ ವ್ಯಕ್ತಿ. ಎಡಪಂಕ್ತಿಯ ಚಿಂತನೆಗಳಿಗೆ ಹೆಚ್ಚು ಒಲವಿದ್ದ ವ್ಯಕ್ತಿ. ವಿದ್ಯಾರ್ಥಿ ದಿಸೆಯಿಂದಲೇ ಅವರು ಆ ವಿಚಾರ ಧಾರೆಗಳಿಗೆ ಪ್ರಭಾವಿತರಾಗಿ ಹಲವಾರು ಹೋರಾಟಗಳಲ್ಲಿ ಭಾಗವಹಿಸಿದ್ದು ನಮಗೆಲ್ಲಾ ಗೊತ್ತಿದೆ. ಅದರಲ್ಲಿ ಕೆಳ ಹಂತದ ಜನ ಪ್ರತಿನಿಧಿಯಾಗಿ ದೆಹಲಿ ನಗರಸಭೆಯ ಉಪಾಧ್ಯಕ್ಷರಾಗಿ, ರಾಜ್ಯಸಭೆ ಹಾಗೂ ಲೋಕಸಭೆಯ ಸದಸ್ಯರಾಗಿ ಕೆಲಸ ನಿರ್ವಹಿಸಿದ ಅವರು ಕೇಂದ್ರಸರ್ಕಾರದಲ್ಲಿ ಬಹಳ ಮುಖ್ಯವಾದ ಇಲಾಖೆಗಳಲ್ಲಿ ಸಚಿವರಾಗಿ ಕೆಲಸ ಮಾಡಿದವರು.

ಅದರಲ್ಲಿ ಸಂಸದೀಯ ವ್ಯವಹಾರ, ದೂರಸಂಪರ್ಕ, ವಸತಿ, ವಾರ್ತಾ ಪ್ರಸಾರ ಹಾಗೂ ವಿದೇಶಾಂಗ ಖಾತೆ ಇಲಾಖೆಯ ಸಚಿವರಾಗಿ ಬಹಳ ಅತ್ಯುತ್ತಮವಾಗಿ ಕೆಲಸ ಮಾಡಿದವರು ಮಾನ್ಯ ಐ.ಕೆ.ಗುಜ್ರಾಲ್‌ರವರು. ಅಷ್ಟೇ ಅಲ್ಲದೆ ಇದಕ್ಕೆ ಮುಂಚೆ ರಷ್ಯಾದ ರಾಯಭಾರಿಯಾಗಿಯೂ ಕೂಡ ಕೆಲಸ ಮಾಡಿದ್ದರು. ಬಹಳ ಮುಖ್ಯವಾಗಿ ವಿದೇಶಾಂಗ ವ್ಯವಹಾರ ಸಚಿವರಾಗಿದ್ದ ಸಂದರ್ಭದಲ್ಲಿ ಅದಕ್ಕೆ ಹೆಚ್ಚು ಒತ್ತನ್ನು ಕೊಟ್ಟರು. ಅತ್ಯಂತ ಯಶಸ್ವಿ ವಿದೇಶಾಂಗ ಸಚಿವರಾಗಿ ಕೆಲಸ ನಿರ್ವಹಣೆ ಮಾಡಿ, ಬಹುಶಃ ಆ ಒಂದು ವಿದೇಶಾಂಗ ನೀತಿಗೆ ಹೆಚ್ಚು ರೂಪವನ್ನು ಕೊಟ್ಟು, ವೈಶಿಷ್ಟವನ್ನು ತಂದು-ಕೊಟ್ಟವರು ಮಾನ್ಯ ಐ.ಕೆ ಗುಜ್ರಾಲ್ ರವರು. ಇದಕ್ಕೆ ಇಂದು ಜನ **'ಗುಜ್ರಾಲ್ ಸಿದ್ಧಾಂತ'** ಎಂದು ಮಾತನಾಡುತ್ತಾರೆ. ತಮ್ಮ ಛಾಪನ್ನು ಆ ಸಂದರ್ಭದಲ್ಲಿ ಮೂಡಿಸಿದ್ದರೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮತ್ತು ಇವರು 1997-98ನೇ ಸಾಲಿನಲ್ಲಿ ಕೆಲವೇ ತಿಂಗಳುಗಳ ಅವಧಿಯಲ್ಲಿ ಈ ದೇಶದ ಪ್ರಧಾನ ಮಂತ್ರಿಯಾಗಿದ್ದ ಇವರು ಅವತ್ತಿನ ಒಂದು ರಾಜಕೀಯ ಸೂಕ್ಷ್ಮತೆಯ ಸಂಕೀರ್ಣತೆಯಿದ್ದಂತಹ ಸಂದರ್ಭದಲ್ಲಿ ಉತ್ತಮ ಪ್ರಧಾನ ಮಂತ್ರಿಯಾಗಿ ಕಾರ್ಯನಿರ್ವಹಣೆ ಮಾಡಿದ್ದರು. ಉತ್ತಮ ಆಡಳಿತವನ್ನು ಕೂಡ ನಡೆಸಿದರು. ಹೀಗಾಗಿ ಆ ಒಂದು ಅವಧಿಯಲ್ಲಿ ಇವರು ಜನಮಾನಸದಲ್ಲಿ ಬಹಳ ಒಳ್ಳೆಯ ವ್ಯಕ್ತಿ, ಒಳ್ಳೆಯ ಪ್ರಧಾನ ಮಂತ್ರಿ ಎಂಬ ಹೆಸರನ್ನು ಸಹ ಉಳಿಸಿಕೊಂಡಿದ್ದರು. ಅದೇ ರೀತಿ ಇವರು ವಿದೇಶಾಂಗ ಸಚಿವರಾಗಿ ಮತ್ತು ಪ್ರಧಾನ ಮಂತ್ರಿಯಾಗಿದ್ದಾಗ ಪಾಕಿಸ್ತಾನ ರಾಷ್ಟ್ರದ ಜೊತೆ ಒ ಒಳ್ಳೆಯ ರಾಜತಾಂತ್ರಿಕ ಸಂಬಂಧವನ್ನು ಇಟ್ಟುಕೊಂಡು ಆ ಸಂಬಂಧವನ್ನು ಹೆಚ್ಚು ಬಲಯುತಗೊಳಿಸುವಂತಹ ಕೆಲಸವನ್ನು ಮಾಡಿದ್ದರು. ಇವರು ಬಹಳ ಸೌಮ್ಯ ಸ್ವಭಾವ ಹಾಗೂ ಮುತ್ಸದ್ಧಿ ರಾಜಕಾರಣಿ ಹೀಗಾಗಿ ಇವರು ಇವತ್ತು ನಮ್ಮ ರಾಜಕಾರಣಿಗಳಿಗೆ ಆದರ್ಶಪ್ರಾಯವಾದಂತಹ ವ್ಯಕ್ತಿ.

ಇಂತಹ ವ್ಯಕ್ತಿ ಇವತ್ತು ನಮ್ಮ ಮಧ್ಯದಲ್ಲಿಲ್ಲ. ಒಬ್ಬ ಅತ್ಯುತ್ತಮವಾದ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಭಗವಂತ ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ಮತ್ತು ಅವರ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಆ ದೇವರು ಕೊಡಲೆಂದು ನಾನು ಪ್ರಾರ್ಥಿಸುತ್ತೇನೆ.

ಮತ್ತು ಇನ್ನಿತರ ಮಹನೀಯರಲ್ಲಿ ಒಬ್ಬರಾದ ಮಾನ್ಯ ಬಿ.ಮುನಿಯಪ್ಪ ಮುದ್ದಪ್ಪ ಅವರು ಶಾಸಕರಾಗಿ, ಸಚಿವರಾಗಿ ಕೆಲಸ ಮಾಡಿದಂತಹ ವ್ಯಕ್ತಿ. ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಅವರು ಕೆಳಹಂತದ ಜನ ಪ್ರತಿನಿಧಿಯಾಗಿದ್ದರು. ಜಿಲ್ಲಾಪಂಚಾಯತ್ ಸದಸ್ಯರಾಗಿ ಮತ್ತು ವಿಧಾನ-ಸಭೆಯ ಸದಸ್ಯರಾಗಿ ಕೆಲಸ ಮಾಡಿದವರು. ಇವರು ರಾಜ್ಯದ ಬೃಹತ್ ನೀರಾವರಿ ಹಾಗೂ ಮುಜರಾಯಿ ಖಾತೆಯ ಸಚಿವರಾಗಿಯೂ ಸಹ ಕಾರ್ಯ-ನಿರ್ವಹಿಸಿದ್ದಾರೆ. ಇವರದು ಬಹಳ ಸರಳ ವ್ಯಕ್ತಿತ್ವ. ನಾವೆಲ್ಲಾ ಶಾಸಕರಾಗಿದ್ದಾಗ ಇವರನ್ನು ಬಹಳ ಹತ್ತಿರದಿಂದ ನೋಡಿದ್ದೇವೆ. ಎಲ್ಲರ ಜೊತೆಯಲ್ಲೂ ಬಹಳ ಆತ್ಮೀಯ ಸಂಬಂಧ ಇಟ್ಟುಕೊಂಡಿದ್ದರು. ಯಾವುದೇ ಪಕ್ಷ ಪಂಗಡವಿಲ್ಲದೆ ಎಲ್ಲಾ ಶಾಸಕರ ಜೊತೆ ಒಳ್ಳೆಯ ಸ್ನೇಹಪರತೆಯನ್ನು ಇಟ್ಟುಕೊಂಡಿದ್ದವರು. ಆ ರೀತಿಯಾದ ಸರಳ ಸ್ನೇಹಜೀವಿ ವ್ಯಕ್ತಿತ್ವ ಹೊಂದಿದ್ದ ಮಾನ್ಯ ಬಿ.ಮುನಿಯಪ್ಪ ಮುದ್ದಪ್ಪ ರವರು ಇಂದು ನಮ್ಮೊಂದಿಗಿಲ್ಲ.

ಡಾ:ಹೆಚ್.ಪುಟ್ಟದಾಸ್ ಅವರೊಬ್ಬ ಸ್ನೇಹಪರ ಸಮಾಜಮುಖಿ ರಾಜ-ಕಾರಣಿ ಹಾಗೂ ಒಬ್ಬ ಸೌಮ್ಯ ಸ್ವಭಾವದ ವ್ಯಕ್ತಿ. ಇವರು ನಾಲ್ಕು ಮತ್ತು ಐದನೇ ವಿಧಾನಸಭೆಗೆ ಸಾತನೂರು ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಇವರು ಕೂಡ ಇಂದು ನಮ್ಮನ್ನು ಅಗಲಿದ್ದಾರೆ. ಇನ್ನೊಬ್ಬ ಪ್ರಮುಖರಾದ ಶ್ರೀ ಜಿ.ಜಿ.ಯಲ್ಲಿಗುತ್ತಿಯವರು ಬೀಳಗಿ ತಾಲ್ಲೂಕಿನವರು ಇವರು ಒಂದು ಬಾರಿ

ಶಾಸಕರಾಗಿ 1989 ರಲ್ಲಿ ಆಯ್ಕೆಯಾಗಿದ್ದರು. ಇವರೊಬ್ಬ ಸಜ್ಜನ ರಾಜಕಾರಣಿ-ಯಾಗಿದ್ದು, ಆ ಭಾಗದ ಹಾಗೂ ರೈತರ ಸಮಸ್ಯೆಗಳ ಬಗ್ಗೆ ಅದು ವಿಧಾನಸಭೆ-ಯಲ್ಲಿರಬಹುದು ಅಥವಾ ಜನಪರವಾದ ಹೋರಾಟವಿರಬಹುದು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ ವ್ಯಕ್ತಿಯಾದ ಇವರು ಇಂದು ನಮ್ಮೊದಿಗಿಲ್ಲ.

ಮಾಜಿ ಶಾಸಕರಾದ ಶ್ರೀ ಬಿ.ಆರ್.ಧನಂಜಯರವರು ಇವರು ಬಿ.ಎ ಪದವೀಧರರಾಗಿದ್ದು, ಕೃಷಿಕರಾಗಿದ್ದರು ಮತ್ತು ಸಮಾಜಕ್ಕೆ ತಮ್ಮ ಸೇವೆಯನ್ನು ಯಾವಾಗಲೂ ಮುಡುಪಾಗಿಟ್ಟಿದ್ದ ಇವರೊಬ್ಬ ಉತ್ತಮ ರಾಜಕಾರಣಿಯಾಗಿ ಬೆಳೆದು ಬಂದ ವ್ಯಕ್ತಿ. ಮತ್ತೊಬ್ಬರು ಬಳ್ಳಾರಿ ಜಿಲ್ಲೆಯ ಶ್ರೀ ಎಂ.ಶಂಕ-ರರೆಡ್ಡಿಯವರು ಕೃಷಿಕರು ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಬಹಳಷ್ಟು ಆಸಕ್ತಿಯನ್ನು ಇಟ್ಟುಕೊಂಡು ಕೆಲಸ ಮಾಡಿದಂತಹ ವ್ಯಕ್ತಿ. ಇವರು ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ ಮಾಡಿದಂತಹವರು. ಅವರು ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು, ಅತ್ಯಂತ ಜನಪ್ರಿಯ ವ್ಯಕ್ತಿಯಾಗಿ ಮತ್ತು ಜನಪ್ರಿಯ ನಾಯಕರಾಗಿ ಆ ಭಾಗದ ಅಭಿವೃದ್ಧಿಗೆ ಹೆಚ್ಚು ಒತ್ತನ್ನು ಕೊಟ್ಟರು ಎಂಬ ಮಾತನ್ನು ಈ ಸಂದರ್ಭದಲ್ಲಿ ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಇನ್ನೊಬ್ಬ ವ್ಯಕ್ತಿ ಮಾಜಿ ಶಾಸಕರರಾದ ಶ್ರೀ ಡಿ.ಬಿ.ಗಂಗಾಧರಪ್ಪ ಅವರು ಸಹ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ ಸಹಕಾರಿ ಸಂಘ ಸಂಸ್ಥೆಗಳ ಕಾರ್ಯದರ್ಶಿಯಾಗಿ, ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷರಾಗಿ, ಹಲವಾರು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳ ಜೊತೆ ನಿಕಟ ಸಂಬಂಧವನ್ನು ಹೊಂದಿ ಮುಖ್ಯಸ್ಥರಾಗಿ ಶಿಕ್ಷಣ ಸಂಸ್ಥೆಗಳನ್ನು ಬೆಳೆಸುವುದಕ್ಕೆ ಬಹಳ ಪ್ರಮುಖವಾದ ಪಾತ್ರವನ್ನು ಮಾನ್ಯ ಡಿ.ಬಿ.ಗಂಗಾಧರಪ್ಪನವರು ವಹಿಸಿದ್ದರು ಮತ್ತು ಆ ನಿಟ್ಟಿನಲ್ಲಿ ಕೆಲಸಗಳನ್ನು ಮಾಡಿದ್ದರು. ಅವರು ಅರಸೀಕೆರೆ

ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಒಬ್ಬ ಉತ್ತಮ ಜನಪ್ರತಿನಿಧಿಯಾಗಿ ಯಾವ ಕೆಲಸಗಳನ್ನು ಯಾವ ರೀತಿ ಮಾಡಬೇಕೆಂದು ತೋರಿಸಿಕೊಟ್ಟಂತಹವರು. ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಜನಪ್ರಿಯತೆಯನ್ನು ಹೊಂದಿದ್ದರು. ಜನಸಾಮಾನ್ಯರು ಇವರನ್ನು ಬಹಳ ಆತ್ಮೀಯದಿಂದ ಪ್ರೀತಿಯಿಂದ "ಗುರುಗಳೇ" ಎಂದು ಕರೆಯುತ್ತಿದ್ದರು. ಆ ರೀತಿ ಜನ ಪ್ರೀತಿಯನ್ನು ಇವರು ಇಟ್ಟುಕೊಂಡಿದ್ದರು.

ಮತ್ತೊಬ್ಬರು ಡಾ:ಸಿ. ಬಂದೀಗೌಡರು ಇವರು ಎಂ.ಬಿ.ಬಿ.ಎಸ್ ಪದವೀಧರರಾಗಿದ್ದು, ವೈದ್ಯರಾಗಿದ್ದರು. ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಬಹಳ ಜನಪ್ರಿಯ ಡಾಕ್ಟರ್‌ರಾಗಿ ಕೆಲಸ ಮಾಡಿದಂತಹವರು. ಹೀಗಾಗಿ ಬಡವರಿಗೆ ಬಹಳ ಆತ್ಮೀಯರಾಗಿದ್ದರು ಇವರಿಗೆ 'ಒಂದಾಣೆ ಡಾಕ್ಟರ್' ಎಂಬ ಹೆಸರಿತ್ತು. ಆ ರೀತಿಯಾಗಿ ಇವರು ಜನಸಾಮಾನ್ಯರಲ್ಲಿ ಹಾಗೂ ಬಡವರಲ್ಲಿ ಜನಪ್ರಿಯವಾದಂತಹ ವ್ಯಕ್ತಿ. **'ಕ್ವಿಟ್ ಇಂಡಿಯಾ ಚಳುವಳಿ'** ಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಕೂಡ ಅನುಭವಿಸಿದ್ದರು. ಅಂತಹ ವ್ಯಕ್ತಿ ೧೯೪೫ ರಿಂದ ೧೯೫೦ನೇ ಇಸವಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸದಸ್ಯರಾಗಿದ್ದರು ಮತ್ತು ೧೯೬೪ ನೇ ಇಸವಿಯಲ್ಲಿ ಶಿಕ್ಷಕ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದರು. ಇವರು ನಮ್ಮ ಮಧ್ಯದಲ್ಲಿದ್ದು ಸಾಕಷ್ಟು ಕೆಲಸ ಮಾಡಿದಂತಹವರು, ಬಹಳ ಜನಪ್ರಿಯವಾದ ವ್ಯಕ್ತಿ.

ಮತ್ತೊಬ್ಬ ವ್ಯಕ್ತಿ ಮಾನ್ಯ ವಿಲಾಸ್‌ರಾವ್ ದೇಶಮುಖ್‌ರವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿ ಹಾಗೂ ಕೇಂದ್ರದಲ್ಲಿ ಸಚಿವರಾಗಿ ಕೆಲಸ ಮಾಡಿದಂತಹವರು. ಮತ್ತೊಂದು ಪ್ರಮುಖವಾದ ವಿಷಯವನ್ನು ಇವರ ಬಗ್ಗೆ ಹೇಳಬೇಕೆಂದರೆ ಅವರು ಜಿಲ್ಲಾಪಂಚಾಯಿತಿಯ ಸದಸ್ಯರಾಗಿ ಮತ್ತು

ಅಧ್ಯಕ್ಷರಾಗಿ ಕೆಳಹಂತದ ರಾಜಕೀಯ ಅಖಾಡದಲ್ಲಿ ಬೆಳೆದುಬಂದು ರಾಜ್ಯದ ಮುಖ್ಯಮಂತ್ರಿಯಾಗಿ ಮತ್ತು ಕೇಂದ್ರದ ಸಚಿವರಾಗಿ ಕೆಲಸ ಮಾಡಿದಂತಹ ವ್ಯಕ್ತಿ.

ನಾನು ಗ್ರಾಮೀಣಾಭಿವೃದ್ಧಿ ಇಲಾಖೆಯ ಸಚಿವನಾಗಿದ್ದಾಗ ಹಲವಾ-ರು ರಾಜ್ಯದ ಬೇಡಿಕೆಗಳನ್ನು ಇಟ್ಟುಕೊಂಡು 3–4 ಬಾರಿ ಮಾನ್ಯ ವಿಲಾಸ್‌ರಾವ್ ದೇಶ್‌ಮುಖ್ ಅವರನ್ನು ಭೇಟಿಯಾಗಿದ್ದೆ. ಯಾವುದೇ ಸಂದರ್ಭದಲ್ಲಿಯೂ ಅವರು ಭೇಟಿ ಮಾಡುವುದಕ್ಕೆ ಹೋದಾಗ ಬಹಳ ಒಳ್ಳೆಯ ರೀತಿಯಲ್ಲಿ response ಮಾಡುತ್ತಿದ್ದರು. ಜನಪ್ರತಿನಿಧಿಗಳಿರಬಹುದು, ಬೇರೆ ರಾಜ್ಯದ ಮುಖ್ಯಮಂತ್ರಿಗಳಿರಬಹುದು, ಮಂತ್ರಿಗಳಿರಬಹುದು ಅವರೆಲ್ಲ-ರೂ ಅವರ ಜೊತೆ ಬಹಳ ಆತ್ಮೀಯವಾದ ಸಂಬಂಧವನ್ನು ಇಟ್ಟುಕೊಂಡಿ-ದ್ದರು. ಯಾವುದೇ ಸಮಸ್ಯೆಗಳನ್ನು ಹೇಳಿದಾಗ ಈ ಸಮಸ್ಯೆ ನಮ್ಮ ರಾಜ್ಯದಲ್ಲಿಯೂ ಇದೆ. ಎಂದು ಹೇಳಿ ಸ್ಪಂದಿಸುವ ರೀತಿಯಲ್ಲಿ ಉತ್ತರ ನೀಡುತ್ತಿದ್ದರು. ಈ ರೀತಿಯ ಒಂದು ವ್ಯಕ್ತಿತ್ವ ಮಾನ್ಯ ವಿಲಾಸ್‌ರಾವ್ ದೇಶ್‌ಮುಖ್ ಅವರದು. ಹೀಗಾಗಿ ಮಹಾರಾಷ್ಟ್ರದಲ್ಲಿ ಅತ್ಯಂತ ಜನಪ್ರಿಯ-ವಾಗಿ, ಕೇಂದ್ರದಲ್ಲಿ ಯಾವುದೇ ಒಂದು ಇಲಾಖೆಯನ್ನು ನೀಡಿದಾಗಲೂ ಸಹ ಉತ್ತಮವಾದ ಕಾರ್ಯನಿರ್ವಹಣೆಯನ್ನು ಮಾಡಿದಂತಹ ವ್ಯಕ್ತಿ. ವಿಲಾಸ್-ರಾವ್ ದೇಶ್‌ಮುಖ್ ಅವರು. ಅವರು ಇಂದು ನಮ್ಮ ಮಧ್ಯದಲ್ಲಿಲ್ಲ. ಅವರ ಆತ್ಮಕ್ಕೂ ಭಗವಂತ ಶಾಂತಿಯನ್ನು ನೀಡಲೆಂದು ಕೋರುತ್ತಿದ್ದೇನೆ.

ಮತ್ತೊಬ್ಬ ಹಿರಿಯರಾದ, ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಪ್ರಮುಖರಾದ ಕೆ.ಎಸ್.ಸುದರ್ಶನ್ ಅವರು ಇಂದು ನಮ್ಮ ಮಧ್ಯದಲ್ಲಿಲ್ಲ. ಸುದರ್ಶನ್ ಅವರು ನಮ್ಮ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನವರು. ಇಲ್ಲೇ ಹುಟ್ಟಿ ಬೆಳೆದಂತಹ ವ್ಯಕ್ತಿ. ಅವರ ಒಂದು ಹಿರಿತನದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಘ ಹೆಚ್ಚು ಸಂಘಟಿತವಾಗಿ, ಶಕ್ತಿ ಶಾಲಿಯಾಗಿ ಬೆಳೆದು ಬಂದಿದೆ ಎನ್ನುವುದು ನಮಗೆಲ್ಲಾ ಇಂದಿಗೂ ಗೊತ್ತಿದೆ. ಅಂತಹ ಸುದರ್ಶನ್ ಅವರು ಎಲ್ಲರಿಗೂ ಮಾರ್ಗದರ್ಶಕರಾಗಿದ್ದರು. ಅವರ ವಿಚಾರಗಳಿಂದ ನಮ್ಮೆಲ್ಲರಿಗೂ ಹೆಚ್ಚಿನ ಒಂದು ಜಾಗೃತಿಯನ್ನು ಮಾಡಿದ್ದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇತ್ತೀಚೆಗೆ ನಿಧನರಾದಂತಹ ಪ್ರಮುಖರಾದ ವ್ಯಕ್ತಿ ಬಾಳಾಸಾಹೇಬ್ ಠಾಕ್ರೆ ಅವರು. ಶಿವಸೇನೆಯ ಪ್ರಮುಖರು ಹಾಗೂ ತಮ್ಮ ವಿಚಾರಧಾರೆಗಳಿಗೆ ಹೆಚ್ಚು ಒತ್ತುಕೊಟ್ಟು, ವಿಚಾರಧಾರೆಗಳಿಗೆ ಬದ್ಧರಾದಂತಹ ವ್ಯಕ್ತಿ. ಶಿವಸೇನೆಯ ಬಾಳಾಸಾಹೇಬ್ ಠಾಕ್ರೆ ಅವರು. ಶಿವಸೇನೆಯ ಹಾಗೂ 'ಸಾಮ್ನಾ' ಪತ್ರಿಕೆಯ ಮುಖಾಂತರ ತಮ್ಮ ವಿಚಾರಗಳನ್ನು ಹೇಳುವ ಮೂಲಕ ಸ್ವಾಭಿಮಾನದಿಂದ ಬೆಳೆದು ಬಂದಂತಹ ವ್ಯಕ್ತಿ ಬಾಳಾಠಾಕ್ರೆ ಅವರು. ಉತ್ತಮ ಜರ್ನಲಿಸ್ಟ್ ಆಗಿ, ವ್ಯಂಗ್ಯ ಚಿತ್ರಕಾರರಾಗಿ ತಮ್ಮ ಆಸಕ್ತಿಯನ್ನು ಹೇಳುವಂತಹದ್ದು ಹಾಗೂ ಯಾವುದೇ ಸಂದರ್ಭದಲ್ಲಿ ಬೇರೆಯವರನ್ನು ಮುಖ್ಯಮಂತ್ರಿಯನ್ನಾಗಿ, ಮಂತ್ರಿಯನ್ನಾಗಿ ಮಾಡಿದರು. ವಿಧಾನಸಭಾ ಸದಸ್ಯರಾಗಲಿ, ವಿಧಾನಪರಿಷತ್ ಸದಸ್ಯರಾಗಲಿ, ಲೋಕಸಭೆ, ರಾಜ್ಯ ಸಭೆಯಿರಬಹುದು ಅವರು ಎಂದೂ ಯಾವುದೇ ಪದವಿಯನ್ನು ಪಡೆಯಲಿಲ್ಲ. ಬೇರೆಯವರೆಲ್ಲರನ್ನೂ ಮಾಡಿದರೇ ವಿನಃ ಅವರು ಆಗಲಿಲ್ಲ. ಅವರು 'ಕಿಂಗ್ ಮೇಕರ್' ಆದರು. ಶಿವಸೇನೆ ತತ್ವಗಳಿಗೆ ಬದ್ಧರಾದಂತಹ ವ್ಯಕ್ತಿ ಅವರು. ಅವರು ಇತ್ತೀಚೆಗೆಷ್ಟೇ ನಿಧನರಾದರು. ಅವರೂ ಸಹ ಬಹಳ ಜನಪ್ರಿಯ ವ್ಯಕ್ತಿಯಾಗಿದ್ದು, ಬಾಳಾಠಾಕ್ರೆ ಅವರ ನಿಧನದಿಂದ ಸಹ ದೇಶಕ್ಕೆ ಸಾಕಷ್ಟು ನಷ್ಟವಾಗಿದೆ. ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನೊಬ್ಬ ಹಿರಿಯ ವ್ಯಕ್ತಿಯಾದ ಡಾ: ವರ್ಗೀಸ್ ಕುರಿಯನ್. ಇವರ ಹೆಸರನ್ನು ಕೇಳದಂತಹ ವ್ಯಕ್ತಿ ಯಾರೂ ಇಲ್ಲ. ದೇಶದಲ್ಲಿ ಆಗಿರುವ 'ಕ್ಷೀರ ಕ್ರಾಂತಿ' ಯ ಜನಕರೆಂದೇ ಹೆಸರುಗಳಿಸಿರುವವರು ಡಾ: ವರ್ಗೀಸ್ ಕುರಿಯನ್ ಅವರು. ಗುಜರಾತ್ ನ ಆನಂದ್ ಸರ್ಕಾರಿ ಕೆನೆ ಘಟಕದಲ್ಲಿ ಆನಂದ್ ಎನ್ನುವ ಹೆಸರಿನ ಮೇಲೆ 'ಅಮೂಲ್' ಡೈರಿ ಇಂದು ಇಡೀ ದೇಶದಲ್ಲಿಯೇ ಜನಪ್ರಿಯವಾದುದಾಗಿದೆ. ಈ ರೀತಿ ಹೈನುಗಾರಿಕೆಯನ್ನು ಬೆಳೆಸಿದಂತಹ ವ್ಯಕ್ತಿ. ಗುಜರಾತ್ ಮುಖಾಂತರ ಇಡೀ ದೇಶದ ಬೇರೆ ಬೇರೆ ರಾಜ್ಯಗಳೂ ಸಹ ಅದರ ಪ್ರಭಾವವನ್ನು ಮಾಡಿದವರು ನಮ್ಮ ವರ್ಗೀಸ್ ಕುರಿಯನ್ ಅವರು. ಹೀಗಾಗಿ ಅವರ ಒಂದು ಸಮಾಜ ಸೇವೆಗೆ, ಕ್ಷೀರ ಕ್ರಾಂತಿಗೆ ಹಲವಾರು ಪ್ರಶಸ್ತಿಗಳು ಅವರ ಹೆಗಲೇರಿದೆ. ಪದ್ಮಶ್ರೀ, ಪದ್ಮವಿಭೂಷಣ, ಪದ್ಮಭೂಷಣ ಇರಬಹುದು, ಈ ರೀತಿಯಾಗಿ ಹಲವಾರು ಪ್ರಶಸ್ತಿಗಳು ಕುರಿಯನ್ ಅವರಿಗೆ ದೊರಕಿದೆ. ಅವರ ಒಂದು ಸಮಾಜ

ಸೇವೆಗೆ ದೊಡ್ಡದಾದ ಗರಿಯೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳು-ತ್ತೇನೆ. ಡೈರಿ ಉದ್ದಿಮೆಗೆ ಅವರ ಅಗಲಿಕೆಯಿಂದ ಹೆಚ್ಚು ನಷ್ಟವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಬ್ಬ ಹಿರಿಯ ವ್ಯಕ್ತಿಯಾದ ವಿ.ಎನ್.ಸುಬ್ಬರಾವ್ ಅವರು. ಬಹುಶಃ ಅವರ ಹೆಸರು ಕೇಳದಂತಹ ವ್ಯಕ್ತಿ ಯಾರೂ ಇಲ್ಲ. ಜರ್ನಲಿಸಂ, ಪತ್ರಿಕಾರಂಗ, ಮಾಧ್ಯಮ, ಈ ಎಲ್ಲಾ ಹೆಸರುಗಳು ಕೇಳಿಬಂದಾಗ ನಮಗೆ ತಕ್ಷಣ ಜ್ಞಾಪಕವಾಗುವ ವ್ಯಕ್ತಿ ಎಂದರೆ ಸುಬ್ಬರಾವ್ ಅವರು. ಇವರು ಭೀಷ್ಮ ಪಿತಾಮಹ ರೀತಿಯಲ್ಲಿದ್ದರು. ನಾನು 1994 ರಲ್ಲಿ ಶಾಸಕನಾಗಿದ್ದಾಗ, 1999ರಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದಾಗ, ಅವರ ಜೊತೆ ಬಹಳಷ್ಟು ಆತ್ಮೀಯ ಸಂಬಂಧವನ್ನು ಬೆಳೆಸಿಕೊಂಡಿದ್ದೆ. ಅವರು ಎಲ್ಲರ ಜೊತೆ ಸ್ನೇಹ-ಪರವಾದ ಮಾತುಕತೆಗಳನ್ನು ಮಾಡುತ್ತಿದ್ದರು ಮತ್ತು ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ವಿಧಾನಮಂಡಲದಲ್ಲಿ ಯಾವ ರೀತಿ ಚರ್ಚೆಗಳನ್ನು ಮಾಡಬೇಕು, ಯಾವ ರೀತಿಯ ವಿಷಯಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಬಹಳ ಸೂಕ್ಷ್ಮತೆಯಿಂದ ನಮ್ಮ ಜೊತೆ ಚರ್ಚೆ ಮಾಡುತ್ತಿದ್ದರು. ನಮ್ಮ ಜೊತೆಯಲ್ಲಿ ಸಂಭಾಷಣೆ ಮಾಡಿಕೊಂಡು ಸಲಹೆ ಸೂಚನೆಗಳನ್ನು ಕೊಡುವ ಕೆಲಸವನ್ನು ಸುಬ್ಬರಾವ್ ಅವರು ಮಾಡುತ್ತಿದ್ದರು. ಅವರ ಕೊನೆಯ ಉಸಿರು ಇರುವ ತನಕ ವಿಧಾನಸಭೆಯ ಯಾವುದೇ ಸಂದರ್ಭದಲ್ಲಿ ಭೇಟಿಯಾದಾಗ, ಯೋಗ ಕ್ಷೇಮವನ್ನು ವಿಚಾರಿಸಿಕೊಂಡು ಸರ್ಕಾರ ಯಾವ ರೀತಿ ನಡೆಯು-ತ್ತಿದೆ, ರಾಜಕೀಯ ವ್ಯವಸ್ಥೆ ಯಾವ ರೀತಿಯಿದೆ ಎನ್ನುವ ಬಗ್ಗೆ ಬಹಳಷ್ಟು ಸಾರಿ ನಮಗೆ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಇಂತಹ ಸುಬ್ಬರಾವ್ ಅವರು ಇತ್ತೀಚೆಗೆ ಹಲವಾರು ವಿಚಾರಗಳ ಬಗ್ಗೆ Columnist ಆಗಿ ಬಹಳ ಹರಿತವಾದ ಹಾಗೂ ವಿಚಾರ ಹಿನ್ನೆಲೆಯಿರುವಂತಹ ಲೇಖನಗಳನ್ನು ಬರೆಯುತ್ತಿರುವುದನ್ನು ನಾವು ನೋಡಿದ್ದೇವೆ. ಇಂತಹ ಧೀಮಂತ ವ್ಯಕ್ತಿಯಾದ ಶ್ರೀ ವಿ.ಎನ್. ಸುಬ್ಬರಾವ್ ಅವರು ಇಂದು ನಮ್ಮ ಮಧ್ಯದಲ್ಲಿಲ್ಲ. ಹೀಗಾಗಿ ಅವರು ಪತ್ರಿಕೆಗೆ, ಮಾಧ್ಯಮಕ್ಕೆ ಕೊಟ್ಟಂತಹ ಸೇವೆಯನ್ನು ಇಂದು ನಾವೆಲ್ಲರೂ ನೆನಪು ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅದೇ ರೀತಿ ನಿಧನರಾದಂತಹ ಎಲ್ಲಾ ಹಿರಿಯ ವ್ಯಕ್ತಿಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡುತ್ತಿದ್ದೇನೆ ಹಾಗೂ ಅವರ ಆತ್ಮಕ್ಕೆ

ಶಾಂತಿಯನ್ನು ಕೋರುತ್ತಿದ್ದೇನೆ. ಅಗಲಿರುವಂತಹ ವ್ಯಕ್ತಿಗಳ ಕುಟುಂಬ ವರ್ಗದವರಿಗೆ, ಅಭಿಮಾನಿಗಳಿಗೆ ಧೈರ್ಯ ತುಂಬುವಂತಹ ಕೆಲಸವಾಗಬೇಕು. ಹಾಗಾಗಿ ನಾನು ದೇವರಲ್ಲಿ ಪ್ರಾರ್ಥನೆ ಮಾಡಿ ತಮ್ಮ ಈ ಒಂದು ಸೂಚನೆಗೆ ಬೆಂಬಲವನ್ನು ಕೋರಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಮಾನ್ಯ ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರು: ಮಾನ್ಯ ಸಭಾಧ್ಯಕ್ಷರೆ, ಇಂದು ತಾವು ಇಲ್ಲಿ ಇಟ್ಟಿರತಕ್ಕಂಥ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ, ಇವತ್ತು ನಮ್ಮನ್ನೆಲ್ಲಾ ಅಗಲಿರುವಂತಹ ಗಣ್ಯರ-ನ್ನು ಸ್ಮರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ ಐ.ಕೆ.ಗುಜ್ರಾಲ್ ಅವರು. ಈ ದೇಶದ ಪ್ರಧಾನ ಮಂತ್ರಿಗಳಾಗಿದ್ದಂತಹವರು. ಒಬ್ಬ ಮುತ್ಸದ್ಧಿ, ಬುದ್ಧಿಜೀವಿ ರಾಜಕಾರಣಿ-ಯಾಗಿದ್ದರು. ಒಬ್ಬ Statesmen ಆಗಿ ಇದ್ದಂತಹ ರಾಜಕಾರಣಿ. ಅವರು ವಿದ್ಯಾರ್ಥಿ ದಿಸೆಯಲ್ಲಿಯೇ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ನಾಯಕತ್ವವನ್ನು ರೂಪಿಸಿ-ಕೊಂಡಿದ್ದರು. ಜೊತೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಕೂಡ ಭಾಗವಹಿಸಿದ್ದರು. ದೇಶ ವಿಭಜನೆ ಆಗುವುದಕ್ಕಿಂತ ಮುಂಚಿತವಾಗಿ ಪಾಕಿಸ್ತಾನದ ಭಾಗದಲ್ಲಿ ಹುಟ್ಟಿದಂತಹವರು. ವಿಭಜನೆಯಾದ ಮೇಲೆ ಭಾರತಕ್ಕೆ ಬಂದಂತಹವರು. ಅವರು ಪಿ.ಹೆಚ್.ಡಿ. ಡಾಕ್ಟರೇಟ್ ಪಡೆದುಕೊಂಡಿದ್ದರು. ವಿಶೇಷವಾಗಿ 'ವಿದೇಶ ನೀತಿಯ'ಯ ಬಗ್ಗೆ ಅಪಾರವಾಗಿ ಅಧ್ಯಯನವನ್ನು ಮಾಡಿ ಜ್ಞಾನವನ್ನು ಸಂಪಾದನೆ ಮಾಡಿಕೊ-ಂಡಿದ್ದರು ಅದಕ್ಕಾಗಿಯೇ ಅವರನ್ನು 'ರಾಜ ತಾಂತ್ರಿಕ' ನಿಪುಣರೆಂದು ಕರೆಯುತ್ತಿದ್ದರು. ವಿದೇಶದಲ್ಲಿ ರಾಯಭಾರಿಯಾಗಿ ಕೆಲಸ ಮಾಡಿದ್ದರು. ಎರಡು ಬಾರಿ ವಿದೇಶಾಂಗ ಖಾತೆಯ ಸಚಿವರಾಗಿ ಕೆಲಸ ಮಾಡಿದ್ದರು. ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿಯೂ ಸಹ ಕೆಲಸ ಮಾಡಿದ್ದರು. ವಿದೇಶಾಂಗ ನೀತಿಯಲ್ಲಿ ಅಂದರೆ ಬೇರೆ ಬೇರೆ ದೇಶಗಳ ಜೊತೆಗೆ ಸಂಬಂಧ ಹೇಗಿರಬೇಕು, ಅದರ ಬಗ್ಗೆ ಅಪಾರವಾದ ಅಧ್ಯಯನವನ್ನು ಮಾಡಿದ್ದರು. ಇವರ ಬಗ್ಗೆ ಇಡೀ ಜಗತ್ತಿನಲ್ಲಿಯೇ ಗೌರವವಿತ್ತು. ಬಹಳ ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದು, ಹೆಚ್ಚು ಮಾತನಾಡುತ್ತಿರಲಿಲ್ಲ. ರಾಷ್ಟ್ರಮಟ್ಟದಲ್ಲಿ intellectuals ಎಂದು ಏನು ಕರೆಯುತ್ತೇವೆ, ಅವರಲ್ಲಿ ಇವರೂ ಸಹ ಒಬ್ಬರಾಗಿದ್ದರು

ಎನ್ನುವುದನ್ನು ಇಂದು ನಾವೆಲ್ಲರೂ ನೆನಪು ಮಾಡಿಕೊಳ್ಳಬೇಕು. ನಾವೆಲ್ಲರೂ ಒಟ್ಟಿಗೆ ಒಂದೇ ಪಕ್ಷದಲ್ಲಿದ್ದ ಕಾರಣದಿಂದ ಪ್ರಧಾನ ಮಂತ್ರಿಯಾಗಿದ್ದಾಗ ಅವರು ನಮಗೆ ಬಹಳ ಪರಿಚಯವಾಗಿದ್ದರು. ಅವರು ಯಾರೊಂದಿಗೂ ಜಗಳ ಮಾಡಿದವರಲ್ಲ, ಅಧಿಕಾರದ ಹಿಂದೆ ಹೋದವರಲ್ಲ, ಪ್ರಧಾನ ಮಂತ್ರಿ ಸ್ಥಾನ ಎಂಬುದು ಅವರಿಗೆ ಅದಾಗಿಯೇ ಬಂದಿದ್ದು, ಪ್ರಯತ್ನ ಮಾಡಿದವರೂ ಅಲ್ಲ. ನನಗೆ ಪ್ರಧಾನಮಂತ್ರಿ ಪದವಿ ಕೊಡಿ ಎಂದೂ ಲಾಭಿ ಮಾಡಿದವರಲ್ಲ, ಅದಾಗಿಯೇ ಬಂದಿರುವುದಾಗಿದೆ.

ಹಾಗಾಗಿ ಅವರು ಪ್ರಧಾನಮಂತ್ರಿಯಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಒಬ್ಬ ಪ್ರಾಮಾಣಿಕ ರಾಜಕಾರಣಿ ಎನ್ನುವುದನ್ನು ಇವತ್ತು ನಾವು ನೆನೆಯಬೇಕಾಗಿದೆ. ಏಕೆಂದರೆ ರಾಜಕಾರಣದಲ್ಲಿ ಪ್ರಾಮಾಣಿಕತೆ ಮಾಯವಾ-ಗುತ್ತಿರುವಾಗ ಇಂಥವರು ನಮ್ಮ ಜೊತೆಯಲ್ಲಿ ಇದ್ದಾರೆ ಎಂದು ನಾವು ಹೆಮ್ಮೆ ಪಡಬೇಕಾಗುತ್ತದೆ. ಇವರು ನಮಗೆ ಆದರ್ಶವಾಗುತ್ತಾರೆ. ಇವತ್ತು ರಾಜಕಾರಣ-ದಲ್ಲಿ ಪ್ರಮಾಣಿಕತೆ ಮಾಯವಾಗುತ್ತಿದೆ, ಅಪ್ರಾಮಾಣಿಕರ ಸಂಖ್ಯೆ ಜಾಸ್ತಿಯಾಗುತ್ತಿದೆ. ಹಾಗಾಗಿ ಇಂಥ ಒಬ್ಬ ಪ್ರಾಮಾಣಿಕ ವ್ಯಕ್ತಿಯನ್ನು ನೆನಪು ಮಾಡಿಕೊಳ್ಳುವುದು, ಗೌರವಿಸುವುದು ನಮಗೇ ಗೌರವ ಎಂದು ನಾನು ಭಾವಿಸುತ್ತೇನೆ. ಇವರೆಲ್ಲಾ ನಮಗೆ ಆದರ್ಶ ವ್ಯಕ್ತಿಗಳಾಗುತ್ತಾರೆ. ಇವರು ಬದುಕಿದಂಥ ಬದುಕು, ಜೀವನ ಹಾಗೂ ರಾಜಕಾರಣದಲ್ಲಿ ಶುದ್ಧವಾಗಿ-ರುವಂಥದ್ದು, ಇವೆಲ್ಲಾ ಮುಂದಿನ ಪೀಳಿಗೆಯವರಿಗೆ ಅತ್ಯಂತ ಆದರ್ಶವಾ-ಗುತ್ತದೆ ಎನ್ನುವ ಮಾತುಗಳನ್ನು ಹೇಳುತ್ತಾ ಐ.ಕೆ. ಗುಜ್ರಾಲ್‌ರವರ ಸಾವು ರಾಷ್ಟ್ರಕ್ಕೇ ನಷ್ಟವಾಗಿದೆ, ಸಮಾಜಕ್ಕೇ ನಷ್ಟವಾಗಿದೆ ಎಂದು ಹೇಳುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಅವರ ಕುಟುಂಬವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಬಿ. ಮುನಿಯಪ್ಪ ಮುದ್ದಪ್ಪರವರು ನಮ್ಮ ಜೊತೆ ಮಂತ್ರಿಯಾಗಿದ್ದ-ವರು, 1994 ಮತ್ತು 2004ರಲ್ಲಿ ಎರಡು ಬಾರಿ ಎಂ.ಎಲ್.ಎ. ಆಗಿದ್ದವರು.

ಹಿಂದುಳಿದ ಜಾತಿಯಿಂದ ಬಂದಂಥ ಬಹಳ ಮುಗ್ಧ ವ್ಯಕ್ತಿ. ಯಾವ ವಿಷಯವನ್ನೇ ಆಗಲಿ ನೇರವಾಗಿ ಮಾತನಾಡುತ್ತಿದ್ದವರು, ಹಿಂದೆ ಮುಂದೆ ಮಾತನಾಡುತ್ತಿದ್ದವರಲ್ಲ. ಆ ರೀತಿಯ ವ್ಯಕ್ತಿಯಾಗಿದ್ದರು. ತಪ್ಪು ಮಾಡಿದರೂ ಕೂಡ ಅದನ್ನೂ ಬಹಳ ಮುಗ್ಧತೆಯಿಂದ ಹೇಳುತ್ತಿದ್ದಂಥ ಸ್ವಭಾವವಿತ್ತು. ಅವರ ಪ್ರಕಾರ, ನೋಡಿ ಸಾರ್ ತಪ್ಪು ಮಾಡಿದ್ದೇನೆ ನಾನು, ಆದರೂ ಈ ಕೆಲಸ ಆಗಲೇಬೇಕು ಎಂದು ಆ ರೀತಿ ಹೇಳುತ್ತಿದ್ದಂಥ ವ್ಯಕ್ತಿ. ಅವರು ಇತ್ತೀಚೆಗೆ ನನಗೆ 15 ದಿನಗಳ ಹಿಂದೆ ಅವರ ಮನೆಯಲ್ಲಿ ಯಾವುದೋ ಮದುವೆಯಿದೆ ಎಂದು ನನ್ನನ್ನು ಕರೆಯುವುದಕ್ಕೆ ನಮ್ಮ ಮನೆಗೆ ಬಂದಿದ್ದರು. ಇಷ್ಟು ಜಲ್ದಿ ಅವರು ಕಾಲವಾಗುತ್ತಾರೆಂದು ನನಗೆ ಗೊತ್ತಿರಲಿಲ್ಲ. ಈಗ ಹೊಸದಾಗಿ ನಾನು ರಾಜಕೀಯವಾಗಿ ಎಲ್ಲಿ ನಿಮ್ಮ ನೆಲೆ ಮುನಿಯಪ್ಪನವರೇ ಎಂದು ಕೇಳಿದೆನು, ಮೊದಲು ಜೆಡಿಎಸ್‌ನಲ್ಲಿ ಇದ್ದರು, ಈಗ ಅವನ್ನು ಬಿಟ್ಟು ಕೆ.ಜೆ.ಪಿ.ಗೆ ಹೋಗುತ್ತೇನೆ ಎಂದು ಹೇಳಿದ್ದರು. ಏಕೆ ಕೆ.ಜೆ.ಪಿ.ಗೆ ಹೋಗುತ್ತೀ–ಯಪ್ಪ ಎಂದು ನಾನು ಕೇಳಿದೆನು. ಅದಕ್ಕೆ ಅವರು ಇನ್ನೆಲ್ಲೂ ಟಿಕೆಟ್ ಸಿಗುವುದಿಲ್ಲ ಸಾರ್, ಅದಕ್ಕೆ ಕೆ.ಜೆ.ಪಿ.ಗೆ ಹೋಗುತ್ತಿದ್ದೇನೆ ಎಂದು ಹೇಳಿದರು. ಪಾಪ ಅವರು ಇನ್ನೂ ಕೆ.ಜೆ.ಪಿ.ಗೆ ಸೇರಿರಲಿಲ್ಲ. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ಬಹಳ ಒಳ್ಳೆಯ ಮನುಷ್ಯ, ಸ್ನೇಹಜೀವಿ. ಎಲ್ಲರ ಜೊತೆಯಲ್ಲಿಯೂ ಒಳ್ಳೆಯ ಸ್ನೇಹ, ಸಂಬಂಧ ಇಟ್ಟುಕೊಂಡಿದ್ದಂಥ ಒಬ್ಬ ವ್ಯಕ್ತಿಯಾಗಿದ್ದರು. ಕಲ್ಮಲ ಕ್ಷೇತ್ರದಿಂದ ಎರಡು ಸಾರಿ ಆಯ್ಕೆ ಯಾಗಿದ್ದರು. ಅಂಥ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರ ಶಾಂತಿ ಸಿಗಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಹೆಚ್. ಪುಟ್ಟದಾಸ್ ಇವರು ಕೂಡಾ ಅತ್ಯಂತ ಯೋಗ್ಯ ರಾಜಕಾರಣಿಯಾಗಿದ್ದರು. ಕಾಂಗ್ರೆಸ್ ಪಕ್ಷದಿಂದ ಎರಡು ಸಾರಿ ಎಂ.ಎಲ್.ಎ. ಆಗಿದ್ದರು. ಇವರಿಗೆ ಅಪಾರವಾದ ಸ್ನೇಹಿತರ ಬಳಗ ಇತ್ತು. ಮಳವಳ್ಳಿ ತಾಲ್ಲೂಕಿನವರು, ಅಪಾರವಾದ ಸ್ನೇಹವಿತ್ತು, ಎಲ್ಲರೂ ಇವರನ್ನು ಗೌರವಿಸು–ತ್ತಿದ್ದರು. ಆದರೆ ಅವರು ರಾಜಕಾರಣ ಬಿಟ್ಟ ಮೇಲೂ ಸಹ ಎಲ್ಲರ ಜೊತೆ ಒಡನಾಟ ಇಟ್ಟುಕೊಂಡಿದ್ದಂಥ ಒಬ್ಬ ವ್ಯಕ್ತಿ. ಅತ್ಯಂತ ಸ್ನೇಹಮಯಿಯಾಗಿದ್ದಂಥ ವ್ಯಕ್ತಿ. ಅವರು ಕೂಡಾ ನಮ್ಮನ್ನು ಅಗಲಿದ್ದಾರೆ. ವ್ಯಕ್ತಿಯಲ್ಲಿ ಎಂ.ಬಿ.ಬಿ.ಎಸ್. ಡಾಕ್ಟರ್ ಆಗಿದ್ದರು. ಆ ರೀತಿ ಅವರು

ಕಾಣಿಸುತ್ತಿರಲಿಲ್ಲ. ಬಹಳ ಸರಳವಾದ ವ್ಯಕ್ತಿ. ಎಲ್ಲರನ್ನೂ ಬಹಳ ಪ್ರೀತಿಯಿಂದ, ಗೌರವದಿಂದ ಕಾಣುವ ಸ್ವಭಾವ ಅವರಲ್ಲಿತ್ತು. ಅಂಥ ವ್ಯಕ್ತಿ ಇವತ್ತು ನಮ್ಮನ್ನು ಆಗಲಿದ್ದಾರೆ. ಅವರ ಆತ್ಮಕ್ಕೆ ಚಿರ ಶಾಂತಿ ಸಿಗಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಜಿ.ಜಿ. ಯಲ್ಲಿಗುತ್ತಿರವರು, ಇತ್ತೀಚೆಗೆ ನಿಧನರಾದರು. ಬೀಳಗಿ ಕ್ಷೇತ್ರದಿಂದ 1989ರಲ್ಲಿ ಶಾಸಕರಾಗಿ ಆಯ್ಕೆಯಾದವರು. ಎಷ್ಟು ಸೌಮ್ಯವಾ- ದಂಥ ಸಜ್ಜನ ವ್ಯಕ್ತಿ. ಎಂದರೆ ಹೇಳುವುದಕ್ಕೆ ಆಗುವುದಿಲ್ಲ, ಅಷ್ಟೊಂದು ಸಜ್ಜನಿಕೆಯಿದ್ದಂಥ ವ್ಯಕ್ತಿ. ಬಹಳ ಜನ ಇವರಂಥವರೆಲ್ಲಾ ರಾಜಕಾರಣದಲ್ಲಿ ಇರಬೇಕಾಗಿತ್ತು. ಇಂಥವರು ಇವತ್ತು ನಿಧನರಾಗಿದ್ದಾರೆ. ಅವರ ಆತ್ಮಕ್ಕೂ ಚಿರ ಶಾಂತಿ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಬಿ.ಆರ್.ಧನಂಜಯ್‌ರವರ ಪರಿಚಯ ನನಗೆ ಅಷ್ಟೊಂದು ಇರಲಿಲ್ಲ. 1967 ರಲ್ಲಿ ರಾಮನಗರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದವರು. ಕೃಷಿಕ ಸಮಾಜದಲ್ಲಿ ಹುಟ್ಟಿದವರು. ರೈತರ ಪರವಾಗಿ ಹೋರಾಟ ಮಾಡಿದವರು. ಅವರು ಕೂಡಾ ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೂ ಚಿರ ಶಾಂತಿ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಎಂ. ಶಂಕರರೆಡ್ಡಿರವರು ಬಳ್ಳಾರಿ ಜಿಲ್ಲೆ ಶಿರಗುಪ್ಪ ಕ್ಷೇತ್ರದಿಂದ 3 ಬಾರಿ ಶಾಸಕರಾಗಿದ್ದರು. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿದ್ದವರು. ಕೆಳ ಹಂತದಿಂದ ಬಂದಂಥವರು. ಗ್ರಾಮಪಂಚಾಯತಿ ಮಟ್ಟದಿಂದ ಮೇಲಕ್ಕೆ ಬಂದವರು, ತಾಲ್ಲೂಕು ಬೋರ್ಡ್,ಗ್ರಾಮ ಪಂಚಾ- ಯತಿ ಹೀಗೆ ಬಂದು ಶಾಸಕರಾಗಿ ಅಪಾರವಾಗಿ ರೈತರ ಬಗ್ಗೆ ಕಾಳಜಿ ಇಟ್ಟುಕೊಂಡಿದ್ದರು. ಅನೇಕ ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರು. ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಅವರಿಗೆ ಹೃದಯದ ಚಿಕಿತ್ಸೆ ಆಗಿತ್ತು. ಹೀಗಾಗಿ ಸ್ವಲ್ಪ ಮಟ್ಟಿಗೆ ಕುಗ್ಗಿ ಹೋಗಿದ್ದರು. ಇವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರ ಶಾಂತಿ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಡಾ: ಡಿ.ಬಿ. ಗಂಗಾಧರಪ್ಪನವರು ಅರಸೀಕೆರೆ ಕ್ಷೇತ್ರದಿಂದ ಆಯ್ಕೆ- ಯಾಗಿದ್ದವರು. ಅವರು ಒಳ್ಳೆಯ ಮನುಷ್ಯರು, ಅನೇಕ ಶಿಕ್ಷಣಸಂಸ್ಥೆಗಳನ್ನು ಕಟ್ಟಿ ಅದರ ಸಂಸ್ಥಾಪಕರಾಗಿ, ಅಧ್ಯಕ್ಷರಾಗಿ ಕೆಲಸ ಮಾಡಿದವರು. ಶಿಕ್ಷಣ

ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿದ್ದಾರೆ. ಅವರು ಕೂಡಾ ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ.

ಸಿ. ಬಂದೀಗೌಡರವರು ಶ್ರೀರಂಗಪಟ್ಟಣದವರು, ನಮ್ಮ ಮೈಸೂರಿನ ಪಕ್ಕದವರು, ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದರು. ಹಿಂದೆ ಮೈಸೂರು ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದರು. ವೃತ್ತಿಯಲ್ಲಿ ಡಾಕ್ಟರ್ ಆಗಿದ್ದವರು, ರಾಜಕಾರಣಿ ಎನ್ನುವುದಕ್ಕಿಂತ ಹೆಚ್ಚಾಗಿ ಡಾಕ್ಟರ್ ಆಗಿ ಒಳ್ಳೆಯ ಹೆಸರು ಮಾಡಿದ್ದವರು. ಇವರನ್ನು "ನಾಲ್ಕಾಣೆ ಡಾಕ್ಟರ್" ಎಂದು ಕರೆಯುತ್ತಿದ್ದರು. ಜಾಸ್ತಿ ದುಡ್ಡು ಕೊಟ್ಟರೆ ತೆಗೆದುಕೊಳ್ಳುತ್ತಿರಲಿಲ್ಲ ಇಂಥವರು ಬಹಳ ಅಪರೂಪ. ಸ್ವಾತಂತ್ರ್ಯ ಹೋರಾಟಗಾರರು, ಕ್ವಿಟ್ ಇಂಡಿಯಾ movement ನಿಂದ ಹಿಡಿದು ಎಲ್ಲಾ ಚಳುವಳಿಗಳಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿ, ಹೋರಾಡಿದವರು. ಹೀಗಾಗಿ ಇಂದಿಗೂ ಶ್ರೀರಂಗಪಟ್ಟಣದಲ್ಲಿ ಇವರನ್ನು ಡಾಕ್ಟರ್ ಎಂದೇ ಕರೆಯುತ್ತಿದ್ದಾರೆ. more than 50 years ಡಾಕ್ಟರ್ ಆಗಿ ಕೆಲಸ ಮಾಡಿದ್ದಾರೆ. ಒಮ್ಮೆ ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿ. ಮತ್ತೊಮ್ಮೆ ಕೌನ್ಸಿಲ್ ಸದಸ್ಯರಾಗಿ Upper House ಗೆ ಬಂದವರು. ಅದನ್ನು ಬಿಟ್ಟರೆ ಈ ಕೆಟ್ಟ ರಾಜಕಾರಣ ನೋಡಿ ಬೇಸರವಾಗಿ ರಾಜಕಾರಣ ಬಿಟ್ಟು ಬಿಟ್ಟರು. ರಾಜಕೀಯದ ನಿವೃತ್ತಿ ಹೊಂದಿದರು. ಇದನ್ನು ಬಯಸುವವರು ಬಹಳ ಕಡಿಮೆ. ನನಗೆ ರಾಜಕಾರಣ ಬೇಡಪ್ಪ ಎಂದು ಹೇಳಿ ದೂರವಾಗಿದ್ದರು. ಜನತಾ ಪಾರ್ಟಿಯಲ್ಲಿದ್ದರು ಅಲ್ಲಿಂದ ಸಂಸ್ಥಾ ಕಾಂಗ್ರೆಸ್‌ನಲ್ಲಿದ್ದರು, ಮತ್ತೆ ಜನತಾ ಪಾರ್ಟಿಗೆ ಬಂದರು. ನಂತರ ರಾಜಕೀಯದಿಂದ ದೂರವಾಗಿ, ಕೊನೆಯವರೆಗೂ ವೈದ್ಯಕೀಯ ವೃತ್ತಿಯನ್ನು ಮಾಡಿಕೊಂಡಿದ್ದರು. ಅವರು. ಕೂಡ ಇವತ್ತು ನಮ್ಮನ್ನು ಅಗಲಿದ್ದಾರೆ.

ವಿಲಾಸ್‌ರಾವ್ ದೇಶಮುಖ್‌ರವರು ಮಹಾರಾಷ್ಟ್ರ ರಾಜ್ಯದ ಮುಖ್ಯ-ಮಂತ್ರಿಗಳಾಗಿದ್ದವರು. ನಮ್ಮ ಬಾರ್ಡರ್ ಜಿಲ್ಲೆಯಾದ ಗುಲ್ಬರ್ಗಾ-ಬೀದರ್ ಪಕ್ಕದಲ್ಲಿರುವ ಲಾತೂರ್ ನವರು. ಇವರು ವೃತ್ತಿಯಲ್ಲಿ ವಕೀಲರಾಗಿದ್ದರೂ ಕೂಡಾ ರಾಜಕಾರಣಕ್ಕೆ ಕೆಳಹಂತದಿಂದ ಬಂದವರು. ಪಂಚಾಯತಿಯಿಂದ ಮುಖ್ಯಮಂತ್ರಿ, ಅಲ್ಲಿಂದ ಕೇಂದ್ರದ ಮಂತ್ರಿಯಾಗಿಯೂ ಕೂಡ ಹೋಗಿದ್ದರು. ಕೊನೇ ಹಂತದಲ್ಲಿ ಕೇಂದ್ರದ ಮಂತ್ರಿ ಆಗಿದ್ದರು. ಮಹಾರಾಷ್ಟ್ರದಂಥ ದೊಡ್ಡ ರಾಜ್ಯದಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರು. ಮಹಾರಾಷ್ಟ್ರಕ್ಕೆ ಬಹಳ

ಅಪಾರವಾದ ಕೆಲಸ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಅತ್ಯಂತ ಜನಪ್ರಿಯ ಮುಖ್ಯಮಂತ್ರಿಯವರಲ್ಲಿ ಇವರೂ ಕೂಡ ಒಬ್ಬರಾಗಿದ್ದರು ಎನ್ನುವುದನ್ನು ಇವತ್ತು ನಾವು ಕೇಳಿದ್ದೇವೆ, ನೋಡಿದ್ದೇವೆ ಎಂದು ಹೇಳುತ್ತಾ ದೇಶಮುಖ್‌ರವರಿಗೆ ನಾನು ಗೌರವ ಸಲ್ಲಿಸಿ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ದಿವಂಗತ ಕೆ.ಎಸ್.ಸುದರ್ಶನ್‌ರವರು ಮಂಡ್ಯ ಜಿಲ್ಲೆಯ ಕೆ.ಆರ್.-ಪೇಟೆ ತಾಲ್ಲೂಕಿನವರಾಗಿದ್ದರು. RSS ಚಟುವಟಿಕೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ಅವರು ತೊಡಗಿಸಿಕೊಂಡಿದ್ದರು. ಅವರು RSS ಉನ್ನತ ಸ್ಥಾನವನ್ನು ಏರಿದ್ದರು, ಅಂದರೆ ಅದರ ಅಧ್ಯಕ್ಷರಾಗಿದ್ದರು. ನಮಗೆ ಸೈದ್ಧಾಂತಿಕವಾಗಿ ಅವರೊಡನೆ ಬೇರೆ ರೀತಿಯ ಭಿನ್ನಾಭಿಪ್ರಾಯಗಳು ಇರಬಹುದು, ಆದರೆ ಅವರು ಒಳ್ಳೆಯ ವ್ಯಕ್ತಿಯಾಗಿದ್ದರು. ಅವರು ಅನೇಕ ವರ್ಷಗಳಿಂದ ಪ್ರಚಾರಕರಾಗಿ ಮತ್ತು ಅಧ್ಯಕ್ಷರಾಗಿ RSS ಅನ್ನು ಕಟ್ಟಲಿಕ್ಕೆ ಮತ್ತು ಬೆಳೆಸಲಿಕ್ಕೆ ಶ್ರಮ ವಹಿಸಿದ್ದರು. ಅವರ ಆತ್ಮಕ್ಕೂ ಕೂಡ ನಾನು ಶಾಂತಿಯನ್ನು ಕೋರುತ್ತೇನೆ. ದಿವಂಗತ ಬಾಳಸಾಹೇಬ್ ಠಾಕ್ರೆಯವರು ಮೂಲತ: ರಾಜಕಾರಣಿಯಾಗಿರಲಿಲ್ಲ. ಆಮೇಲೆ ಅವರು ರಾಜಕಾ-ರಣಿಯಾದವರು. ಅವರು ವ್ಯಂಗ್ಯಚಿತ್ರಕಾರರಾಗಿ ತಮ್ಮ ವೃತ್ತಿಯನ್ನು ಆರಂಭ ಮಾಡಿದ್ದರು. ಆಮೇಲೆ ಅವರು Journalist ಆದರು, ತದನಂತರ ಅವರು ರಾಜಕಾರಣಿಯಾಗಿ ೧೯೬೬ರಲ್ಲಿ 'ಶಿವಸೇನೆ' ಪಕ್ಷವನ್ನು ಕಟ್ಟಿ, ಅಂದಿನಿಂದ ಇವತ್ತಿನವರೆಗೂ ಕೂಡ ಅದರ ಯಜಮಾನಿಕೆಯನ್ನು ವಹಿಸಿಕೊಂಡಿದ್ದರು. ನಮಗೂ ಮತ್ತು ಅವರಿಗೂ ಬಹಳಷ್ಟು ವ್ಯತ್ಯಾಸಗಳಿದ್ದವು ಹಾಗೂ ಜಗಳಗಳೂ ಆಗಿದ್ದವು. ನಾವು ಅವರನ್ನು ಟೀಕೆ ಮಾಡಿದ್ದೆವು, ಅವರೂ ನಮ್ಮನ್ನು ಟೀಕೆ ಮಾಡಿದ್ದರು. ಅದು ಬೇರೆ ವಿಷಯ. ಅವರು ಮಹಾರಾಷ್ಟ್ರದ ಬಗ್ಗೆ ಮತ್ತು ಮರಾಠಿಗರ ಬಗ್ಗೆ ಅಪಾರವಾದ ಪ್ರೀತಿ ಮತ್ತು ಕಾಳಜಿಯನ್ನು ಇಟ್ಟುಕೊಂಡಿ-ದ್ದರು. ರಾಜ್ಯದ ಬಗ್ಗೆ ಪ್ರೀತಿ ಮತ್ತು ಕಾಳಜಿಯನ್ನು ಇಟ್ಟುಕೊಳ್ಳುವುದನ್ನು ನಾವು ಅವರಿಂದ ಕಲಿಯಬೇಕಾಗಿದೆ. ನಮಗೂ first of all ಕರ್ನಾಟಕ ರಾಜ್ಯದ ಬಗ್ಗೆ ಅಭಿಮಾನ ಇರಬೇಕು. ಅವರು ಹೇಗೆ ಮಹಾರಾಷ್ಟ್ರದ ಬಗ್ಗೆ, ಗಡಿ ಬಗ್ಗೆ, ತಮ್ಮ ಭಾಷೆ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿದ್ದರೋ,

ಅದೇ ರೀತಿಯಲ್ಲಿ ನಾವೂ ನಮ್ಮ ರಾಜ್ಯದ ಬಗ್ಗೆ ಮತ್ತು ಭಾಷೆಯ ಬಗ್ಗೆ ಅಭಿಮಾನವನ್ನು ಇಟ್ಟುಕೊಳ್ಳಬೇಕು. ಅವರ ಆ ಅಭಿಮಾನ ನಿರಭಿಮಾನ ಇರಬಹುದು. ನಮ್ಮಲ್ಲಿ ಅಭಿಮಾನದ ಕೊರತೆ ಸ್ವಲ್ಪ ಹೆಚ್ಚಾಗಿಯೇ ಇದೆ. ಆಂಧ್ರಪ್ರದೇಶ ಇರಬಹುದು, ತಮಿಳುನಾಡು ಇರಬಹುದು, ಕೇರಳ ಇರಬಹುದು, ಮಹಾರಾಷ್ಟ್ರ ಇರಬಹುದು, ಅವರೆಲ್ಲರಿಗೂ ತಮ್ಮ ರಾಜ್ಯಗಳ ಬಗ್ಗೆ ನಿರಭಿಮಾನವಿದೆ. ನಮ್ಮಲ್ಲಿ ಅಭಿಮಾನದ ಕೊರತೆ ಇದೆ. ಕನಿಷ್ಟ ಪಕ್ಷ ಅವರಿಂದಲಾದರೂ ನಾವು ಅದನ್ನು ಕಲಿಯಬೇಕಾಗಿದೆ. ನಮ್ಮ ಭಾಷೆ, ನಮ್ಮ ಸಂಸ್ಕೃತಿ, ನಮ್ಮ ಕಲೆ, ನಮ್ಮ ಭೂಮಿ, ನಮ್ಮ ನಾಡು ಇದರ ಬಗ್ಗೆ ಪ್ರೀತಿಸುವುದನ್ನು ನಮ್ಮ ಜನರು ಕಲಿಯಬೇಕು ಮತ್ತು ನಾವೂ ಕಲಿಯಬೇಕು. ನಾವು ಇನ್ನೊಬ್ಬರನ್ನು ದೂಷಿಸುವುದರ ಬದಲು, ನಾವೂ ನಮ್ಮವರನ್ನು ಪ್ರೀತಿಸತಕ್ಕ, ಗೌರವಿಸತಕ್ಕ, ನಮ್ಮ ತಾಯಿ ಭಾಷೆಯನ್ನು ಗೌರವಿಸತಕ್ಕ ಕೆಲಸ ಮಾಡಿದರೆ ನಾವು ನಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುತ್ತದೆ. ಇದನ್ನು ನಾವು ಬಾಳಠಾಕ್ರೆಯವರಿಂದ ಕಲಿಯಬೇಕಾಗುತ್ತದೆ. ಅವರಲ್ಲೂ ಕೆಲವು ಒಳ್ಳೆಯ ಗುಣಗಳಿವೆ ಎನ್ನುವುದನ್ನು ನಾವು ಮರೆಯಬಾರದು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅವರನ್ನು 'ಮಹಾರಾಷ್ಟ್ರದ ಹುಲಿ' ಎಂದೇ ಯಾವಾಗಲೂ ಕರೆಯುತ್ತಿದ್ದರು. ದಿವಂಗತ ಬಾಳಠಾಕ್ರೆಯವರು ಒಂದು ಮಾತು ಹೇಳಿದರೆ ಇಡೀ ಮುಂಬೈ ಸ್ತಬ್ಧವಾಗುತ್ತಿತ್ತು. ಒಂದು ಕಾಲದಲ್ಲಿ ಅಂದರೆ ೧೯೬೦-೭೦ರ ದಶಕದಲ್ಲಿ ಮಾನ್ಯ ಜಾರ್ಜ್ ಫರ್ನಾಂಡಿಸ್‌ನವರು ಇಲ್ಲಿಂದ ಅಲ್ಲಿಗೆ ಹೋಗಿ ಆ ತರಹ ಮುಂಬೈನಲ್ಲಿ ಮಾಡುತ್ತಿದ್ದರು. ಅವರು ಆಗ Trade union leader ಆಗಿ, ಒಂದು ಕರೆ ಕೊಟ್ಟರೆ ಇಡೀ ಬಾಂಬೆಯ ಎಲ್ಲಾ activities ಸ್ಥಗಿತವಾಗುತ್ತಿತ್ತು. ಅವರ ನಂತರ ಠಾಕ್ರೆಯವರು ಬಹಳ ದೊಡ್ಡದಾಗಿ ಬೆಳೆದರು. ಅವರು 'ಶಿವಸೇನೆ' ಪಕ್ಷವನ್ನು ಕಟ್ಟಿ, ಅದನ್ನು ಬಹಳ ದೊಡ್ಡದಾಗಿ ಬೆಳೆಸಿದರು. ಯಾವತ್ತೂ ಕೂಡ ಅವರು ತಾವು ಅಧಿಕಾರದಲ್ಲಿ ಕುಳಿತುಕೊಳ್ಳಲು ಪ್ರಯತ್ನ ಮಾಡಲಿಲ್ಲ. ಅದಕ್ಕಾಗಿಯೇ ನಾವು ಇವರುಗಳನ್ನೆಲ್ಲಾ ಲೀಡರ್‌ಗಳೆಂದು ಕರೆಯುತ್ತೇವೆ. ನಾವು ಎಲ್ಲಿ ಅಧಿಕಾರ ಸಿಗುತ್ತದೋ ಎಂದು ಹುಡುಕುತ್ತಿರುತ್ತೇವೆ. ಆದರೆ ಇವರು ಬೇರೆಯವರನ್ನು ಅಧಿಕಾರದಲ್ಲಿ ಕುಳ್ಳಿರಿಸಿದರು. ತಾವೇ ಅಧಿಕಾರದಲ್ಲಿ ಕೂರತಕ್ಕ ಕೆಲಸವನ್ನು ಅವರು ಎಂದೂ ಮಾಡಲಿಲ್ಲ. ಬಾಂಬೆ ಮುನಿಸಿಪಾಲಿಟಿಯನ್ನಂತೂ ಅವರು

ಭದ್ರವಾಗಿ ಹಿಡಿದುಕೊಂಡಿದ್ದರು. ಅಲ್ಲಿ ಇವರು ಹೇಳಿದ್ದೇ ವೇದವಾಕ್ಯವಾಗಿತ್ತು. ಅಷ್ಟರಮಟ್ಟಿಗೆ ಶಿವಸೇನೆಯವರು ಅದನ್ನು ಭದ್ರವಾಗಿಹಿಡಿದುಕೊಂಡು ಕುಳಿತಿದ್ದರು. ಅದು ಏನೇ ಇರಲಿ. ಅವರ ಸಂಘಟನೆಯನ್ನು ನಾವು ಮೆಚ್ಚಬೇಕಾಗುತ್ತದೆ. ಅವರು ಮಾಡಿದ ಸಂಘಟನೆ, ಅವರಿಗೆ ಅಲ್ಲಿಯ ಮರಾಠಿ ಭಾಷೆ ಬಗ್ಗೆ ಇದ್ದಂತಹ ಪ್ರೀತಿ-ಅಭಿಮಾನವನ್ನು ಮೆಚ್ಚಿಕೊಳ್ಳತಕ್ಕ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಅವರ ಆತ್ಮಕ್ಕೆ ಶಾಂತಿಯನ್ನು ಈ ಸಂದರ್ಭದಲ್ಲಿ ಕೋರಲಿಕ್ಕೆ ನಾನು ಬಯಸುತ್ತೇನೆ. ಡಾ: ಕುರಿಯನ್‌ರವರು ಮೂಲತ: ಕೇರಳದವರು. ಅವರು ಓದಿದ್ದು Mechanical Engineering. ಆದರೆ ಅವರು ಮಾಡಿದ್ದು 'ಕ್ಷೀರಕ್ರಾಂತಿ'. ಅವರು ಕೇರಳದಿಂದ ಗುಜರಾತ್‌ಗೆ ಕೆಲಸ ಹುಡುಕಿಕೊಂಡು ಬಂದವರಾಗಿದ್ದರು. ಇಡೀ ದೇಶದಲ್ಲೇ ದೊಡ್ಡದಾದ ಕ್ಷೀರ ಕ್ರಾಂತಿಯನ್ನು ಗುಜರಾತ್‌ನಲ್ಲಿ ಅವರು ಮಾಡಿದರು. ಹಾಲು ಉತ್ಪಾದಕ ರೈತರ ಸಂಘಟನೆ ಮಾಡುವ ಕೆಲಸವನ್ನು ಅವರು ಮಾಡಿದರು. ಮಾನ್ಯ ರೇವಣ್ಣನವರೆ, ತಾವು NDDBಯಲ್ಲಿ ಮೆಂಬರ್ ಆಗಿ ಕಾರ್ಯನಿರ್ವ-ಹಿಸುತ್ತಿದ್ದಾಗ, ತಮಗೆ ಕೂಡ ಡಾ:ಕುರಿಯನ್‌ರವರು ಪರಿಚಯವಿದ್ದರು ಎನಿಸುತ್ತದೆ. ನಾನೂ ಕೂಡ Animal Husbandry Minister ಆಗಿದ್ದಾಗ ಗುಜರಾತ್ ಸ್ಟೇಟ್‌ನ ಆನಂದ್‌ಗೆ ಭೇಟಿ ನೀಡಿದ್ದೆ. ಆಗ ನಾನು ಎರಡು ಸಾರಿ ಅವರನ್ನು ಭೇಟಿಯಾಗಿದ್ದೆ. ಅವರು ರೈತರ ಬಗ್ಗೆ ಅದರಲ್ಲೂ ಅಸಂಘಟಿತ ಜನರ ಬಗ್ಗೆ ಅನುಕಂಪವುಳ್ಳವರಾಗಿದ್ದರು. ರೈತರ ಶೋಷಣೆಯಾಗುವುದನ್ನು ತಡೆಗಟ್ಟ-ಬೇಕು, ಅವರನ್ನು ಮಧ್ಯವರ್ತಿಗಳ ಕಪಿಮುಷ್ಟಿಯಿಂದ ಬಿಡುಗಡೆ ಗೊಳಿಸಬೇಕು ಎಂಬುದರ ಬಗ್ಗೆ ಅವರಿಗೆ ಅಪಾರವಾದ ಕಾಳಜಿ ಇತ್ತು. ಕೇವಲ ಹಾಲು ಉತ್ಪಾದಕರ ಬಗ್ಗೆಯಷ್ಟೇ ಅಲ್ಲ, ರೈತರು ಬೇರೆ ಏನೇನೆಲ್ಲಾ ಉತ್ಪಾದನೆ ಮಾಡುತ್ತಾರೋ, ಆ ರೈತರ ಉತ್ಪನ್ನಗಳಿಗೆ ನ್ಯಾಯಯುತವಾದ ಬೆಲೆ ಸಿಗಬೇಕು ಎಂದು ಅವರು ಹೋರಾಟ ಮಾಡಿದರು. ಈ ಮಧ್ಯವರ್ತಿಗಳನ್ನು ತೆಗೆಯಬೇಕು ಎನ್ನುವುದು ಇವರ ಮುಖ್ಯವಾದಂತಹ ಉದ್ದೇಶವಾಗಿತ್ತು. ರೈತರು ನೇರವಾಗಿ ತಮ್ಮ ವ್ಯವಹಾರಗಳನ್ನು ತಾವೇ ನಿಭಾಯಿಸಿಕೊಳ್ಳಬೇಕು, ಮಧ್ಯವರ್ತಿಗಳು ಇರಬಾರದು ಎಂಬುದು ಅವರ ನಿಲುವಾಗಿತ್ತು. ಅವರು ಆನಂದ್‌ನಲ್ಲಿ ಇದ್ದಾಗ, ಕರ್ನಾಟಕದ Karnataka Milk Federation ಮುಂತಾದ ಸಂಸ್ಥೆಗಳಿಗೆಲ್ಲಾ ಸಹಾಯ ಮಾಡುತ್ತಿದ್ದರು. ಬೇರೆ ರಾಜ್ಯಗಳಲ್ಲೆಲ್ಲಾ

ಇವತ್ತು ಹಾಲಿನ ಉತ್ಪಾದನೆ ಹೆಚ್ಚಾಗಬೇಕಾದರೆ, ಅದಕ್ಕೆ ರಾಷ್ಟ್ರಮಟ್ಟದಲ್ಲಿ ಒಂದು ಮಾರುಕಟ್ಟೆ ಸಿಗಬೇಕಾದರೆ ಮತ್ತು ಬೇರೆ ರಾಷ್ಟ್ರಗಳಿಗೆ ನಮ್ಮ product ಅನ್ನು ಕಳುಹಿಸಬೇಕಾದರೆ, ಬೇರೆ ದೇಶಗಳಲ್ಲೂ ಅದಕ್ಕೆ ಮಾರುಕಟ್ಟೆ ಸಿಗಬೇಕಾದರೆ, ಅದಕ್ಕೆ ಡಾ:ಕುರಿಯನ್‌ರವರು ಕಾರಣ ಎನ್ನುವುದನ್ನು ಇವತ್ತು ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ. ಅವರು ಮಾಡಿದ ಸೇವೆಗಾಗಿ ಅನೇಕ ಪ್ರಶಸ್ತಿಗಳು ಅವರಿಗೆ ಬಂದಿವೆ. ವಿಶ್ವ ಆಹಾರ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ ಮುಂತಾದ ರಾಷ್ಟ್ರಮಟ್ಟದ ಅನೇಕ ಪ್ರಶಸ್ತಿಗಳು ಅವರಿಗೆ ಸಿಕ್ಕಿವೆ. ಅವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರಿಗೆ ನಾನು ಗೌರವವನ್ನು ಸಲ್ಲಿಸಿ, ಅವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತೇನೆ. ಇನ್ನು ವಿ.ಎನ್.ಸುಬ್ಬ-ರಾವ್‌ರವರು ಇತ್ತೀಚಿನವರೆಗೂ ನಮ್ಮ ಜೊತೆಗಿದ್ದರು. ಅವರು ಬಹಳ ದೀರ್ಘಕಾಲ ಪತ್ರಿಕೋದ್ಯಮದಲ್ಲಿ ಕೆಲಸ ಮಾಡಿದವರಾಗಿದ್ದರು. ಪತ್ರಿಕೋದ್ಯಮದಲ್ಲಿ ಅವರನ್ನು "ಭೀಷ್ಮ" ಎಂದೇ ಕರೆಯುತ್ತಿದ್ದರು. ಅವರು ಅನೇಕ ಅಕಾಡೆಮಿಗಳಲ್ಲಿ ಕೆಲಸ ಮಾಡಿ, ಅಪಾರ ಅನುಭವವನ್ನು ಗಳಿಸಿದ್ದರು. ಈಗಿನ ಪತ್ರಿಕೋದ್ಯಮಿಗಳಿಗೆ ಮತ್ತು ಮಾಧ್ಯಮ ಪ್ರಪಂಚದಲ್ಲಿ ಕೆಲಸ ಮಾಡತಕ್ಕವರಿಗೆ ಅವರು ಒಂದು ರೀತಿಯಲ್ಲಿ ಆದರ್ಶ ವ್ಯಕ್ತಿಯಾಗಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರ ಜೊತೆಗೆ ನಾನು ಬಹಳ ನಿಕಟವಾದ ಸಂಬಂಧ ಹೊಂದಿದ್ದೆ. ನಾನು ಅವರನ್ನು ಆಗಾಗ್ಗೆ ಭೇಟಿ ಮಾಡಿ ಚರ್ಚೆ ಮಾಡುತ್ತಿದ್ದೆ. ಅವರು ನನಗೆ ಅನೇಕ ರೀತಿಯ ಸಲಹೆಗಳನ್ನು ಕೊಡುತ್ತಿದ್ದರು. 'ಸಂಯುಕ್ತ ಕರ್ನಾಟಕ' ಮತ್ತು 'ಕನ್ನಡ ಪ್ರಭ' ಈ ಎರಡೂ ದಿನಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದ್ದರು. ಅವರು ನಿವೃತ್ತಿಯಾದ ಮೇಲೆ, ಅಂಕಣಕಾರರಾಗಿ ರಾಜಕೀಯ ವಿಶ್ಲೇಷಣೆ ಮಾಡುತ್ತಿದ್ದರು. ಅವರಿಗೆ ಕೊನೆಯ ಕಾಲದಲ್ಲಿ ಕ್ಯಾನ್ಸರ್ ಬಂದಿತ್ತು. ಅವರು ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿದ್ದಾಗ, ನಾನು ಒಮ್ಮೆ ಅವರನ್ನು ನೋಡಲಿಕ್ಕೆ ಹೋಗಿದ್ದೆ. ಆಗ ಅವರು 'ಸಿದ್ದರಾಮಯ್ಯನವರೆ, ನಾನು ಬೇಗ recover ಆಗಿ ಬಿಡುತ್ತೇನೆ' ಎಂದು ನನಗೆ ಹೇಳಿದ್ದರು. 'ನಾನು ಚೆನ್ನಾಗಿ ಗುಣಮುಖನಾಗುತ್ತಿದ್ದೇನೆ. ಇಲ್ಲಿ ಟ್ರೀಟ್‌ಮೆಂಟೆಲ್ಲಾ ಚೆನ್ನಾಗಿ ಕೊಡುತ್ತಿದ್ದಾರೆ, ನಮ್ಮ ದೂರದ ಸಂಬಂಧಿಕರೇ ಇಲ್ಲಿ ಡಾಕ್ಟರ್‌ಗಳಾಗಿದ್ದಾರೆ, ನಾನು ಬೇಗ

recover ಆಗಿ ಬಿಡುತ್ತೇನೆ ಎನ್ನುವಂತಹ ವಿಶ್ವಾಸ ನನಗೆ ಬಂದಿದೆ' ಎಂದು ಅವರು ನನಗೆ ಹೇಳಿದ್ದರು. ಅವರು ಹೀಗೆ ನನಗೆ ಹೇಳಿದ ಒಂದು ತಿಂಗಳಿಗೇ ಸಾವಿಗೀಡಾದರು. ಆ ಖಾಯಿಲೆ ಹೀಗೇ ಎಂದು ಹೇಳುವುದಕ್ಕಾಗುವುದಿಲ್ಲ. ಪಾಪ! ಅವರಿಗೆ ಯಾವ ಚಟವೂ ಇರಲಿಲ್ಲ. ಅವರು ಸಿಗರೇಟ್ ಸೇದುತ್ತಿ-ರಲಿಲ್ಲ, ವಿಸ್ಕಿ ಕುಡಿಯುತ್ತಿರಲಿಲ್ಲ. ಅವರಿಗೆ ಬೇರೆ ಇನ್ಯಾವ ಚಟಗಳೂ ಇರಲಿಲ್ಲ. ಏನೋ ಹೊಗೆಸೊಪ್ಪು ತಿನ್ನುತ್ತಿದ್ದರು ಅಥವಾ ಗುಟ್ಕಾ ತಿನ್ನುತ್ತಿದ್ದರು, ಅದಕ್ಕೆ ಅವರಿಗೆ ಆ ಖಾಯಿಲೆ ಬಂತು ಎನ್ನುವಂತಿರಲಿಲ್ಲ. ಅವರಿಗೆ ಅಂತಹ ಯಾವ ಚಟವೂ ಇರಲಿಲ್ಲ. ಯಾವ ಚಟವೂ ಇಲ್ಲದೆ ಅವರು ಇಂತಹ ಮಾರಕ ಖಾಯಿಲೆಗೆ ತುತ್ತಾಗಿದ್ದರು. ಪಾಪ! ನಾನು ಈ ಸಂದರ್ಭದಲ್ಲಿ ಅವರನ್ನು ನೆನಪು ಮಾಡಿಕೊಳ್ಳುತ್ತಾ, ಅವರಿಗೆ ಗೌರವವನ್ನು ಸಲ್ಲಿಸಿ, ಅವರ ಆತ್ಮಕ್ಕೆ ಶಾಂತಿ ಕೋರತಕ್ಕಂಥ ಕೆಲಸವನ್ನು ಮಾಡುತ್ತೇನೆ. ಮಾನ್ಯ ಬಾಬುರಾವ್ ಕಮತಿ ಎಂಬುವವರು ಕಾಲವಾಗಿದ್ದಾರೆ. ಇವರು ಕನ್ನಡದ ಬಗ್ಗೆ ಅಪಾರವಾದ ಕಾಳಜಿ ಇಟ್ಟುಕೊಂಡವರಾಗಿದ್ದರು. ಗಡಿ ನಾಡಿನಲ್ಲಿ ಇರತಕ್ಕಂಥ ಜನರ ಬಗ್ಗೆ, ಅವರ ಅಭಿವೃದ್ಧಿ ಬಗ್ಗೆ ಕಾಳಜಿ ಹೊಂದಿದ್ದರು. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೂಡ ಸಿಕ್ಕಿತ್ತು. ಇವರ ಆತ್ಮಕ್ಕೆ ಶಾಂತಿ ಕೋರಿ, ನೀವು ಮಂಡಿಸಿರುವ ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸಿ, ನಾನು ಮೃತರಿಗೆ ಗೌರವ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :- (ಹೊಳೆನರಸೀಪುರ) ಮಾನ್ಯ ಅಧ್ಯಕ್ಷರೆ, ಮಾಜಿ ಪ್ರಧಾನ ಮಂತ್ರಿಗಳಾದ ದಿ. ಐ.ಕೆ. ಗುಜ್ರಾಲ್‌ರವರು ಮತ್ತು ಕರ್ನಾಟ-ಕದ ಮಾಜಿ ಮಂತ್ರಿಗಳಾದಂತಹ ದಿ. ಬಿ.ಮುನಿಯಪ್ಪ ಮುದ್ದಪ್ಪ, ವಿಧಾನ ಸಭೆಯ ಮಾಜಿ ಸದಸ್ಯರಾದ ದಿ. ಡಾ:ಹೆಚ್. ಪುಟ್ಟದಾಸ್, ಜಿ.ಜಿ. ಯಲ್ಲಿಗುತ್ತಿ, ಬಿ.ಆರ್. ಧನಂಜಯ, ಎಂ. ಶಂಕರರೆಡ್ಡಿ, ಡಿ.ಬಿ. ಗಂಗಾಧರಪ್ಪ, ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಡಾ:ಸಿ. ಬಂದೀಗೌಡ, ಮತ್ತು ಕೇಂದ್ರದ ಸಚಿವರಾಗಿದ್ದ ವಿಲಾಸ್‌ರಾವ್ ದೇಶಮುಖ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥರಾಗಿದ್ದ ಕೆ.ಎಸ್. ಸುದರ್ಶನ್, ಶಿವಸೇನೆಯ ಮುಖ್ಯಸ್ಥರಾಗಿದ್ದ ಬಾಳಾಸಾಹೇಬ್ ಠಾಕ್ರೆ, ಕ್ಷೀರಕ್ರಾಂತಿ ಹರಿಕಾರ ಡಾ. ವರ್ಗೀಸ್ ಕುರಿಯನ್, ಹಿರಿಯ ಪತ್ರಕರ್ತ ವಿ.ಎಸ್. ಸುಬ್ಬರಾವ್ ಬಗ್ಗೆ ಸರ್ಕಾರ ಏನು

ಸಂತಾಪ ಸೂಚನೆಯನ್ನು ತಂದಿದೆ ಅದಕ್ಕೆ ನಾನು ಬೆಂಬಲ ವ್ಯಕ್ತಪಡಿಸಿ, ಐ.ಕೆ. ಗುಜ್ರಾಲ್‌ರವರು 1997ರಿಂದ 1998ರವರೆಗೆ ರಾಷ್ಟ್ರದ ಪ್ರಧಾನ ಮಂತ್ರಿಗಳಾಗಿ ಸೇವೆ ಸಲ್ಲಿಸಿ ತಮ್ಮ 92ನೇ ವಯಸ್ಸಿನಲ್ಲಿ ನಿಧನ ಹೊಂದಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನೆಲೆಯಿರುವ ಗೂಜ್ರಾಲ್‌ರವರು 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿ-ಸಿದ್ದರು. ವಿದ್ಯಾರ್ಥಿ ಹಂತದಲ್ಲಿಯೇ ಸಕ್ರಿಯ ರಾಜಕಾರಣಿಯಾದ ಗುಜ್ರಾಲ್‌ರವರು 1964ರಲ್ಲಿ ಪ್ರಥಮ ಬಾರಿಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿ, ರಾಜಕೀಯ ಹಾಗೂ ತಾಂತ್ರಿಕ ಕ್ಷೇತ್ರದ ಹೊಸ ಅಧ್ಯಾಯಕ್ಕೆ ನಾದಿ ಆಗಿರುತ್ತಾರೆ. ಮಾನ್ಯ ವಿ.ಪಿ.ಸಿಂಗ್ ಹಾಗೂ ಮಾನ್ಯ ದೇವೇಗೌಡರ ಮಂತ್ರಿಮಂಡಲದಲ್ಲಿ ವಿದೇಶಾಂಗ ವ್ಯವಹಾರಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾಗಿ ಅಪಾರ ಅನುಭವ ಹೊಂದಿದ್ದರು. ೧೯೮೦ರಲ್ಲಿ ಕಾಂಗ್ರೆಸ್ ತೊರೆದು ಜನತಾದಳ ಸೇರಿದರು. ೧೯೮೯ರ ಲೋಕಸಭೆಗೆ ಆಯ್ಕೆಯಾಗಿ ವಿದೇಶಾಂಗ ಸಚಿವರಾಗಿದ್ದರು, ಮಾನ್ಯ ಗುಜ್ರಾಲ್‌ರವರು ಸುಮಾರು ೧೧ ತಿಂಗಳ ಕಾಲ ಪ್ರಧಾನ ಮಂತ್ರಿಗಳಾಗಿ ಹಾಗೂ ಹಲವಾರು ಗೌರವಾನ್ವಿತ ಹುದ್ದೆಗಳನ್ನು ಅಲಂಕರಿಸಿದ್ದರು.

ಅವರ ಆತ್ಮಕ್ಕೆ ಮತ್ತು ಅವರ ಕುಟುಂಬಕ್ಕೆ ಶಾಂತಿ ಸಿಗಲಿ ಎಂದು ಹಾರೈಸಿ, ಮಾನ್ಯ ಮುನಿಯಪ್ಪ ಮುದ್ದಪ್ಪ ರವರು 1994 - 2004ರಲ್ಲಿ ನಮ್ಮ ಜೊತೆ ಶಾಸಕರಾಗಿ ಆಯ್ಕೆಯಾಗಿ ಮುಜರಾಯಿ ಖಾತೆಯ ಸಚಿವರಾಗಿದ್ದರು. ಒಬ್ಬ ಹಿಂದುಳಿದ ವರ್ಗದ ಒಬ್ಬ ಪ್ರಾಮಾಣಿಕ ನಾಯಕರನ್ನು ಹಾಗೂ ನೇರ ನುಡಿಯ ಒಬ್ಬ ಪ್ರಾಮಾಣಿಕ ಮಾಜಿ ಮಂತ್ರಿಗಳನ್ನು ಕಳೆದು ಕೊಂಡಿರುವುದು ಬಹಳ ದು:ಖದ ಸಂಗತಿ ಎಂದು ಹೇಳಿ, ಅವರ ಕುಟುಂಬಕ್ಕೆ ಶಾಂತಿ ಸಿಗಲಿ ಎಂದು ಹೇಳಿ, ಇವರ ಜೊತೆಗೆ ಡಾ: ಹೆಚ್. ಪುಟ್ಟದಾಸ್‌ರವರು, ಜಿ.ಜಿ.ಯಲ್ಲಿಗುತ್ತಿ ಮತ್ತು ಬಿ.ಆರ್. ಧನಂಜಯ ಅವರ ಕುಟುಂಬಕ್ಕೆ ಶಾಂತಿ ಸಿಗಲಿ ಎಂದು ಹೇಳಿ, ಅವರ ಜೊತೆ ಎಂ. ಶಂಕರರೆಡ್ಡಿರವರು ಬಳ್ಳಾರಿಯ ಶಿರಗುಪ್ಪ ಕ್ಷೇತ್ರದಿಂದ ನಾಲ್ಕು ಸಾರಿ ಶಾಸಕರಾಗಿ ಆಯ್ಕೆಯಾಗಿದ್ದ ಪ್ರಾಮಾಣಿಕರಾದ ಶಾಸಕರು ಅವರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಇವರು ನಾಲ್ಕು ಸಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ, ಡಿ.ಬಿ.

ಗಂಗಾಧರಪ್ಪ ಇವರು ನಮ್ಮ ಜಿಲ್ಲೆಯ ಪ್ರಾಮಾಣಿಕರಾದ ರಾಜಕಾರಣಿ. ಅವರು ಹಲವಾರು ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ, ೧೯೭೮ರಲ್ಲಿ ಅರಸೀಕೆರೆ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ೧೯೮೫ರಲ್ಲಿ ನಮ್ಮ ಪಕ್ಷದಿಂದಲೇ ಶಾಸಕರಾಗಿ ಆಯ್ಕೆಯಾಗಿದ್ದ ಒಬ್ಬ ಪ್ರಾಮಾಣಿಕ ವ್ಯಕ್ತಿ. ಗ್ರಾಮಾಂತರ ಪ್ರದೇಶದ ಜನರು ಎಲ್ಲರೂ ಇವರನ್ನು "ಗುರುಗಳು" ಎನ್ನುವ ಭಾವನೆ ವ್ಯಕ್ತಪಡಿಸುವ ಒಬ್ಬ ಸಾಮಾಜಿಕ ರಾಜಕಾರಣಿಯಾಗಿದ್ದರು. ಅವರ ಕುಟುಂಬಕ್ಕೆ ಮತ್ತು ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ, ಡಾ: ಸಿ. ಬಂದೀಗೌಡ ರವರು ಒಬ್ಬ ಪ್ರಾಮಾಣಿಕರಾದ ವಿಧಾನ ಪರಿಷತ್ ಸದಸ್ಯರಾಗಿ ಮೈಸೂರು ಪ್ರಜಾಪ್ರತಿನಿಧಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಅವರ ಕುಟುಂಬಕ್ಕೆ ಶಾಂತಿ ಸಿಗಲಿ ಎಂದು ಹೇಳಿ, ಮಾನ್ಯ ವಿಲಾಸರಾವ್ ದೇಶಮುಖ್ ರವರು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿ, ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು, ಅವರು ಒಬ್ಬ ಗ್ರಾಮೀಣ ಪ್ರದೇಶದ ರಾಜಕಾರಣಿಯಾಗಿದ್ದರು. ಅವರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಹೇಳಿ, ಮಾನ್ಯ ದಿ. ಕೆ.ಎಸ್. ಸುದರ್ಶನ್ ಹಾಗೂ ಬಾಳಾಸಾಹೇಬ್ ಠಾಕ್ರೆ ಯವರ ಕುಟುಂಬಕ್ಕೆ ಶಾಂತಿ ಸಿಗಲಿ ಎಂದು ಹೇಳಿ, ಡಾ: ವರ್ಗೀಸ್ ಕುರಿಯನ್ ರವರ ಬಗ್ಗೆ ವಿಶೇಷವಾಗಿ ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿ ಏನಾದರೂ ಕ್ಷೀರ ಕ್ರಾಂತಿ ಆಗಬೇಕಾಗಿದ್ದರೆ, ಅದರ ಜೊತೆಯಲ್ಲಿ ನಮ್ಮ ರಾಜ್ಯ ಇಡೀ ರಾಷ್ಟ್ರದಲ್ಲಿ ಎರಡನೇ ಸ್ಥಾನದಲ್ಲಿ ಬರಬೇಕಾದರೆ ಡಾ: ಕುರಿಯನ್‌ರವರೇ ಕಾರಣ ಎಂದು ಹೇಳಬೇಕಾಗುತ್ತದೆ. ಡಾ: ಕುರಿಯನ್‌ರವರು ಇದ್ದಾಗ ಅವರು ಏನು ಗ್ರಾಮೀಣ ಪ್ರದೇಶದ ಹಾಲು ಉತ್ಪಾದಕರ ಬಗ್ಗೆ ಶ್ರಮ ಪಟ್ಟ ಒಬ್ಬ ಪ್ರಾಮಾಣಿಕ ನಾಯಕರು ಎಂದು ಹೇಳಬೇಕಾಗುತ್ತದೆ. ಅವರು ಬೆಂಗಳೂರಿನಲ್ಲಿ ಸುಮಾರು ೫೦ ಕೋಟಿ ರೂಪಾಯಿ ಖರ್ಚು ಮಾಡಿ ಮದರ್ ಡೈರಿ ಕಟ್ಟಿಸಿದರು. ಸುಮಾರು ೭೦ ಕೋಟಿ ರೂಪಾಯಿ ಖರ್ಚು ಮಾಡಿ Fruits and vegetables market ಅನ್ನು ಬೆಂಗಳೂರಿನಲ್ಲಿ ಮಾಡಿ ಕೊಟ್ಟಿದ್ದಾರೆ. ಅದರ ಜೊತೆಗೆ ನಮ್ಮ ಜಿಲ್ಲೆಯ ಚನ್ನರಾಯ ಪಟ್ಟಣ ತಾಲ್ಲೂಕಿನಲ್ಲಿ ಸುಮಾರು ೧೦೦ ಕೋಟಿ ರೂ. ಬೆಲೆ ಬಾಳುವಂತಹ ಒಂದು ಪೌಡರ್ ಪ್ಲಾಂಟ್ ಮತ್ತು ಐಸ್‌ಕ್ರೀಂ ಪ್ಲಾಂಟ್ ಅನ್ನು ಕಟ್ಟಿಸಿದ್ದಾರೆ. ಇವತ್ತು ಏನು ೪೦,೦೦೦ ಲೀಟರ್ ಹಾಲು ಬರುತ್ತಿದೆ ಅದಕ್ಕೆ ಕಾರಣಕರ್ತರು ಡಾ: ಕುರಿಯನ್‌ರವರು ಎಂದು ಹೇಳಬೇಕಾಗುತ್ತದೆ. ಅವರು

ಅವರದ್ದೇ ಆದ ಡೈರಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಅವರು ಮಾಡಿರುವ ಕೆಲಸವನ್ನು ಯಾವ ರೀತಿ ಹೇಳಿದರೂ ಸಾಲದು. ಅವರ ಕುಟುಂಬದವರಿಗೆ ಶಾಂತಿ ಸಿಗಲಿ ಎಂದು ಹೇಳಿ, ವಿ.ಎನ್. ಸುಬ್ಬರಾವ್ ರವರು ಒಬ್ಬ ಪ್ರಾಮಾಣಿಕವಾದ ಪತ್ರಕರ್ತರು. ರಾಮಪ್ರಸಾದ್‌ರವರು, ಸತ್ಯನಾರಾಯಣ-ರವರು ಇವರೆಲ್ಲಾ ಒಂದು ಟೀಂನಲ್ಲಿದ್ದಂತಹವರು. ನಮ್ಮ ರಾಜ್ಯದ ಒಬ್ಬ ಉತ್ತಮ ಪತ್ರಕರ್ತರನ್ನು ನಾವು ಕಳೆದುಕೊಂಡ ಹಾಗಾಗಿದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳಿ, ಡಾ:ಅನಿಲ್ ಬಾಬುರಾವ್ ಕಮತಿ ಯವರು 1954 ರಲ್ಲಿ ಜನಿಸಿ ಖ್ಯಾತ ವೈದ್ಯರಾಗಿದ್ದರು, ಸಾಹಿತಿಗಳಾಗಿದ್ದರು, ಇವರು ಕನ್ನಡ ನಾಡಿನ ನುಡಿಗೆ ಶ್ರಮಿಸಿರುತ್ತಾರೆ. ಬೆಳಗಾವಿ ಗಡಿ ಭಾಗದ ಕನ್ನಡಿಗರ ಕನ್ನಡ ಭಾಷೆಯ ಹಿತಚಿಂತಕರಾಗಿದ್ದರು, ಇವರು ಅಪಾರ ಗೌರವ ಹೊಂದಿದವರಾಗಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು):- ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂತಹ ಸಂತಾಪ ಸೂಚನಾ ನಿರ್ಣಯದಲ್ಲಿ ನಾನೂ ಸಹ ಭಾಗವಹಿಸಿ ಕೆಲವರ ಬಗ್ಗೆ ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಮಾನ್ಯ ಐ.ಕೆ. ಗುಜ್ರಾಲ್‌ರವರು ಅತ್ಯಂತ ಪ್ರಾಮಾಣಿಕ, ಆದರ್ಶ ಮತ್ತು ದಕ್ಷ ಪ್ರಧಾನಿಯಾಗಿದ್ದರು. ಪ್ರಧಾನಿಯಾಗಿದ್ದಾಗ ಅವರ ನಡೆ ಮತ್ತು ಆದರ್ಶ ಮತ್ತು ಮಾಜಿ ಪ್ರಧಾನಿಗಳಾಗಿದ್ದಾಗ ಸಹ ಅವರ ಆದರ್ಶ ಮತ್ತು ನಡೆ ಇವತ್ತಿನ ದಿವಸ ನಮ್ಮ ದೇಶದ ಎಲ್ಲಾ ರಾಜಕಾರಣಿಗಳಿಗೂ ಆದರ್ಶಪ್ರಾಯ ಎನ್ನುವುದು ನನ್ನ ಅಭಿಪ್ರಾಯ. ಅವರ ಆದರ್ಶ ಮತ್ತು ಅವರ ಒಳ್ಳೆಯ ಗುಣಗಳು ನಮ್ಮಲ್ಲಿಯೂ ಸಹ ರೂಢಿಸಿಕೊಳ್ಳುವುದಕ್ಕೆ ಅವಕಾಶವಾಗಲಿ ಎಂದು ಆಶಯ ಮಾಡಿ, ಅವರ ನಿಧನಕ್ಕೆ ನಾನೂ ಕೂಡ ಸಂತಾಪವನ್ನು ಕೋರಿ, ಅವರ ಸಂಸಾರಕ್ಕೆ ಈ ದು:ಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಹೇಳಿ ಆಶಿಸುತ್ತಿದ್ದೇನೆ. ಡಾ: ಹೆಚ್. ಪುಟ್ಟದಾಸ್‌ರವರು ನಾನು ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದೆವು. ಅವರು ೧೯೬೭ ಮತ್ತು ೧೯೭೭ರಲ್ಲಿ ಎರಡು ಬಾರಿ ವಿಧಾನಸಭೆಯ ಸದಸ್ಯರಾಗಿದ್ದರು. ಮತ್ತು ಶೋಷಿತ ವರ್ಗದಿಂದ ಬಂದಂತಹವರು. ಈ ಸಮಾಜದ ಶೋಷಣೆ ಬಗ್ಗೆ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಅತ್ಯಂತ ಕಾಳಜಿಯನ್ನು ವಹಿಸಿದ್ದಂತಹವರು.

ಹಲವು ರಾಜಕಾರಣಿಗಳಿಗೆ ನೇರವಾಗಿ ದಿಟ್ಟತನದಿಂದ ಅವರಿಗೆ ಅನಿಸಿದ್ದನ್ನು ತಿಳಿಸತಕ್ಕಂತಹ ಸ್ವಭಾವ ಅವರಲ್ಲಿ ಇತ್ತು. ಅವರು ೨೬.೦೮.೨೦೧೨ ರಲ್ಲಿ ನಿಧನರಾಗಿರತಕ್ಕಂಥದ್ದು ನಮ್ಮ ರಾಜ್ಯಕ್ಕೆ ಹಾಗೂ ನನಗೆ ವೈಯಕ್ತಿಕವಾಗಿ ಅತ್ಯಂತ ದು:ಖವನ್ನು ತಂದಿದೆ. ಅವರಿಗೂ ಸಹ ಶಾಂತಿಯನ್ನು ಕೋರುತ್ತೇ-ನೆ. ಡಾ: ಬಂದೀಗೌಡರು ಮಂಡ್ಯ ಜಿಲ್ಲೆಯವರು. ಅತ್ಯಂತ ಶಾಂತ ಸ್ವಭಾವ-ದವರು. ಸರಳ ಜೀವನವನ್ನು ನಡೆಸಿದಂತಹ ವ್ಯಕ್ತಿ ಆಗಿದ್ದರು. ಅವರಿ ಗೂ ಸಹ ನಾನು ನನ್ನ ಗೌರವವನ್ನು ಅರ್ಪಿಸುತ್ತಿದ್ದೇನೆ. ಡಾ: ಕುರಿಯನ್‌ರವರು ಈ ರಾಷ್ಟ್ರದಲ್ಲಿ ಕ್ಷೀರ ಕ್ರಾಂತಿಯನ್ನು ಮಾಡಿದಂತಹ ವ್ಯಕ್ತಿ. ಗುಜರಾತಿನಲ್ಲಿ ೧೯೪೬ರಲ್ಲಿ ಆನಂದ ಸರ್ಕಾರಿ ಕೆನೆ ಘಟಕವನ್ನು ಸೇರಿ ಈ ದೇಶಕ್ಕೆ ಮಾನವ ಕುಲಕ್ಕೆ ಅತ್ಯಂತ ಅಭೂತಪೂರ್ವವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರು ವಿಶ್ವ ಆಹಾರ ಪ್ರಶಸ್ತಿಯನ್ನು ಪಡೆದರು, ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಯನ್ನು ಸಹ ಪಡೆದಿದ್ದರು. ಅವರ ಆತ್ಮಕ್ಕೂ ಕೂಡ ನಾನು ಶಾಂತಿಯನ್ನು ಕೋರುತ್ತಾ ಡಾ:ಕುರಿಯನ್‌ರವರು ಕ್ಷೀರ ಕ್ಷೇತ್ರವನ್ನು ಏನು ಆದರ್ಶವನ್ನಾಗಿ ಇಟ್ಟಿದ್ದರೋ ಅದನ್ನು ನಾವೆಲ್ಲರೂ ಕೂಡ ಪಾಲನೆ ಮಾಡತಕ್ಕಂಥದ್ದು ಅವರಿಗೆ ನಾವು ಕೊಡತಕ್ಕಂಥ ಗೌರವವೆಂದು ನಾನು ಭಾವಿಸಿದ್ದೇನೆ. ಇನ್ನು ವಿ.ಎನ್. ಸುಬ್ಬರಾವ್‌ರವರು ಕೂಡ ನನಗೆ ಬಹಳ ಆತ್ಮೀಯರಾಗಿದ್ದರು. ಅವರ ಅಣ್ಣ ವಿ.ಎನ್. ನಾಗರಾಜ್ ಎನ್ನುವವರು ಇದ್ದರು. ಅವರು ಕೂಡ ನಮ್ಮ ಜೊತೆ ಅತ್ಯಂತ ಹೆಚ್ಚಿನ ಒಡನಾಟದಲ್ಲಿ ಇದ್ದರು. ಸುಬ್ಬರಾವ್‌ರವರು ಒಬ್ಬ ಪತ್ರಕರ್ತನಾಗಿ ೪೦ ವರ್ಷಗಳ ದೀರ್ಘ ಕಾಲಕ್ಕಿಂತಲೂ ಹೆಚ್ಚು ವರ್ಷಗಳ ಕಾಲ ಕೆಲಸವನ್ನು ಮಾಡಿ ಆದರ್ಶ ಪತ್ರಕರ್ತ ಹೇಗಿರಬೇಕು ಮತ್ತು ವಿಷಯಾಧಾರಿತವಾಗಿ ಹಲವಾರು ವಿಷಯಗಳನ್ನು ಜನತೆಗೆ ಹೇಗೆ ತಿಳಿಸಬೇಕು ಎನ್ನುವಂಥದ್ದರಲ್ಲಿ ಮುಂಚೂಣಿಯಲ್ಲಿ ಕೆಲಸ ಮಾಡುವಂಥವರಾಗಿದ್ದರು. ಅವರು ಪತ್ರಕರ್ತ ಕೆಲಸದಿಂದ ನಿವೃತ್ತಿಯಾದ ಮೇಲೂ ಕೂಡ ಹಲವಾರು ಹಿರಿಯ ರಾಜಕಾರಣಿಗಳಿಗೆ ಪಕ್ಷಾತೀತವಾಗಿ ನೇರವಾಗಿ ಅವರ ತಿಳುವಳಿಕೆಯನ್ನು , ಅವರ ಜ್ಞಾನವನ್ನು ಹೇಳಿಕೊಡುತ್ತಿ-ದ್ದರು. ಅಂಥ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಿರತಕ್ಕಂಥದ್ದು ನಮ್ಮ ರಾಜ್ಯಕ್ಕೆ ಅತ್ಯಂತ ನಷ್ಟ ಉಂಟಾಗಿದೆ. ನನಗೂ ಕೂಡ ವೈಯಕ್ತಿಕವಾಗಿ ಅವರನ್ನು ಕಳೆದುಕೊಂಡಿರತಕ್ಕಂಥದ್ದು ಬಹಳ ದು:ಖವಾಗಿದೆ. ಇನ್ನು ಅಗಲಿದ ಉಳಿದ

ಎಲ್ಲ ನಾಯಕರ ಬಗ್ಗೆ ನಾನು ನನ್ನ ಅನುಕಂಪವನ್ನು ಸೂಚಿಸಿ ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯಕ್ಕೆ ನಾನೂ ಕೂಡ ನನ್ನ ಧ್ವನಿಗ ೂಡಿಸಿ ಎಲ್ಲಾ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರ):- ಮಾನ್ಯ ಅಧ್ಯಕ್ಷರೆ, ೧೩ನೇ ವಿಧಾನಸಭೆಯ ಕೊನೆಯ ಹಂತದಲ್ಲಿ ನಾವಿದ್ದೇವೆ. ೧೩ನೇ ವಿಧಾನಸಭೆಯ ೧೫ನೇ ಅಧಿವೇಶನವು ಈ ಅಖಂಡ ಕರ್ನಾಟಕದ ಬೆಳಗಾವಿಯಲ್ಲಿ ಇವತ್ತು ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ಐತಿಹಾಸಿಕ ಕ್ಷಣಗಳಲ್ಲಿ ಹೋಗತ-ಕ್ಕಂಥ ಸಂದರ್ಭ ಇದಾಗಿದೆ. ತಾವು ಪೀಠವನ್ನು ಅಲಂಕರಿಸಿದ್ದೀರಿ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾರೆ. ಮಾನ್ಯ ಸಿದ್ದರಾಮಯ್ಯ-ನವರು ವಿರೋಧ ಪಕ್ಷದ ನಾಯಕರಾಗಿ ಇತಿಹಾಸದಲ್ಲಿ ಸೇರಿರತಕ್ಕಂಥ ಒಂದು ಕ್ಷಣಗಣನೆ ಪ್ರಾರಂಭವಾಗಿದೆ. ಇಂಥ ಸಂದರ್ಭದಲ್ಲಿ ವಾಡಿಕೆ, ವಿಧಾನಸಭೆ ಪ್ರಾರಂಭವಾದ ಸನ್ನಿವೇಶದಲ್ಲಿ, ಇವತ್ತು ಬಹಳ ದಿವಸಗಳ ಕಾಲ ಅಧಿವೇಶನ ಹಿಂದೆ ಸೇರದಿದ್ದ ಕಾರಣ, ಈ ನಾಡಿಗೆ, ಈ ದೇಶಕ್ಕಾಗಿ ತ್ಯಾಗ ಮಾಡಿದ ಮತ್ತು ಬಲಿದಾನವನ್ನು ಮಾಡಿರತಕ್ಕಂಥ ಮತ್ತು ತಮ್ಮದೇ ಆದಂಥ ಕೊಡುಗೆಗಳನ್ನು ನೀಡಿದ ಅನೇಕ ಗಣ್ಯರನ್ನು, ಮಹನೀಯರನ್ನು ಮಹಾನ್ ನಾಯಕರುಗಳ-ನ್ನು ನಾವು ಕಳೆದುಕೊಂಡಿದ್ದೇವೆ. ಅವರ ಹೆಸರಿನಲ್ಲಿ ತಾವು ಸಂತಾಪ ಸೂಚನೆಯನ್ನು ಏನು ಮಂಡಿಸಿದ್ದೀರಿ, ಅದಕ್ಕೆ ಈಗಾಗಲೇ ಸಭಾ ನಾಯಕರು ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡಿ ಏನು ಧ್ವನಿಗೂಡಿಸಿದ್ದಾರೆ, ಅದಕ್ಕೂ ಕೂಡ ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತಾ ಕೆಲವೇ ಮಾತುಗಳ-ನ್ನು ನಾನು ಹೇಳಬಯಸುತ್ತೇನೆ. ಮಾನ್ಯ ಐ.ಕೆ. ಗುಜ್ರಾಲ್‌ರವರನ್ನು ನಾನು ವೈಯಕ್ತಿಕವಾಗಿ ನೋಡಿದಂಥವನು. ಅವರ ಬಗ್ಗೆ ಪುಸ್ತಕದ ಮುಖೇನ ಮತ್ತು ಲೇಖನಗಳ ಮುಖೇನ ಕೂಡ ಅವರ ಪರಿಚಯವನ್ನು ಹೊಂದಿದಂಥವನಾಗಿ ದ್ದೇನೆ. ಬಹುಶ: ಅವರ ರಾಜಕೀಯ ಜೀವನದಲ್ಲಿ ಅಂಥ ಒಬ್ಬ ಸೌಮ್ಯ ವ್ಯಕ್ತಿ ಮತ್ತು ಅಂಥ ಒಬ್ಬ ಸ್ಟೇಟ್ಸ್‌ಮನ್‌ನನ್ನು ಹೋಲುವಂಥ ಇನ್ನೊಬ್ಬರನ್ನು ನಾನು ನೋಡುವುದಕ್ಕಾಗಿಲ್ಲ. ಅಂಥ ವ್ಯಕ್ತಿತ್ವ ಹೊಂದಿದಂಥ ಐ.ಕೆ. ಗುಜ್ರಾಲ್‌ರವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅವರು ಕೆಳಹಂತದಿಂದ ರಾಜಕಾರಣದಲ್ಲಿ ಬಂದು ರಾಜ್ಯಸಭೆ, ಲೋಕಸಭೆ, ಕೇಂದ್ರದ ಮಂತ್ರಿಯಾಗಿ, ರಾಯಭಾರಿಯಾಗಿ

ವಿಶೇಷವಾದಂಥ ಅನುಭವವನ್ನು ಪಡೆದು ಕಡೆಗೆ ಪ್ರಧಾನ ಮಂತ್ರಿಯಾಗಿ ಕೂಡ ಕೆಲಸವನ್ನು ಮಾಡಿ ಇವತ್ತು ನಮ್ಮನ್ನಗಲಿದ್ದಾರೆ. ಬಹುಶ: ಅವರು ತಮ್ಮ ಸ್ಥಾನವನ್ನು ಬಿಟ್ಟಮೇಲೆ ಯಾವುದೇ ರೀತಿಯಾದಂಥ ಗೊಂದಲಗಳಾಗಲಿ ಅವರ ವಿಚಾರದಲ್ಲಿ ಬರದೇ ಇರತಕ್ಕಂಥದ್ದನ್ನು ನೋಡಿದ್ದೇವೆ. ಗುಜ್ರಾಲ್ ಎಂದು ಹೇಳಿದರೆ ಅವರೊಬ್ಬ ಸೌಮ್ಯವಾದಂಥ ವ್ಯಕ್ತಿಯಾಗಿದ್ದು ಎಲ್ಲರಿಗೂ ಕೂಡ ಅವರ ಬಗ್ಗೆ ಗೌರವದ ಭಾವನೆ ಬರತಕ್ಕಂಥ ವ್ಯಕ್ತಿತ್ವವನ್ನು ಅವರು ಸಂಪಾದಿಸಿದ್ದರು. ಇಡೀ ದೇಶದಲ್ಲಿ ಅವರು ಆ ರೀತಿಯಾದ ಹೆಸರನ್ನು ಮಾಡಿದ್ದರು ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಅದೇ ರೀತಿಯಾಗಿ ನಾವು ಬಹಳ ಜನರನ್ನು ಕಳೆದುಕೊಂಡಿದ್ದೇವೆ. ಮಾನ್ಯ ಪುಟ್ಟದಾಸ್‌ರವರು ಕೂಡ ನನಗೆ ಆತ್ಮೀಯರಾಗಿದ್ದರು, ನನ್ನ ಒಡನಾಡಿಯಾಗಿದ್ದರು. ನನ್ನ ಜೊತೆಯಲ್ಲಿ ಕೆಲಸ ಮಾಡಿದಂಥವರಾಗಿದ್ದರು. ಅವರೂ ಕೂಡ ಇವತ್ತು ನಿಧನರಾಗಿದ್ದಾರೆ. ಮಾನ್ಯ ಶಂಕರರೆಡ್ಡಿಯವರ ಮನೆಗೆ ನಾನು ಮತ್ತು ಸಿದ್ದರಾಮಯ್ಯನವರು ಹೋಗಿದ್ದೆವು. ಅವರು ಆರೋಗ್ಯವಾಗಿರುವುದನ್ನು ನೋಡಿ ನಾವು ಖುಷಿಪಟ್ಟೆವು. ಅವರ ಮನೆಯಲ್ಲಿ ನಾವು ತಿಂಡಿ ತಿಂದು ಬಂದೆವು. ಅದಾದ ಸ್ವಲ್ಪ ದಿವಸದಲ್ಲಿಯೇ ಅವರು ವಿಧಿವಶರಾದರು ಎಂದು ಕೇಳುತ್ತಿರುವುದರಿಂದ ನಮಗೆ ಬಹಳ ದು:ಖವಾಗುತ್ತಿದೆ. ಇನ್ನು ಮಾನ್ಯ ಬಂಧೀಗೌಡರು ಕೂಡ ವಿಧಿವಶರಾಗಿದ್ದಾರೆ. ಅದೇ ರೀತಿ ಮಾನ್ಯ ವಿಲಾಸರಾವ್ ದೇಶಮುಖ್‌ರವರು ಕೂಡ ವಿಧಿವಶರಾಗಿದ್ದಾರೆ. ವಿಲಾಸರಾವ್ ದೇಶಮುಖ್‌ರವರು ಎರಡು ಬಾರಿ ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು ಮತ್ತು ಕೇಂದ್ರದಲ್ಲಿಯೂ ಕೂಡ ಸಚಿವರಾಗಿದ್ದರು. ಎಲ್ಲದಕ್ಕಿಂತ ಹೆಚ್ಚಾಗಿ ಅವರು ನಮ್ಮ ತುಮಕೂರು ಜಿಲ್ಲೆಗೆ ಬಹಳ ಹತ್ತಿರವಾಗಿರತಕ್ಕಂಥವರಾಗಿದ್ದರು. ಅವರು ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ತಿಪಟೂರಿನಲ್ಲಿರತಕ್ಕಂಥ ನೊಣವಿನಕೆರೆಯಲ್ಲಿರುವ ಸಿದ್ದೇಶ್ವರಸ್ವಾಮಿ ದೇವಸ್ಥಾನಕ್ಕೆ ತಿಂಗಳಿಗೆ ಒಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ದೇವಸ್ಥಾನಕ್ಕೆ ಬರುತ್ತಿದ್ದರು. ಅವರ ಆ ಒಂದು ಧಾರ್ಮಿಕ ಭಾವನೆ ಏನಿತ್ತೋ ಅದರಂತೆ ಅವರು ಆ ಕ್ಷೇತ್ರಕ್ಕೆ ಭೇಟಿ ನೀಡಿ ಅದೇ ರೀತಿ ಅವರು ನಡೆದುಕೊಳ್ಳುತ್ತಿದ್ದದಂಥದ್ದನ್ನು ನಾವು ನೋಡಿದ್ದೇವೆ. ಹೀಗಾಗಿ ಅವರು ಮಹಾರಾಷ್ಟ್ರಕ್ಕೆ ಎಷ್ಟು ಮುಖ್ಯವಾಗಿದ್ದರೋ ಅದೇ ರೀತಿ ಕರ್ನಾಟಕಕ್ಕೂ ಕೂಡ ಅಷ್ಟೇ ಮುಖ್ಯವಾಗಿರತಕ್ಕಂಥ ವ್ಯಕ್ತಿಯಾಗಿದ್ದರು ಎನ್ನತಕ್ಕಂಥ ಮಾತನ್ನು

ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕಡೆಯದಾಗಿ ಡಾ:ವರ್ಗೀಸ್ ಕುರಿಯನ್‌ರವರು ವಿಧಿವಶರಾಗಿರುವ ಬಗ್ಗೆ ಕೂಡ, ಒಂದೆರಡು ಮಾತುಗಳನ್ನು ಅವರ ಬಗ್ಗೆ ಹೇಳಬಯಸುತ್ತೇನೆ. ಡಾ: ಕುರಿಯನ್‌ರವರು ಈ ದೇಶದಲ್ಲಿ White Revolutionಗೆ ನಾಂದಿಯಾಡಿದಂಥವರಾಗಿದ್ದಾರೆ. ಅವರಿಗೆ, ಅವರು ಮಾಡಿದಂಥ ಸಾಧನೆಗೆ ಭಾರತ ಸರ್ಕಾರ ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗಳನ್ನು ಕೂಡ ಕೊಟ್ಟು ಗೌರವಿಸಿದೆ. ಈ ದೇಶದಲ್ಲಿ ಹಸಿರು ಕ್ರಾಂತಿ ಮತ್ತು ಕ್ಷೀರ ಕ್ರಾಂತಿಗಳೆರಡು ಇಡೀ ದೇಶದ ರೈತ ಸಮುದಾಯಕ್ಕೆ ಶಕ್ತಿಯನ್ನು ಕೊಡತಕ್ಕಂಥ ಕ್ರಾಂತಿಗಳಾಗಿದ್ದು ಕುರಿಯನ್‌ರವರು ಅಂಥ ಕ್ರಾಂತಿಗೆ ಕ್ರಾಂತಿಪುರುಷರಾಗಿದ್ದರು. ಇವರನ್ನು ನಾವು ಬಹುಶ: ಇತಿಹಾಸದ ಪುಟದಲ್ಲಿ ದಾಖಲಿಸತಕ್ಕಂಥ ಸಾಧನೆಗಳನ್ನು ಅವರು ಮಾಡಿದ್ದಾರೆ. ಅವರು ಮಾಡಿರತಕ್ಕಂಥ ಸಾಧನೆ ಯಾರೂ ಕೂಡ ಮರೆಯಲು ಸಾಧ್ಯವಿಲ್ಲ. ಅವರು ಬಹಳ ಮುಖ್ಯವಾಗಿ ಮಾಡಿರತಕ್ಕಂಥ ಕೆಲಸದಿಂದಾಗಿ ಇವತ್ತು ನಾವು ಹಾಲಿನ ಉತ್ಪಾದನೆಯಲ್ಲಿ ಇಡೀ ಪ್ರಪಂಚದಲ್ಲಿ ಪ್ರಥಮ ಸ್ಥಾನದಲ್ಲಿದ್ದೇವೆ. ಈ ರೀತಿಯಾಗುವುದಕ್ಕೆ ಮೂಲ ಕಾರಣ ಡಾ: ಕುರಿಯನ್‌ರವರು. ಅವರು ಈ ಚಿಂತನೆಯ ಹಿನ್ನಲೆಯಲ್ಲಿ ಅವರು ಮಾಡಿದಂಥ ಹೊಸ ಹೊಸ ಆವಿಷ್ಕಾರಗಳೇನಿವೆ, ಆಯಾಮಗಳೇನಿವೆ ಮತ್ತು ಅವರು ತೆಗೆದುಕೊಂಡಂಥ ನಿರ್ಣಯಗಳು, ಮಾಡಿದಂಥ ಪ್ರಯತ್ನಗಳು, ಇವುಗಳನ್ನೆಲ್ಲವನ್ನು ಕೂಡ ಇವತ್ತು ನಾವುಗಳೆಲ್ಲರೂ ಸ್ಮರಿಸಬೇಕಾಗುತ್ತದೆ. ಬಹುಶ: ಅವರಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಕೊಟ್ಟರೆ ತಪ್ಪಾಗಲಾರದು ಎನ್ನುವ ಅಭಿಪ್ರಾಯವನ್ನು ನಾನು ವ್ಯಕ್ತಮಾಡುತ್ತೇನೆ. ಅಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇನ್ನು ವಿ.ಎನ್. ಸುಬ್ಬರಾವ್‌ರವರನ್ನು ಪತ್ರಿಕೋದ್ಯಮದಲ್ಲಿ 'ಭೀಷ್ಮ' ಎಂದೇ ನಾವು ಅವರನ್ನು ತಿಳಿದುಕೊಂಡಿದ್ದೆವು. ಅವರನ್ನು ಕಳೆದುಕೊಂಡು ಇವತ್ತು ನಿಜವಾಗಿಯೂ ಕರ್ನಾಟಕ ವಿಧಾನಸಭೆಗೆ ಬಹಳ ದೊಡ್ಡ ನಷ್ಟವಾಗಿದೆಯೆಂದು ಹೇಳಬಯಸುತ್ತೇನೆ. ಅವರು ಇಲ್ಲಿ ಪ್ರೆಸ್ ಗ್ಯಾಲರಿಯಲ್ಲಿ ಕುಳಿತುಕೊಂಡು ಎಲ್ಲರ ಮಾತುಗಳನ್ನು ಕೇಳಿದ ನಂತರ ಅವರು ಹೆಚ್ಚು ಕಾಲವನ್ನು ಕಳೆಯುತ್ತಿದ್ದದ್ದು ವಿರೋಧ ಪಕ್ಷದವರ ಸಾಲಿನಲ್ಲಿದ್ದಂಥವರ ಜೊತೆ. ವಿರೋಧ ಪಕ್ಷದ ಸಾಲಿನವರ ಹತ್ತಿರ ಬಂದು ಸಭೆ ಹೇಗೆ ನಡೆಯಬೇಕಾಗಿತ್ತು, ಹೇಗೆ

ನಡೆಯುತ್ತಿದೆ, ಹೇಗೆ ತಿದ್ದಬೇಕು ಮತ್ತು ಹೇಗೆ ಸರಿಪಡಿಸಿಕೊಳ್ಳಬೇಕು ಎಂಬ ಬಗ್ಗೆ ಪ್ರತಿಯೊಬ್ಬರ ಜೊತೆ ಕುಳಿತು ಕಾಫಿ ಕುಡಿದುಕೊಂಡು ಮಾತನಾಡಿ ಮಾರ್ಗದರ್ಶನವನವನ್ನು ಕೊಡುತ್ತಿದ್ದರು. ನಾನಂತೂ ಅವರನ್ನು ನನ್ನ ಜೀವನದಲ್ಲಿ ಮರೆಯುವುದಕ್ಕಾಗುವುದಿಲ್ಲ. ಅವರು ನನ್ನ ಜೊತೆಯಲ್ಲಿ ಸುಮಾರು ಹತ್ತಾರು ಬಾರಿ ಕುಳಿತುಕೊಂಡು ನಾನು ಈ ರೀತಿಯಾಗಿ ಚರ್ಚೆ ಮಾಡಬೇಕಾಗಿತ್ತು, ಹೀಗೆ ಮಾಡಬೇಕಾಗಿತ್ತು ಎನ್ನುವ ಮಾಗ ್ದರ್ಶನವನ್ನು ನನಗೆ ಕೊಡುತ್ತಿದ್ದರು. ಇದರ ಜೊತೆಗೆ ಯುವಕರಾಗಿ ದ್ದಂಥವರಿಗೂ ಕೂಡ ಒಂದು ರೀತಿಯಾಗಿ ಪ್ರೋತ್ಸಾಹವನ್ನು ತರಬೇತಿ ಕೊಡುವಂಥ ರೀತಿಯಲ್ಲಿ ಚರ್ಚೆಯನ್ನು ಮಾಡುತ್ತಿದ್ದರು. ಅಂಥ ಒಬ್ಬ ಹಿರಿಯರನ್ನು ಕೂಡ ನಾವು ಇವತ್ತು ಕಳೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಬಹಳಷ್ಟು ಹಿರಿಯರನ್ನು ನಾವು ಕಳೆದುಕೊಂಡಿರತಕ್ಕಂಥ ಹಿನ್ನಲೆಯಲ್ಲಿ ಅವರ ಹೆಸರಿನಲ್ಲಿ ತಾವೇನು ಸಂತಾಪ ಸೂಚಕ ಪ್ರಸ್ತಾವನೆಯನ್ನು ಮಂಡಿಸಿದ್ದೀರಿ, ಅದಕ್ಕೆ ನನ್ನ ಸಹಮತಿಯನ್ನು ವ್ಯಕ್ತಪಡಿಸಿ ನನ್ನ ಮಾತಗಳನ್ನು ಮುಗಿ ಸುತ್ತೇನೆ.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ:- ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಈ ಸಂತಾಪಸೂಚನಾ ನಿರ್ಣಯವನ್ನು ಅನುಮೋದಿಸುತ್ತಾ, ಈ ರಾಷ್ಟ್ರಕ್ಕೆ ಮತ್ತುರಾಜ್ಯಕ್ಕೆ ಕೊಡುಗೆಯನ್ನು ನೀಡಿದಂತಹ ಗಣ್ಯ ವ್ಯಕ್ತಿಗಳ ನಿಧನದಿಂದ ಬಹಳ ದೊಡ್ಡ ಹಾನಿಯಾಗಿದೆ ಎಂದು ಹೇಳಬೇಕಾಗುತ್ತದೆ. ಇವತ್ತು ತಾವು ತಂದಂತಹ ಸಂತಾಪ ಸೂಚನಾ ನಿರ್ಣಯದಲ್ಲಿರುವಂಥ ಗಳ ವ್ಯಕ್ತಿಗಳಲ್ಲಿ ಬಹಳ ಪ್ರಮುಖವಾದಂತಹ ಕೆಲವು ವ್ಯಕ್ತಿಗಳ ಬಗ್ಗೆ ನನ್ನ ಅನಿಸಿಕೆಯನ್ನು ಈ ಸದನದ ಮೂಲಕ ತಮ್ಮ ಮುಂದೆ ನೀಡುತ್ತೇನೆ. ಈಗಾಗಲೇ ಅನೇಕ ಮಹನೀಯರು ಇವರೆಲ್ಲರ ಬಗ್ಗೆ ತಮಗಿರುವ ಪರಿಚಯ ಮತ್ತು ಅವರು ನೀಡಿದಂತಹ ಕೊಡುಗೆ ಬಗ್ಗೆ ಕೆಲವು ವಿಚಾರಗಳನ್ನು ಈ ಸದನದಲ್ಲಿ ವ್ಯಕ್ತಪಡಿಸಿದ್ದಾರೆ.

ಶ್ರೀಮಾನ್ ಐ.ಕೆ.ಗುಜ್ರಾಲ್ ರವರು ರಾಷ್ಟ್ರದ ಒಬ್ಬ ಶ್ರೇಷ್ಠ , ಪ್ರಧಾನ ಮಂತ್ರಿಯಾಗಿದ್ದರು ಎಂದು ಬಹಳ ಅಭಿಮಾನದಿಂದ ಹೇಳಬೇಕಾಗುತ್ತದೆ. ಒಬ್ಬ ಸಚ್ಚಾರಿತ್ರ ಇರುವಂತಹ ಪ್ರಾಮಾಣಿಕವಾದಂತಹ, ವಿದೇಶಗಳಲ್ಲಿ ಅನೇಕ ದಿನ ಗಳ ಕಾಲ ಸೇವೆಯನ್ನು ಮಾಡಿದಂತಹ, ವಿದೇಶಾಂಗ ವ್ಯವಹಾರದ ಕೇಂದ್ರ

ಸಚಿವರಾಗಿ ಕೆಲಸ ಮಾಡಿದಂತಹ, ಪ್ರಪಂಚದ ಎಲ್ಲಾ ದೇಶಗಳ ಬಗ್ಗೆ ಸರಿಯಾದಂಥ ಅರಿವು ಮತ್ತು ಸಂಬಂಧವನ್ನು ಬೆಳೆಸಬೇಕಾದಂತಹ ವ್ಯಕ್ತಿ ಪ್ರಧಾನ ಮಂತ್ರಿಯಾಗಿ ಈ ದೇಶಕ್ಕೆ ಅವರದೇ ಆದಂತಹ ಕೊಡುಗೆಯನ್ನು ನೀಡಿ, ಒಬ್ಬ ರಾಜ್ಯದ ನೀತಿಜ್ಞ ಮತ್ತು ಪ್ರಾಮಾಣಿಕ ಪ್ರಧಾನ ಮಂತ್ರಿ ಎಂದು ಹೆಗ್ಗಳಿಕೆಯನ್ನು ನೀಡಿ ಈ ದೇಶದ ರಾಜಕಾರಣಿಗಳಿಗೆ ಆದರ್ಶವಾಗಿದ್ದಾರೆ ಎಂದರೆ ತಪ್ಪಾಗಲಾರದು. ಅವರ ನಿಧನ ರಾಷ್ಟ್ರಕ್ಕೆ ಮತ್ತು ಪ್ರಪಂಚದ ಎಲ್ಲಾ ಮಾನವ ಸಮಾಜಕ್ಕೆ ನಷ್ಟವಾಗಿದೆ ಎಂದು ಹೇಳಬೇಕಾಗುತ್ತದೆ. ಅವರ ಕುಟುಂಬದವರಿಗೆ ಅವರ ಅಗಲಿಕೆಯ ದು:ಖವನ್ನು ಭರಿಸಲಿ ಹಾಗೂ ಅವರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ದೇವರಲ್ಲಿ ಕೋರುತ್ತೇನೆ.

ಮಾನ್ಯ ಬಿ. ಮುನಿಯಪ್ಪ ಮುದ್ದಪ್ಪನವರು ನಮ್ಮ ರಾಜ್ಯದಲ್ಲಿ ಸೇವೆ-ಯನ್ನು ಮಾಡಿ ಅವರದೇ ಆದಂತಹ ಕೊಡುಗೆಯನ್ನು ನೀಡಿದ್ದಾರೆ. ಅದೇ ರೀತಿ ಡಾ: ಹೆಚ್. ಪುಟ್ಟದಾಸ್‌ರವರು, ಜಿ.ಜಿ. ಯಲ್ಲಿಗುತ್ತಿಯವರು ಕೂಡ ಈ ರಾಜ್ಯಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ. ಬಿ.ಆರ್. ಧನಂಜಯರವರು ಕೂಡ ಈ ರಾಜ್ಯದ ಸೇವೆಯನ್ನು ಮಾಡಿದ್ದಾರೆ. ಎಂ. ಶಂಕರರೆಡ್ಡಿಯವರು, ಗಂಗಾಧ-ರಪ್ಪರವರು ಶಿಕ್ಷಣ ಮತ್ತು ಹಲವಾರು ಕಾರ್ಯಗಳಲ್ಲಿ ಅವರದೇ ಆದ ಕೊಡು-ಗೆಯನ್ನು ನೀಡಿದಂತಹ ವ್ಯಕ್ತಿಯಾಗಿದ್ದರು. ಡಾ: ಸಿ. ಬಂದೀಗೌಡರವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ, ಒಬ್ಬ ಡಾಕ್ಟರಾಗಿ, ಸಮಾಜ ಸೇವಕರಾಗಿ, ಶಿಕ್ಷಣ ಮತ್ತು ಎಲ್ಲಾ ಕ್ಷೇತ್ರದಲ್ಲಿ ಅವರದೇ ಆದಂತಹ ಕೊಡು ಗೆಯನ್ನು ನೀಡಿದ್ದಾರೆ.

ವಿಲಾಸ್‌ರಾವ್ ದೇಶ್‌ಮುಖ್ ಅವರು ಒಬ್ಬ ಒಳ್ಳೆಯ ರಾಜ್ಯ ನೀತಿ-ಜ್ಞನಾಗಿ, ಶಾಸಕರಾಗಿ, ಸಚಿವರಾಗಿ, ಪಂಚಾಯತ್‌ರಾಜ್‌ನಿಂದ ಹಿಡಿದು ಮುಖ್ಯಮಂತ್ರಿ ಸ್ಥಾನ, ಕೇಂದ್ರ ಸಚಿವ ಸ್ಥಾನದವರೆಗೆ ಬಂದು, ಈ ಮಹಾರಾಷ್ಟ್ರಕ್ಕೆ ಹಾಗೂ ರಾಷ್ಟ್ರಕ್ಕೆ ತಮ್ಮದೇ ಆದಂತಹ ಕೊಡುಗೆಯನ್ನು ನೀಡಿದಂತಹ ಒಬ್ಬ ರಾಷ್ಟ್ರ ಪ್ರೇಮಿ ಮತ್ತು ಸಮಾಜ ವಿಜ್ಞಾನಿ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಮೊಟ್ಟಮೊದಲಿಗೆ ಅವರು ಬಸವಣ್ಣನವರ ಜಯಂತಿಯನ್ನು ಮಹಾರಾಷ್ಟ್ರದಲ್ಲಿ ಪ್ರಾರಂಭ ಮಾಡಿದರು. ಬಸವಣ್ಣ ಎಂದರೆ

ಒಂದು ಕೋಮಿಗೆ ಸಂಬಂಧಿಸಿದ ವ್ಯಕ್ತಿ ಅಲ್ಲ. ಸಮಾಜವಾದಿ ವಿಚಾರದಲ್ಲಿ ಮೊಟ್ಟಮೊದಲ ಪಾರ್ಲಿಮೆಂಟ್ ಎಂದರೆ ಅನುಭವ ಮಂಟಪ. ೧೨ನೇ ಶತಮಾನದಲ್ಲಿ ಬಸವಣ್ಣನವರು ಎಲ್ಲರಿಗೂ ಕೂಡ ವಾಕ್ ಸ್ವಾತಂತ್ರ್ಯವನ್ನು, ಸ್ತ್ರೀ ಸ್ವಾತಂತ್ರ್ಯವನ್ನು ನೀಡಿದವರು ಹಾಗೂ ಕೆಳಗಿನ ಜನರನ್ನು ಕೂಡ ಸಮಾನವಾಗಿ ಬಂಧುತ್ವ ಕಂಡಂತಹ ಬಸವಣ್ಣನವರು, ವಿಶ್ವದ ಸಕಲ ಜೀವ ರಾಶಿಗಳಿಗೆ ಒಳ್ಳೆಯದನ್ನು ಬಯಸಬೇಕೆನ್ನುವ ಕಾರ್ಯ-ವನ್ನು ಮಾಡಿದಂತಹ ಬಸವಣ್ಣನವರ ಜಯಂತಿಯನ್ನು ಇವರು ಮಹಾರಾಷ್ಟ್ರದ ಮುಖ್ಯಮಂತ್ರಿ-ಯಾಗಿ ಪ್ರಾರಂಭ ಮಾಡಿದರು. ಅಂತಹ ಒಬ್ಬ ವ್ಯಕ್ತಿಯ ಅಗ-ಲಿಕೆಯಿಂದ ದೇಶಕ್ಕೆ ಬಹಳ ಹಾನಿಯಾಗಿದೆ ಎಂದು ಹೇಳಬೇಕಾಗುತ್ತದೆ. ಇಂತಹ ರಾಜಕಾರಣಿಗಳು ಇವತ್ತು ಬೇಕಾಗಿದೆ. ಏಕೆಂದರೆ ದೇಶವನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗುವಂತಹ, ದೇಶದ ಎಲ್ಲಾ ಜನರನ್ನು ಸಮಾನತೆಯಿಂದ ಕಾಣುವಂತಹ ವ್ಯಕ್ತಿ ಇವತ್ತು ಬೇಕಾಗಿದೆ.

ಬಾಳಾಸಾಹೇಬ್ ಠಾಕ್ರೆಯವರು ಮಹಾರಾಷ್ಟ್ರದ ಜನತೆಗೆ ತಮ್ಮದೆ ಆದಂತಹ ಭಾಷೆಯ ಜನರ ಸಂಘಟನೆಗೆ, ರಾಷ್ಟ್ರ ಪ್ರೇಮಿಯಾಗಿ, ವ್ಯಂಗ್ಯ ಚಿತ್ರ ಪತ್ರಕರ್ತನಾಗಿ, ಭಾಷೆಯ ಬಗ್ಗೆ ಮತ್ತು ರಾಜ್ಯದ ಬಗ್ಗೆ ಅಭಿಮಾನ ಇರುವಂತಹ ಕಾರ್ಯವನ್ನು ಮಾಡಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಬಾಳಾಸಾಹೇಬ್ ಠಾಕ್ರೆ ಬಗ್ಗೆ ಮಾತನಾಡಿದರು. ಅಂತಹ ಒಂದು ವಿಚಾರ ನಮ್ಮ ಕನ್ನಡಿಗರಿಗೆ ಇರಬೇಕು. ಸ್ವಾಭಿಮಾನ ಮತ್ತು ದೇಶಪ್ರೇಮ ಇವೆರಡೂ ಇರಬೇಕು. ಈ ರೀತಿ ಭಾಷಾ ಪ್ರೇಮ, ನಾಡಿನ ಪ್ರೇಮ ಮತ್ತು ದೇಶಪ್ರೇಮ ಇರುವಂತಹ ವ್ಯಕ್ತಿ ಯಾವುದೇ ಸ್ಥಾನಮಾನ ಇಲ್ಲದಿದ್ದರೂ ತಮ್ಮ ರಾಜ್ಯದಲ್ಲಿ ಸಂಘಟನೆಯನ್ನು ಕಟ್ಟಿ ಈ ದೇಶಕ್ಕೆ ದೊಡ್ಡ ಸೇವೆಯನ್ನು ಮಾಡಿದ್ದಾರೆ. ಅವರನ್ನೂ ಕೂಡ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕು.

ಡಾ: ವರ್ಗೀಸ್ ಕುರಿಯನ್ ಅವರ ಬಗ್ಗೆ ಈಗಾಗಲೇ ಬಹಳಷ್ಟು ಮಂದಿ ಮಾತನಾಡಿದ್ದಾರೆ. ಈ ದೇಶಕ್ಕೆ ಬಹಳ ದೊಡ್ಡ ಕಾರ್ಯವನ್ನು ಮಾಡಿದಂತಹ ಅಸಂಘಟಿತ ಜನರಿಗೆ ಅದರಲ್ಲೂ ಗ್ರಾಮೀಣ ಜನರಿಗೆ ಗ್ರಾಮೀಣ ಭಾರತವನ್ನು ಕಾಣಬೇಕೆಂದ ಮಹಾತ್ಮ ಗಾಂಧಿಯವರ ಕನಸಿನಂತೆ, ಹಸಿರು ಕ್ರಾಂತಿಯ ಜೊತೆ ಕ್ಷೀರ ಕ್ರಾಂತಿಯನ್ನು ಕೂಡ ಮಾಡಿದ್ದಾರೆ. ಇವರು ಕೇರಳದಲ್ಲಿ ಹುಟ್ಟಿ, ಗುಜರಾತ್‌ನಲ್ಲಿ ಮೆಕಾನಿಕಲ್ ಇಂಜಿನಿಯರ್ ಆಗಿ,

ಇಂತಹ ಸಹಕಾರಿ ರಂಗದಲ್ಲಿ ಆನಂದ ಸರ್ಕಾರಿ ಕೆನೆ ಎನ್ನುವಂತಹ ಒಂದು ಸಂಘಟನೆಯನ್ನು ಮಾಡಿ ಇಡೀ ರಾಷ್ಟ್ರಕ್ಕೆ ಮಾದರಿಯಾದಂತಹ ಕ್ಷೀರ ಕ್ರಾಂತಿಯನ್ನು ಮಾಡಿ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧವಿರುವಂತಹ, ಅದಕ್ಕಿಂತ ಮುಖ್ಯವಾಗಿ ಅಸಂಘಟಿತವಾಗಿರುವಂತಹ, ಅದಕ್ಕಿಂತಲೂ ಬಹಳ ಮುಖ್ಯವಾಗಿ ಆರ್ಥಿಕವಾಗಿ ಬೆಳವಣಿಗೆ ಆಗಬೇಕಾದಂತಹ ಗ್ರಾಮೀಣ ಪ್ರದೇಶದ ಜನರಿಗೆ ಸಹಾಯ ಮಾಡುವಂತಹ ಒಂದು ದೊಡ್ಡ ಕ್ರಾಂತಿಯನ್ನು ಮಾಡಿದ್ದಾರೆ. ಇವರಿಗೆ ವಿಶ್ವ ಆಹಾರ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿದ್ದಾರೆ. ಈ ರಾಜ್ಯಕ್ಕೆ ಅವರಿಂದ ನಾವು ಬಹಳ ದೊಡ್ಡ ಕೊಡು ಗೆಯನ್ನು ಪಡೆದುಕೊಂಡಿದ್ದೇವೆಂದು ಹೇಳಬಹುದು. ಅವರಿಗೆ ದೇಶಪ್ರೇಮ ಇತ್ತು. ನಮ್ಮ ನಾಡಿನಲ್ಲಿ ಉತ್ಪಾದನೆ ಮಾಡಬೇಕು. ನಾವು ಬೇರೆ ರಾಜ್ಯದವರಿಗೆ ಯಾವುದೇ ವಸ್ತುವನ್ನು ಕೊಡಬಾರದು. ನಮ್ಮ ದೇಶದಲ್ಲಿ ಬೆಳೆಯುವಂತಹ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಬೇಕೆಂದು ಹೇಳಿ ತಮ್ಮದೇ ಆದಂತಹ ಕೊಡುಗೆ-ಯನ್ನು ಕೊಟ್ಟಿದ್ದಾರೆ. ಈಗಾಗಲೇ ಇವರಿಗೆ ಭಾರತ ರತ್ನ ಪ್ರಶಸ್ತಿ ಕೊಡಬೇಕೆನ್ನುವ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಈ ಪ್ರಶಸ್ತಿ ಇವರಿಗೆ ಸಿಗ-ಬೇಕು. ಬಹಳ ದೊಡ್ಡ ಕಾರ್ಯವನ್ನು ಮಾಡಿ ದೇಶಕ್ಕೆ ಆರ್ಥಿಕ ಸಬಲತೆಯನ್ನು ಯಾವ ಗ್ರಾಮೀಣ ಪ್ರದೇಶದ ಜನರಿಗೆ ನೀಡಿದ್ದಾರೋ, ಇಂತಹವರಿಗೆ ಸಿಗಬೇಕೆನ್ನುವಂತಹ ವಿಚಾರವನ್ನು ಕೂಡ ಹೇಳಬಯ-ಸುತ್ತೇನೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ.

ವಿ.ಎನ್. ಸುಬ್ಬರಾವ್‌ರವರು ಬಹಳ ಆತ್ಮೀಯರಾಗಿದ್ದರು. ೧೯೮೩-ರಲ್ಲಿ ನಾನು ಮತ್ತು ಮಾನ್ಯ ಸಿದ್ಧರಾಮಯ್ಯನವರು ಗೋಕಾಕ್ ಚಳುವಳಿ ಮೂಲಕ ಬಂದಿದ್ದು. ೮೩ರಿಂದ ಇವರ ಸಹಕಾರ ಇತ್ತು. ಅಷ್ಟೇ ಅಲ್ಲ, ಇವರು ಅನೇಕ ಪತ್ರಿಕೆಯಲ್ಲಿ ಸಂಪಾದಕರಾಗಿದ್ದರು. ಅದರಲ್ಲೂ ಮುಖ್ಯವಾಗಿ ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ದೇಶದ ಮತ್ತು ರಾಜಕೀಯಕ್ಕೆ ಸಂಬಂಧಪಟ್ಟಂತೆ ಅನೇಕ ವಿಚಾರಗಳ ಬಗ್ಗೆ ಚಿಂತನೆಯನ್ನು ಹಂಚಿಕೊಳ್ಳುವ ವ್ಯಕ್ತಿಯಾಗಿದ್ದರು. ನಾನೂ ಕೂಡ ಅವರನ್ನು ರಾಮಯ್ಯ ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದಿದ್ದೆನು. ಅವರು ನನ್ನನ್ನು ಕಂಡು ಸಂತೋಷ ಪಟ್ಟಿದ್ದರು. ಅವರು ಗುಣಮುಖರಾಗುತ್ತಾ-

ರೆನ್ನುವ ಭರವಸೆ ನಮಗೆ ಇತ್ತು. ಆದರೆ ಅವರು ಅಕಾಲಿಕ ಮರಣ ಹೊಂದಿದ್ದಾರೆ.

ಡಾ: ಅನಿಲ್ ಬಾಬುರಾವ್ ಕಮತಿಯವರು ವೈಯಕ್ತಿಕವಾಗಿ ವೈದ್ಯರಾಗಿದ್ದರೂ ಮಹಾರಾಷ್ಟ್ರದ ಗಡಿ ಪ್ರದೇಶದಲ್ಲಿ ಬಹಳ ದೊಡ್ಡ ಕಾರ್ಯವನ್ನು ಮಾಡಿದವರು. ಇವರು ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದರು. ನಾನು ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದಾಗ ಇವರ ಒಂದು ಬೇಡಿಕೆ ಇತ್ತು. ನಾನು ಒಂದು ಉತ್ತಮವಾದ ಗ್ರಂಥಾಲಯವನ್ನು ಮಾಡಬೇಕಾಗಿದೆ, ಅದಕ್ಕೆ ನಿಮ್ಮ ಅಭಿವೃದ್ಧಿ ಪ್ರಾಧಿಕಾರದಿಂದ ಹಣ ಕೊಡಬೇಕೆಂದು ಹೇಳುತ್ತಿದ್ದರು. ಯಕ್ಸಂಬಾ ಕೇವಲ ಮಹಾರಾಷ್ಟ್ರದಿಂದ ಮೂರು ಕಿಲೋಮೀಟರ್ ಇದೆ. ಅಲ್ಲಿ ಒಂದು ಉತ್ತಮ ಗ್ರಂಥಾಲಯ ಆಗಬೇಕು, ಕನ್ನಡ ಸಾಹಿತ್ಯ ಸಿಗಬೇಕು ಎನ್ನುವ ಉದ್ದೇಶವಿತ್ತು. ಅವರು ಸಾಹಿತ್ಯ ಚಿಂತಕರು, ಅವರು ಗಡಿ ಮತ್ತು ಎಲ್ಲಾ ಸಮಸ್ಯೆಗಳ ಬಗ್ಗೆ ಬಹಳಷ್ಟು ಚಿಂತನೆ ಮಾಡಿದಂತಹ ವ್ಯಕ್ತಿಯಾಗಿದ್ದರು.

ಅವರ ಬೇಡಿಕೆಯನ್ನು ಪೂರೈಸಲು ಗಡಿಪ್ರದೇಶದ ಪ್ರಾಧಿಕಾರದಿಂದ ೧೦ ಲಕ್ಷ ರೂ.ಗಳನ್ನು ಕೊಟ್ಟು ಒಂದು ದೊಡ್ಡ ಗ್ರಂಥಾಲಯವನ್ನು ಮಾಡುವುದಕ್ಕೂ ಸಹ ಸಹಾಯವನ್ನು ಮಾಡಲಾಯಿತು. ಅಂಥ ಒಬ್ಬ ಒಳ್ಳೆಯ ಚಿಂತಕರು ಮತ್ತು ಭಾಷೆ, ಗಡಿ ಬಗ್ಗೆ ನಾವೆಲ್ಲರೂ ಸೌಹಾರ್ದಯು-ತವಾಗಿ ಬದುಕಬೇಕು. ನಾವೆಲ್ಲರೂ ಭಾರತೀಯರು, ಪಟ್ಟಭದ್ರರೆನ್ನುವಂಥ ರೀತಿಯಲ್ಲಿ ಇರಬೇಕು. ಕನ್ನಡ ಭಾಷೆಯ ಬಗ್ಗೆ ಮತ್ತು ಕರ್ನಾಟಕದ ಬಗ್ಗೆ ಗಡಿ, ನೆಲ, ಜಲ ಇವೆಲ್ಲದರ ಬಗ್ಗೆ ಚಿಂತನೆ ಮಾಡಿದಂಥ ವ್ಯಕ್ತಿಯಾಗಿದ್ದರು. ಇವತ್ತು ಇಂಥವರು ನಮ್ಮನ್ನು ಅಗಲಿದ್ದಾರೆ. ಇವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತೇನೆ. ಅದೇ ರೀತಿಯಲ್ಲಿ ಇವರ ಕುಟುಂಬ ವರ್ಗದವರಿಗೆ ಆದಂಥ ಹಾನಿಯನ್ನು ಭರಿಸುವಂಥ ಶಕ್ತಿಯನ್ನು ಭಗವಂತನು ನೀಡಲಿ ಎಂದು ಹಾರೈಸುತ್ತೇನೆ. ಅದೇ ರೀತಿಯಲ್ಲಿ ನಮ್ಮನ್ನು ಅಗಲಿರುವಂಥ ಎಲ್ಲಾ ವ್ಯಕ್ತಿಗಳ ಆದರ್ಶಗಳು ನಮ್ಮೆಲ್ಲರ ಬದುಕಿನಲ್ಲಿ ಸಾರ್ವಜನಿಕ ಜೀವನದಲ್ಲಿ, ರಾಜಕೀಯ ಜೀವನದಲ್ಲಿ ಬರಲಿ ಎಂದು ಹಾರೈಸಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ತಮಗೆ ವಂದನೆಗಳನ್ನರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರಗಳು.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು):- ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಐ.ಕೆ.ಗುಜ್ರಾಲ್‌ರವರು ಈ ದೇಶದ ಪ್ರಧಾನಮಂತ್ರಿಗಳಾಗಿ ಮತ್ತು ಹಲವಾರು ಹುದ್ದೆಗಳನ್ನು ಅಲಂಕರಿಸಿ, ರಾಜಕೀಯ ರಂಗದಲ್ಲಿ ತಮ್ಮದೇ ಆದಂಥ ಛಾಪನ್ನು ಬಿಟ್ಟು ಹೋಗಿದ್ದಾರೆ. ಇವರ ಅಗಲಿಕೆಯಿಂದ ದೇಶ ಒಬ್ಬ ಪ್ರಾಮಾಣಿಕ ರಾಜಕಾರಣಿಯನ್ನು ಕಳೆದುಕೊಂಡಂತೆ ಆಗಿದೆ. ಇದರ ಜೊತೆ-ಯಲ್ಲಿ ಮಾನ್ಯ ಮುನಿಯಪ್ಪ ಮುದ್ದಪ್ಪನವರು ನನ್ನ ಜಿಲ್ಲೆಯವರಾಗಿದ್ದು, ನಾವು ಇವರನ್ನು ಅತ್ಯಂತ ಹತ್ತಿರದಿಂದ ನೋಡಿದ್ದೇವೆ. ಜಿಲ್ಲಾ ಪಂಚಾಯತ್‌ನ ಸದಸ್ಯರಾಗಿ ಎಲ್ಲರ ಜೊತೆಯಲ್ಲಿ ಬಹಳ ಆತ್ಮೀಯವಾಗಿ ಬೆರೆಯುತ್ತಿದ್ದರು. ಮತ್ತೆ ೧೯೯೪ರಲ್ಲಿ ಶಾಸಕರಾಗಿ ಮತ್ತು ಸಚಿವರಾಗಿ, ಅದರಲ್ಲೂ ವಿಶೇಷವಾಗಿ ನೀರಾವರಿ ಸಚಿವರಾಗಿ ಕೆಳ ಭಾಗದ ರೈತರಿಗೆ ನೀರನ್ನು ಕೊಡುವ ವಿಚಾರದಲ್ಲಿ ತಮ್ಮದೇ ಆದ ಪ್ರಾಮಾಣಿಕ ಪ್ರಯತ್ನದಿಂದ ಕೆಲಸವನ್ನು ಮಾಡಿ, ಎಡದಂಡೆ ನಾಲೆಯ ದುರಸ್ತಿಗೆ ಹೋರಾಟಗಳನ್ನು ಮಾಡಿ ದುರಸ್ತಿ ಮಾಡುವ ವಿಚಾರದಲ್ಲಿ ಮಹತ್ವದ ಪಾತ್ರವನ್ನು ವಹಿಸಿ, ಬಹಳ ಆತ್ಮೀಯರಾಗಿ, ಸಂಘಜೀವಿಗಳಾಗಿ, ಎಲ್ಲರ ಜೊತೆಯಲ್ಲಿ ಒಡನಾಡಿಯಾಗಿದ್ದಂಥವರು, ಇವರು ಏಕಾಏಕಿ ನಮ್ಮನ್ನು ಇಷ್ಟು ಬೇಗ ಅಗಲುತ್ತಾರೆಂದು ಯಾರು ನಿರೀಕ್ಷೆ ಮಾಡಿರಲಿಲ್ಲ. ಅವರು ಹೃದಯಾಘಾತದಿಂದ ನಿಧನರಾಗಿ ನಮ್ಮನ್ನೆಲ್ಲಾ ಅಗಲಿದ್ದಾರೆ. ಅದೇ ರೀತಿಯಲ್ಲಿ ಇವತ್ತು ಹಲವಾರು ಜನರು ನಮ್ಮನ್ನು ಅಗಲಿ ಹೋಗಿದ್ದಾರೆ. ಇವರಲ್ಲಿ ಡಾ:ವರ್ಗೀಸ್ ಕುರಿಯನ್‌ರವರ ಜೊತೆಯಲ್ಲಿ ನಾನು ಸುಮಾರು ೧೦-೧೨ ವರ್ಷಗಳ ಕಾಲ NCDFIನಲ್ಲಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನಾನು ಬಹಳ ಹತ್ತಿರದಿಂದ ಡಾ:ವರ್ಗೀಸ್ ಕುರಿಯನ್‌ರವರನ್ನು ನೋಡಿದ್ದೇನೆ. ಕೆಎಂಎಫ್ ಮತ್ತು ಕೆಓಎಫ್ ಸಂಸ್ಥೆಗಳನ್ನು Oil Seed Federation ಅನ್ನು ಈ ರಾಜ್ಯದಲ್ಲಿ ಸ್ಥಾಪನೆ ಮಾಡುವುದಕ್ಕೆ NDDB ಅಧ್ಯಕ್ಷರಾಗಿ ಅವರ ಕೊಡುಗೆ ಬಹಳ ದೊಡ್ಡದು. ಆ ಸಂಸ್ಥೆಯ ಅಧ್ಯಕ್ಷನಾಗಿ ನಾನು ಸುಮಾರು ೧೩ ವರ್ಷಗಳ ಕಾಲ ಕೆಲಸ ಮಾಡುವಾಗ NCDFIಯಲ್ಲೂ ಕೂಡ ಸದಸ್ಯನಾಗಿ ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಅವರನ್ನು "A man of white revolution" ಎಂದು ಕರೆಯುತ್ತಿದ್ದರು. ಇವರು ಕ್ಷೀರ ಸಾಗರದ ಹೋರಾಟದಲ್ಲಿ ಸಹಕಾರಿ ರಂಗಕ್ಕೆ ಅತೀ ಹೆಚ್ಚು ಒತ್ತನ್ನು ಕೊಟ್ಟು ಸಹಕಾರಿ

ರಂಗದಲ್ಲಿ ಹಾಲು ಉತ್ಪಾದನೆಯನ್ನು ಹೇಗೆ ಮಾಡಬಹುದೆಂಬುದಕ್ಕೆ ಅಮೂಲ್ ಸಂಸ್ಥೆಯನ್ನು ಸ್ಥಾಪನೆ ಮಾಡಿದ್ದು, ಅದು ಈ ದೇಶಕ್ಕೆ ಅಷ್ಟೆ ಅಲ್ಲ, ಇಡೀ ಜಗತ್ತಿಗೆ ಒಂದು ಮಾಡೆಲ್ ಆಗಿ ಒಂದು ಸಂಸ್ಥೆಯನ್ನು ಕಟ್ಟಿದರು. ಅವರು ಎಷ್ಟು ಕಳಕಳಿಯನ್ನು ಹೊಂದಿದ್ದರೆಂದರೆ, ಗ್ರಾಮೀಣ ರೈತರ ಸಂಘಟನೆಯನ್ನು ಮಾಡುವಲ್ಲಿ ಅತ್ಯಂತ ಕಳಕಳಿ ವಹಿಸಿದ್ದಂಥವರು. ಇವರ ವ್ಯಕ್ತಿತ್ವವನ್ನು ನೋಡಿದರೆ, ಅವರಿಗೆ ಎಷ್ಟು ಕಾಳಜಿ ಇತ್ತೆಂದರೆ, ಇವತ್ತು ಜಗತ್ತಿನಲ್ಲಿ ಪೈಪೋಟಿಯನ್ನು ಹೇಗೆ ಮಾಡಬೇಕೆನ್ನುವುದಕ್ಕೆ ಅವರು ಒಂದು ಮಾಡೆಲ್ ಆಗಿದ್ದರು. ಅವರ ಸ್ಥಾಪಿಸಿದ white revolution ಅಥವಾ milk society ಗಳು ಇಡೀ ಜಗತ್ತಿನಲ್ಲಿ ಇವತ್ತು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವುದರ ಜೊತೆಗೆ ಗುಜರಾತನ್ನು model of societies ಎಂದು ಏನು ಕರೆಯುತ್ತೇವೆ. ಅಲ್ಲಿಗೆ ಹೋಗಿ ಅವರು ಕಟ್ಟಿದ ಸಂಸ್ಥೆಗಳನ್ನು ಬಹಳಷ್ಟು ಜನರು ನೋಡಿದ್ದಾರೆ. ಅವರೆಲ್ಲರಿಗೂ ಅನುಭವವಿದೆ, ಅವರು ಒಬ್ಬ ಸಹಕಾರಿಯಾಗಿ ಇವತ್ತು ನಮ್ಮನ್ನು ಅಗಲಿರುವಂಥದ್ದು, ನನಗಂತೂ ಒಬ್ಬ ಆತ್ಮೀಯರನ್ನು ಕಳೆದುಕೊಂಡಿರುವಷ್ಟು ನೋವಾಗಿದೆ. ಡಾ:ವರ್ಗೀಸ್ ಕುರಿಯನ್‌ರವರು ಬಹಳ ಚಾಣಾಕ್ಷತನದಿಂದ ಈ ಸಹಕಾರಿ ಸಂಸ್ಥೆಗಳನ್ನು ಹೇಗೆ ಕಟ್ಟಬೇಕು, ನಾವು ಸಹಕಾರಿ ಕ್ಷೇತ್ರದಲ್ಲಿ ಹೇಗೆ ಕೆಲಸವನ್ನು ಮಾಡಬೇಕು? ಎಂಬ ವಿಷಯಗಳಿಗೆ ಸಂಬಂಧಪಟ್ಟಂತೆ ಸಹಕಾರಿಗಳಿಗೆ ಆದರ್ಶಪ್ರಾಯವಾಗಿದ್ದರೆಂಬುದರಲ್ಲಿ ಎರಡು ಮಾತಿಲ್ಲ. ಇಂಥ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ಇವರು ಬಿಟ್ಟು ಹೋಗಿರುವಂಥ ಸಂಸ್ಥೆಗಳು ಅವರು ಮಾಡಿರುವಂಥ ಕೆಲಸಗಳು, ಎಲ್ಲಾ ಸಹಕಾರಿಗಳಿಗೆ, ಅದರಲ್ಲೂ ವಿಶೇಷವಾಗಿ ರೈತರಿಗೆ ರೋಲ್ ಮಾಡೆಲ್ ಆಗಿದ್ದರು. ಅವರು ನಿಧನರಾದ ನಂತರ ಹತ್ತು ಹಲವಾರು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಅವು ಪದ್ಮಶ್ರೀ ಇರಬಹುದು, ಪದ್ಮ ಭೂಷಣ ಇರಬಹುದು, ಪದ್ಮ ವಿಭೂಷಣ ಇರಬಹುದು, ವಿಶ್ವ ಆಹಾರ ಪ್ರಶಸ್ತಿ ಇರಬಹುದು, ಹೀಗೆ ಹತ್ತು, ಹಲವಾರು ಪ್ರಶಸ್ತಿಗಳು ಬಂದಿದ್ದರೂ ಕೂಡ, ರಾಷ್ಟ್ರದ ಉನ್ನತ ಪ್ರಶಸ್ತಿಯಾದ ಭಾರತ ರತ್ನವನ್ನು ಕೊಡಬೇಕೆಂಬ ಹಿರಿಯರ ಮಾತಿಗೆ ನಾನು ಕೂಡಾ ಧ್ವನಿಗೂಡಿ-ಸುತ್ತೇನೆ. ಒಂದೊಂದು ಸಾರಿ ವ್ಯಕ್ತಿಗಳಿಂದ ಪ್ರಶಸ್ತಿಗಳಿಗೆ ಗೌರವ ಬರುತ್ತದೆ. ಅಂಥ ವ್ಯಕ್ತಿಗಳಿಗೆ ಈ ಪ್ರಶಸ್ತಿಗಳು ಲಭಿಸುವುದು ಸೂಕ್ತವೆಂಬ ಮಾತನ್ನು

ಹೇಳುತ್ತೇನೆ. ಅದೇ ರೀತಿಯಲ್ಲಿ ವಿ.ಎನ್.ಸುಬ್ಬರಾವ್‌ರವರು ಮಾಧ್ಯಮದಲ್ಲಿ ಹಿರಿಯಣ್ಣನಾಗಿ ಎಲ್ಲರಿಗೂ ಮಾರ್ಗದರ್ಶನವನ್ನು ಮಾಡಿದರು. ಅವರ ಅಗ-ಲಿಕೆಯಿಂದ ಪತ್ರಿಕಾ ರಂಗ ಒಬ್ಬ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡಿದೆ. ತಾವು ಸಂತಾಪ ಸೂಚನೆಯಲ್ಲಿ ತಂದಿರುವ ಎಲ್ಲಾ ವ್ಯಕ್ತಿಗಳ ಅಗಲಿಕೆಯಿಂದ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಗಳಿಗೆ ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತಾ, ತಾವು ತಂದಿರುವಂಥ ಸಂತಾಪ ಸೂಚನೆಗೆ ಬೆಂಬಲವನ್ನು ವ್ಯಕ್ತಪಡಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ (ಚಿಕ್ಕೋಡಿ-ಸದಲಗ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿ ೧೯೫೦ರಲ್ಲಿ ಡಾ:ಅನಿಲ್ ಬಾಬುರಾವ್ ಕಮತಿಯವರು ಜನಿಸಿದ್ದಾರೆ. ಇವರು ಖ್ಯಾತ ವೈದ್ಯರಾಗಿ, ಗಡಿನಾಡಿನ ಸಾಹಿತಿಯಾಗಿದ್ದಂಥವರು. ಅದರಲ್ಲೂ ವಿಶೇಷವಾಗಿ ಕನ್ನಡದ ಬಗ್ಗೆ ಹೋರಾಟ ಮಾಡುವ ಸಲುವಾಗಿ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಕೂಡ ನೀಡಲಾಗಿತ್ತು. ಅವರು ವೈದ್ಯರಾಗಿದ್ದರೂ ಕೂಡ ಗಡಿ ಭಾಗದಲ್ಲಿ ಕನ್ನಡ ಭಾಷೆ ಉಳಿಯಬೇಕು, ಬೆಳೆಯಬೇಕೆಂದು ಹೋರಾಟ ಮಾಡಿದಂಥವರು. ಅದರಲ್ಲೂ ವಿಶೇಷವಾಗಿ ಗಡಿನಾಡಿನ ಸಾಹಿತಿಯಾಗಿ ಮತ್ತು ಕನ್ನಡದ ಬಗ್ಗೆ ಅಪಾರವಾದಂಥ ಪ್ರೇಮವನ್ನು ಹೊಂದಿದ್ದಂಥವರು. ಇವರು ಪ್ರತಿ ವರ್ಷ ಗಡಿ ಭಾಗದಲ್ಲಿ ರಾಜ್ಯೋತ್ಸವವನ್ನು ಆಚರಿಸುವಾಗ, ಅವರು ಗೆಳೆಯರ ಬಳಗದ ಸಂಘದ ಮುಖಾಂತರ, ನಾವು ಬೆಂಗಳೂರಿನಲ್ಲಿ ಹೇಗೆ ರಾಜ್ಯೋತ್ಸವ ದಿನಾಚರಣೆ ಮಾಡುತ್ತೇವೆ. ಅದೇ ಪ್ರಕಾರ ಗಡಿ ಭಾಗ ದಲ್ಲೂ ಕೂಡ ದೊಡ್ಡ ಪ್ರಮಾಣದಲ್ಲಿ ರಾಜ್ಯೋತ್ಸವವನ್ನು ಆಚರಣೆ ಮಾಡಿ ಪ್ರಮುಖವಾಗಿ ಹಿರಿಯ ಸಾಹಿತಿಗಳನ್ನು, ವಿಜ್ಞಾನಿಗಳನ್ನು ಕರೆಸಿ, ಅವರಿಗೆ ಗೌರವವನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದರು. ಪ್ರತಿ ವರ್ಷ ವಿಶೇಷವಾಗಿ ಮಾನ್ಯ ಶಿವರಾಮ ಕಾರಂತರವರನ್ನು, ಮಾನ್ಯ ಪಾಟೀಲ್ ಪುಟ್ಟಪ್ಪ, ಮಾನ್ಯ ಚನ್ನವೀರ ಕಣವಿ, ಮಾನ್ಯ ಹಾ.ಮಾ.ನಾಯಕ್ ಮತ್ತು ಡಾ:ಚಿದಾನಂದ ಮೂರ್ತಿಯವರು ಹೀಗೆ ಸಾಕಷ್ಟು ಸಾಹಿತಿಗಳು ಪ್ರತಿ ವರ್ಷ ಸಮಾರಂಭಕ್ಕೆ ಬಂದು ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಗೆಳೆಯರ ಬಳ-ಗದ ವತಿಯಿಂದ ಅವರಿಗೆ ಕನ್ನಡ ಕುಲ ತಿಲಕ, ಕನ್ನಡ ಕುಲ ಭೂಷಣ,

ಕನ್ನಡ ಕುಲ ಪುತ್ರ ಇಂಥ ಪದವಿಗಳನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದರು. ಅದೇ ಪ್ರಕಾರ ವಿಶೇಷವಾಗಿ ವಿಜ್ಞಾನಿಗಳನ್ನು ಕೂಡ ಪ್ರತಿ ವರ್ಷ ರಾಜ್ಯೋತ್ಸವದ ನಿಮಿತ್ತ ಸ್ವಾಗತ ಮಾಡುತ್ತಿದ್ದರು. ಅದರಲ್ಲೂ ವಿಶೇಷವಾಗಿ ನಾಗಲೋಟಿ ಮಠ ಮತ್ತು ಗಂಗೂಬಾಯಿ ಹಾನಗಲ್‌ರವರು ಸಹ ಈ ಕಾರ್ಯಕ್ರಮಕ್ಕೆ ಬಂದಿದ್ದರು.

ಕರ್ನಾಟಕ ರಾಜ್ಯದ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಕೈಲಾಸವಾಸಿ ನಿಜಲಿಂಗಪ್ಪನವರೂ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಹಳ ಸಂತೋಷವನ್ನು ವ್ಯಕ್ತಮಾಡಿದ್ದರು ಎನ್ನುವುದನ್ನು ನಾನು ಈ ಸಂದ-ರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಾನು ಇದನ್ನೆಲ್ಲ ಹೇಳುವ ಉದ್ದೇಶವಿಷ್ಟೇ, ಅವರು ಕನ್ನಡದ ಬಗ್ಗೆ ಅಪಾರವಾದ ಪ್ರೇಮವನ್ನಿಟ್ಟುಕೊಂಡಿ-ದ್ದರು, ಗಡಿ ಭಾಗದಲ್ಲಿ ಕನ್ನಡ ಬೆಳೆಯಬೇಕು ಮತ್ತು ಕನ್ನಡದ ಪ್ರಚಾರ ಜಾಸ್ತಿಯಾಗಬೇಕೆಂದು ಸಾಕಷ್ಟು ಪ್ರಯತ್ನ ಮಾಡಿದ್ದರು. ಈಗಾಗಲೇ ನಮ್ಮ ಚಂದ್ರಕಾಂತ ಬೆಲ್ಲದ್‌ರವರು ಹೇಳಿದರು, ಅವರು ಒಂದು ಪ್ರಾಥಮಿಕ ಮತ್ತು ಒಂದು ಪ್ರೌಢಶಾಲೆಯನ್ನು ಗೆಳೆಯರ ಬಳಗದಿಂದ ನಡೆಸುತ್ತಿದ್ದಾರೆ. ಆ ಶಾಲೆಗೆ ಒಂದು ಗ್ರಂಥಾಲಯವನ್ನು ಕೊಡಬೇಕೆಂದು ನಾನು ಚಂದ್ರಕಾಂತ್ ಬೆಲ್ಲದ್‌ರವರಿಗೆ ವಿನಂತಿ ಮಾಡಿಕೊಂಡಿದ್ದೆ. ಅದಕ್ಕೆ ೧೦ ಲಕ್ಷ ರೂಪಾಯಿಗಳ-ನ್ನು ಕೊಟ್ಟು, ಅದರ ಶಂಕುಸ್ಥಾಪನೆಯ ಕಾರ್ಯಕ್ರಮಕ್ಕೆ ಅವರು ಕೂಡ ಬಂದಿದ್ದರು. ಈ ಸಂದರ್ಭದಲ್ಲಿ ನಾನು ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಅವರು ಗಡಿಭಾಗ ದಲ್ಲಿ ಬಹಳ ದುಡಿದಿದ್ದಾರೆ, ಅವರು ಪ್ರತಿವರ್ಷ ರಾಜ್ಯೋತ್ಸವ ಕಾರ್ಯ-ಕ್ರಮವನ್ನು ಬಹಳ ಅದ್ದೂರಿಯಿಂದ ಮಾಡುತ್ತಿದ್ದರು, ಅವರ ನೆನಪಿಗಾಗಿ ಒಂದು ಸಮುದಾಯ ಭವನವನ್ನು ಕಟ್ಟಲು ಒದು ಕೋಟಿ ರೂಪಾಯಿಗ ಳನ್ನು ಬಿಡುಗಡೆ ಮಾಡಿ ಅವರ ಹೆಸರು ಖಾಯಂ ಆಗಿ ಉಳಿಯುವಂತೆ ಮಾಡಿ-ಕೊಡಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿ-ಕೊಳ್ಳುತ್ತೇನೆ. ನಾನು ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದ-ಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಅಭಯ ಪಾಟೀಲ್ (ಬೆಳಗಾವಿ ದಕ್ಷಿಣ):- ಸನ್ಮಾನ್ಯ ಸಭಾಧ್ಯಕ್ಷರೆ, ಈ ಸಂತಾಪ ಸೂಚನಾ ನಿರ್ಣಯದ ಅಂಗವಾಗಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಚಾಲಕರಾಗಿ ನಮ್ಮೆಲ್ಲರಿಗೆ ಮಾರ್ಗದರ್ಶನ ಮಾಡಿದಂಥ ಪರಮ ಪೂಜನೀಯ ಸುದರ್ಶನ್‌ಜೀಯವರು ನಿಧನರಾಗಿ ಸುಮಾರು ದಿನ-ಗಳಾದ ನಂತರ ಇವತ್ತಿನ ದಿವಸ ಈ ನಮ್ಮ ಸಭೆಯಲ್ಲಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವಂಥ ಸಂದರ್ಭದಲ್ಲಿ ನಮ್ಮಂಥ ಅನೇಕರು ಅವರ ಮಾರ್ಗದರ್ಶನ ಮತ್ತು ಸ್ಫೂರ್ತಿಯಿಂದ ಕೆಲಸ ಮಾಡುತ್ತಿರುವುದನ್ನು ಸ್ಮರಿಸಿಕೊಳ್ಳುತ್ತೇವೆ. ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಅನೇಕ ವರ್ಷಗಳ ಕಾಲ ಆರ್.ಎಸ್.ಎಸ್.ನ ಸಂಚಾಲಕ-ರಾಗಿ ಮಾರ್ಗದರ್ಶನ ಮಾಡಿ ಇತ್ತೀಚೆಗೆ ಅವರು ನಿಧನರಾದರು. ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ.

ಇನ್ನು, ವಿಲಾಸರಾವ್ ದೇಶಮುಖ್ ಮತ್ತು ಬಾಳಾಸಾಹೇಬ್ ಠಾಕ್ರೆ ಇವರಿಬ್ಬರ ಬಗ್ಗೆ ಅನೇಕ ವಿಚಾರಗಳು ಇರಬಹುದು. ವಿಶೇಷವಾಗಿ ಬಾಳಾಸಾ-ಹೇಬ್ ಠಾಕ್ರೆಯವರ ಬಗ್ಗೆ ಹೇಳಬೇಕೆಂದರೆ, ಅವರ ಅಂತಿಮಯಾತ್ರೆಯಲ್ಲಿ ೨೦ ಲಕ್ಷಕ್ಕಿಂತ ಹೆಚ್ಚು ಜನರು ಸೇರಿದ್ದರು. ಅದರಲ್ಲಿ ಎಲ್ಲಾ ಭಾಷೆ, ಸಮಾಜದವರು ಸೇರಿದ್ದರು. ಇದರಿಂದ ಅವರು ಎಲ್ಲರಿಗೂ ಬೇಕಾದವರಾಗಿದ್ದರು ಎನ್ನುವುದು ತಿಳಿಯುತ್ತದೆ. ಇಲ್ಲಿ ಅನೇಕರು ಅವರ ಬಗ್ಗೆ ಮಾತನಾಡುತ್ತಾ, ಅವರು 'ಮಹಾರಾಷ್ಟ್ರದ ಹುಲಿ' ಎಂದು ಹೇಳಿದರು. 'ಹಿಂದೂ ಹರ್‌ದೇವ್ ಸಾಮ್ರಾಟ್' ಎಂದು ಅವರಿಗೆ ಇನ್ನೊಂದು ಹೆಸರಿತ್ತು. ಇಡೀ ದೇಶದಲ್ಲಿ ಅವರನ್ನು ಹಿಂದೂಗಳ ಆರಾಧ್ಯ ದೈವವೆಂದು ಗುರುತು ಹಿಡಿಯುವಂಥ ಕೆಲಸವನ್ನು ಅನೇಕರು ಮಾಡುತ್ತಿದ್ದರು. ಸಿದ್ದರಾಮಯ್ಯನವರು ಮತ್ತು ಮುಖ್ಯಮಂತ್ರಿಗಳು ಅವರ ಬಗ್ಗೆ ಅನೇಕ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಬೆಳಗಾವಿಯ ಶಾಸಕನಾಗಿ ನಾನು ವಿಲಾಸರಾವ್ ದೇಶಮುಖ್, ಬಾಳಾಸಾಹೇಬ್ ಠಾಕ್ರೆ ಮತ್ತು ನಿಧನರಾಗಿರುವ ಉಳಿದಂಥ ಎಲ್ಲಾ ಮಹನೀಯರೆಲ್ಲರ ಆತ್ಮಕ್ಕೆ ಶಾಂತಿ

ಸಿಗಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸುತ್ತೇನೆ, ಧನ್ಯವಾದಗಳು.

ಶ್ರೀ ಕಾಕಾಸೋ ಪಾಂಡುರಂಗ ಪಾಟೀಲ್ (ನಿಪ್ಪಾಣಿ):- ಮಾನ್ಯ ಸಭಾಧ್ಯಕ್ಷರೆ, ಮಾಜಿ ಪ್ರಧಾನಿಗಳಾದ ಇಂದ್ರಕುಮಾರ್ ಗುಜ್ರಾಲ್‌ರವರು, ಕೇಂದ್ರ ಸಚಿವರಾಗಿದ್ದ ವಿಲಾಸರಾವ್ ದೇಶಮುಖ್‌ರವರು, ಬಾಳಾಸಾಹೇಬ್ ಠಾಕ್ರೆಯವರು, ಕುರಿಯನ್‌ರವರು, ಕೆ.ಎಸ್. ಸುದರ್ಶನ್‌ರವರು ಮತ್ತು ಹಲವಾರು ಹಿರಿಯ ಮುತ್ಸದ್ಧಿಗಳ ಬಗ್ಗೆ ನಾವು ಇವತ್ತು ಸಂತಾಪ ಸೂಚನಾ ನಿರ್ಣಯವನ್ನು ಮಾಡುತ್ತಿದ್ದೇವೆ. ಕೇಂದ್ರ ಸಚಿವರಾಗಿದ್ದ ವಿಲಾಸರಾವ್ ದೇಶ-ಮುಖ್‌ರವರು ಮೊದಲು ಗ್ರಾಮ ಪಂಚಾಯಿತಿಯ ಸರಪಂಚರಾಗಿ, ನಂತರ ಅಧ್ಯಕ್ಷರಾಗಿ, ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಗಳಾಗಿ, ಕೇಂದ್ರದ ಸಚಿವ-ರಾಗಿ ಕೆಲಸ ಮಾಡಿದ್ದಾರೆ. ನಾವು ಯೂತ್ ಕಾಂಗ್ರೆಸ್ಸಿನಲ್ಲಿದ್ದಾಗ, ಅವರು ಲಾತೂರ್-ಉಸ್ಮನಾಬಾದ್ ಜಿಲ್ಲೆಯ ಯೂತ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಕೊಲ್ಹಾಪುರದಲ್ಲಿ ನಾವು ವಿದ್ಯಾಭ್ಯಾಸ ಮಾಡುತ್ತಿದ್ದಾಗ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾದಲ್ಲಿ ನಾವು ಕೆಲಸ ಮಾಡುತ್ತಿದ್ದೆವು. ಆಗಿನಿಂದ ಅಂದರೆ ೧೯೭೩ರಿಂದ ಅವರು ನಿಧನರಾಗುವವರೆಗೆ ನಮಗೆ ಅವರೊಂದಿಗೆ ನೇರವಾಗಿ, ನಿಕಟವಾದ ಸಂಪರ್ಕವಿತ್ತು. ೧೯೮೦ರಲ್ಲಿ ಅವರು ಮೊದಲನೇ ಬಾರಿ ಶಾಸಕರಾದಾಗ ನಾವು ಅವರಿಗೆ ಅಭಿನಂದನೆ ಸಲ್ಲಿಸಲು ಹೋದಾಗ ಅವರು ನಮ್ಮ ಪ್ರತಿಯೊಬರ ಹೆಸರನ್ನಿಡಿದು ಕರೆದಾಗ ನಮಗೆ ಬಹಳ ಆಶ್ಚರ್ಯವಾಯಿತು. ಅಂದರೆ, ಕಾರ್ಯಕರ್ತರ ಬಗ್ಗೆ ಅಷ್ಟು ವಿಶ್ವಾಸ ಮತ್ತು ಪ್ರೀತಿ ಅವರಲ್ಲಿತ್ತು. ಕಾಂಗ್ರೆಸ್ ಸಿದ್ಧಾಂತದ ಬಗ್ಗೆ ಅವರಿಗೆ ಪೂರ್ತಿ ನಂಬಿಕೆಯಿತ್ತು. ಅವರು ವೃತ್ತಿಯಲ್ಲಿ ವಕೀಲರಾಗಿದ್ದರು. ಗ್ರಾಮೀಣ ಜನತೆಯ-ನ್ನು ಅಭಿವೃದ್ಧಿ ಮಾಡಬೇಕು ಎನ್ನುವ ವಿಶೇಷ ಕಾಳಜಿ ಅವರಲ್ಲಿತ್ತು. ಮುಂದೆ ಅವಕಾಶ ಸಿಕ್ಕಿದಂತೆ ಅವರು ಸಚಿವರಾದರು, ಮುಖ್ಯಮಂತ್ರಿಯಾದರು. ನಮ್ಮದು ಗಡಿಜಿಲ್ಲೆಯಾಂುದರಿಂದ ನಮ್ಮಲ್ಲಿರುವಂತೆಯೇ ಹಲವಾರು ಸಮಸ್ಯೆಗಳು ಅವರ ರಾಜ್ಯದಲ್ಲೂ ಇದ್ದವು. ನಾನು ಮೊದಲ ಬಾರಿಗೆ ಶಾಸಕನಾದಾಗ ಅವರು ಆ ರಾಜ್ಯದ ಮುಖಮಂತ್ರಿಯಾಗಿದ್ದರು. ಆಗ ವಿಶೇಷವಾಗಿ ಚಿಕ್ಕೋಡಿ ತಾಲ್ಲೂಕಿಗೆ ಅನುಕೂಲವಾಗುವಂಥ ದೂದ್‌ಗಂಗಾ

ಅಣೆಕಟ್ಟನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದ joint project ಆಗಿತೆಗೆ-ದುಕೊಳ್ಳಲಾಯಿತು. ದಿವಂಗತ ದೇವರಾಜ ಅರಸುರವರು ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ, ಶಂಕರರಾವ್ ಚೌಹಾಣ್‌ರವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾಗ ಅದು ತೀರ್ಮಾನವಾಗಿತ್ತು. ಆ ಯೋಜನೆಗೆ ನಮ್ಮ ಪಾಲಿನ ಹಣ ಕೊಡುವುದೇನಿತ್ತು, ಅದನ್ನು ಇನ್ನೂ ಕೊಟ್ಟಿರಲಿಲ್ಲ. ಕೇಂದ್ರ ಜಲ ಸಂಪನ್ಮೂಲ ಇಲಾಖೆಯ ತೀರ್ಮಾನದಂತೆ, ಯಾವ ರಾಜ್ಯದವರು ಅವರ ಭಾಗದ ಹಣವನ್ನು ನಿಗದಿತ ಅನುಪಾತದಲ್ಲಿ ತುಂಬಿರುವುದಿಲ್ಲ, ಅವರಿಂದ ಆ ಹಣಕ್ಕೆ interest ತೆಗೆದುಕೊಳ್ಳಬೇಕೆಂದು ಆಗಿತ್ತು. ಹಾಗಾಗಿ ನಮ್ಮ ರಾಜ್ಯದವರು ಕೊಡಬೇಕಾದ interest ೩೩ ಕೋಟಿಗಳಾಗಿತ್ತು. ಆ ೩೩ ಕೋಟಿ ರೂಪಾಯಿಗಳ interestಅನ್ನು ತುಂಬಲು ನಮಗೆ ಶಕ್ತಿ ಇದೆ ಎಂದು ಆಗಿನ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣಾರವರು ಹೇಳಿದರು. ಆ ಪ್ರಕಾರ ನಾವು ಮನವಿ ಮಾಡಿದಾಗ, ಚಿಕ್ಕೋಡಿ ತಾಲ್ಲೂಕು ಮಹಾರಾಷ್ಟ್ರದ ಸಮೀಪವಿರುವ ತಾಲ್ಲೂಕಾಗಿದೆ. ಅವರಿಂದ interest ಏಕೆ ತೆಗೆದುಕೊ-ಳ್ಳಬೇಕು ಎನ್ನುವ ಪ್ರಸ್ತಾವನೆಯನ್ನು ವಿಲಾಸರಾವ್ ದೇಶಮುಖ್‌ರವರು ಇಟ್ಟರು. ಆಗ ಅವರ ರಾಜ್ಯದ ಹಣಕಾಸು ಇಲಾಖೆಯ ಕಾರ್ಯದರ್ಶಿಯವರು ಮತ್ತು ಮುಖ್ಯ ಕಾರ್ಯದರ್ಶಿಯವರು interest ತೆಗೆದುಕೊಳ್ಳದೇ ನಾವು ಅಗ್ರಿಮೆಂಟ್ ಮಾಡಿಕೊಳ್ಳಲು ಬರುವುದಿಲ್ಲ ಎಂದು ಹೇಳಿದಾಗ ಅವರು ಹೇಳಿದವರು, ಅದರಲ್ಲಿ ಒಂದು ಸೆಕ್ಷನ್ ಹಾಕಿ, ಯಾವ ದಿವಸ ಅಗ್ರಿಮೆಂಟ್ ಆಗುತ್ತದೋ ಆಗಿನಿಂದ ಕೌಂಟ್ ಮಾಡಬೇಕು ಎಂದು ಹೇಳಿ ೧೮ನೇ ಆಗಸ್ಟ್ ೨೦೦೧ರಂದು ಅಗ್ರಿಮೆಂಟ್ ಆಯಿತು. ಆ ಸಂದರ್ಭದಲ್ಲಿ ನಾನೂ ಸಹ ಅಲ್ಲಿಯೇ ಇದ್ದೆ. ಆಗ ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ೪ ಟಿ.ಎಂ.ಸಿ. ನೀರಿನ ಬಗ್ಗೆ ಅಗ್ರಿಮೆಂಟ್ ಆಯಿತು. ಅದರಲ್ಲಿ ಮೂರೂವರೆ ಟಿ.ಎಂ.ಸಿ. ನೀರು ೨೦೦೨ರಿಂದ ಪ್ರತಿವರ್ಷ ಚಿಕ್ಕೋಡಿ ತಾಲ್ಲೂಕಿನ ರೈತರಿಗೆ ಸಿಗುತ್ತಿದೆ. ಹಾಗಾಗಿ ನಮಗೆ ವಿಲಾಸ್‌ರಾವ್ ದೇಶಮುಖ್‌ರವರ ಬಗ್ಗೆ ಒಂದು ಕೃತಜ್ಞತಾ ಭಾವನೆ ಇದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರು ಕೇಂದ್ರದ ಸಚಿವರಾಗಿದ್ದಾಗಲೂ ಕೂಡ ಎರಡು ಬಾರಿ ನಿಪ್ಪಾಣಿಯಲ್ಲಿ ನಡೆದ ಸಭೆಗಳಲ್ಲಿ ಭಾಗವಹಿಸಿದ್ದರು. ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಹೇಳಿದ ಪ್ರಕಾರ, ಯಾವುದೇ ರಾಜ್ಯದ ಸಮಸ್ಯೆ

ಇದ್ದರೂ ಕೂಡ ಅವರು ಅದಕ್ಕೆ ಸ್ಪಂದಿಸುತ್ತಿದ್ದರು. ಅದೇ ರೀತಿ, ಬಾಳಾಸಾಹೇ-ಬ್ ಠಾಕ್ರೆಯವರ ಬಗ್ಗೆ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಹೇಳಿದ ಮಾತನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಅವರದು ೧೯೬೭ನಿಂದ individual organization ಇತ್ತು. ಮೊದಲಿಗೆ, ಇಂದಿರಾಗಾಂಧಿಯವರಿಗೆ direct support ಮಾಡಿದವರ ಪೈಕಿ ಅವರ ಸಂಘಟನೆಯೂ ಒಂದು. ರಾಷ್ಟ್ರಪತಿ ಚುನಾವಣೆ ನಡೆದಾಗ ಪ್ರತಿಭಾ ಪಾಟೀಲ್‌ರವರು ಅಭ್ಯರ್ಥಿಯಾಗಿ ದ್ದಾಗ, ಅವರು ಮಹಾರಾಷ್ಟ್ರದ ಅಭ್ಯರ್ಥಿಯಾಗಿದ್ದಾರೆಂದು ಹೇಳಿ, ಅವರು ಎನ್.ಡಿ.ಎ. ಕೋಪಾರ್ಟ್‌ನರ್ ಆಗಿದ್ದರೂ ಕೂಡ ಬಾಳಾಸಾಹೇಬ್ ಠಾಕ್ರೆಯವರು ಪ್ರತಿಭಾ ಪಾಟೀಲ್‌ರವರಿಗೆ ಸಪೋರ್ಟ್ ಮಾಡಿದರು. ಅವರು ಮರಾಠಿಯವರು ಎಂದು ಸಪೋರ್ಟ್ ಮಾಡಿದರು ಎಂದು ಎಲ್ಲರೂ ಹೇಳಿದರು. ಆದರೆ ಈಗ ರಾಷ್ಟ್ರಪತಿಯಾಗಿರುವ ಪ್ರಣಬ್ ಮುಖರ್ಜಿಯವರಿಗೂ ಕೂಡ ಅವರು ಸಪೋರ್ಟ್ ಮಾಡಿರುವುದು ವೈಶಿಷ್ಟ್ಯಪೂರ್ಣವಾದುದಾಗಿದೆ. ಅದಕ್ಕೆ ಅವರದೊಂದು ವಿಚಾರಧಾರೆ ಇತ್ತು. ಏನೆಂದರೆ, ೧೯೮೩ರಲ್ಲಿ ಮಹಾರಾಷ್ಟ್ರದ ೪೮ ಲೋಕಸಭಾ ಸೀಟುಗಳಲ್ಲಿ ೨೮ ಸೀಟುಗಳನ್ನು ಗೆಲ್ಲ-ಬೇಕೆಂದು ಅವರು ತೀರ್ಮಾನಿಸಿಕೊಂಡಿದ್ದರು. ಬೆಳಗಾವಿ ಜಿಲ್ಲೆಯ ಶಾಸಕನಾಗಿ ನನಗೆ ವಿಲಾಸರಾವ್ ದೇಶಮುಖ್‌ರವರು ಮತ್ತು ಬಾಳಾಸಾಹೇ-ಬ್ ಠಾಕ್ರೆಯವರೊಂದಿಗೆ ನಿಕಟವಾದ ಸಂಬಂಧವಿತ್ತು. ಬೆಳಗಾವಿ ನಿಪ್ಪಾಣಿ, ಖಾನಾಪುರಗಳಲ್ಲಿ ನಡೆಯುತ್ತಿದ್ದ ಸಾರ್ವಜನಿಕ ಸಮಾರಂಭಗಳಿಗೆ ಜನರು ಹೋಗುತ್ತಿದ್ದರು. ವಿಲಾಸರಾವ್ ದೇಶಮುಖ್‌ರವರ ಬಗ್ಗೆ ಹೇಳಬೇಕೆಂದರೆ, ಜೂನ್ ತಿಂಗಳಲ್ಲಿ ಕೊಲ್ಹಾಪುರದಲ್ಲಿ ಒಂದು ಫಂಕ್ಷನ್ ಇತ್ತು. ಅವರು ಕೊಲ್ಹಾಪುರಕ್ಕೆ ಹೋಗಲು ಬೆಳಗಾವಿ ಏರ್‌ಪೋರ್ಟ್‌ನಲ್ಲಿ ಇಳಿದರು. ಆ ಬಗ್ಗೆ ನನಗೆ ಮೆಸೇಜ್ ಕೊಟ್ಟಿದ್ದರು. ನಾನು ಅವರ ಜೊತೆಯಲ್ಲಿ ಪ್ರವಾಸ ಹೋಗಿ ದ್ದೆನು. ಅವರು ಚಿಕ್ಕ ವಯಸ್ಸಿನವರಾಗಿದ್ದರೂ ಸಹ ಕ್ಯಾನ್ಸರ್‌ನಿಂದ ತೀರಿಕೊಂಡಿದ್ದು, ಅದರಿಂದ ರಾಷ್ಟ್ರಕ್ಕೆ ಹಾನಿಯಾಗಿದೆ ಮತ್ತು ನನಗೆ ವೈಯಕ್ತಿಕವಾಗಿಯೂ ಹಾನಿಯಾಗಿದೆ. ಇವತ್ತು ಈ ವಿಶೇಷ ಅಧಿವೇಶನದಲ್ಲಿ ಅವರಿಗೆ ನಾವು ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡುತ್ತಿದ್ದೇವೆ. ಅದೇ ರೀತಿ ಬಾಳಾಸಾಹೇಬ್ ಠಾಕ್ರೆಯವರು ಮತ್ತು ಅಗಲಿದ ಇನ್ನಿತರ ಗಣ್ಯರಿಗೆ

ಶ್ರದ್ಧಾಂಜಲಿ ಸಲ್ಲಿಸಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖಾ ಸಚಿವರು):- ಶ್ರೀ ಐ.ಕೆ. ಗುಜ್ರಾಲ್‌ರವರು ಈ ದೇಶದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ನಾನೂ ಕೂಡ ಅದೇ ಪಕ್ಷದಲ್ಲಿದ್ದೆ. ಹತ್ತಿರದಿಂದ ನೋಡುವ ಅವಕಾಶ ನಮಗಿತ್ತು. ಅವರಿಗಿದ್ದ ಕಳಕಳಿ, ಕಾಳಜಿ, ಸಾಮಾಜಿಕ ಚಿಂತನೆಯನ್ನು ನಾವು ಕಂಡೆವು. ಅವರು ಬಹಳ ಪ್ರೀತಿ, ವಿಶ್ವಾಸದಿಂದ ನೋಡತಕ್ಕಂಥವರಾಗಿದ್ದರು. ಐ.ಕೆ. ಗುಜ್ರಾಲ್‌ರವರ ಕಾರ್ಯವೈಖರಿ ಮತ್ತು ಅವರ ಜೀವನದುದ್ದಕ್ಕೂ ಹಾಕಿಕೊಂಡಿ-ದ್ದ ತತ್ವಸಿದ್ಧಾಂತಗಳನ್ನು ನೋಡಿದಾಗ, ಅವರೊಬ್ಬರು ಅಪ್ಪಟ ದೇಶಭಕ್ತರಾಗಿ ದ್ದರು, ಬಡವರ ಬಗ್ಗೆ ಅಪಾರವಾದ ಕಾಳಜಿ, ಕಳಕಳಿ ಹೊಂದಿದವರಾಗಿದ್ದರು. ಅವರ ನಿಧನದಿಂದ ಈ ದೇಶದ ರಾಜಕಾರಣದಲ್ಲಷ್ಟೇ ಅಲ್ಲ. ಬಡವರಿಗೂ ಕೂಡ ಹಾನಿಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ. ಅದೇ ರೀತಿಯಾಗಿ ಬಿ. ಮುನಿಯಪ್ಪ ಮುದ್ದಪ್ಪರವರು, ನಮ್ಮ ಜೊತೆಯಲ್ಲಿ ೧೯೯೪ ರಲ್ಲಿ ಆಯ್ಕೆಯಾಗಿ ಬಂದವರಾಗಿ ದ್ದರು. ಮೊದಲನೇ ಬಾರಿಗೆ ಆಯ್ಕೆಯಾದ ಸಂದರ್ಭದಲ್ಲಿ ಅವರು ಮಂತ್ರಿಯಾಗಿ ಕೆಲಸಕಾರ್ಯಗಳನ್ನು ಮಾಡಿರುವಂಥವರು. ವಯಸ್ಸಿನಲ್ಲಿ ಅವರು ನನಗಿಂತಲೂ ದೊಡ್ಡವರಿದ್ದರೂ ಕೂಡ ನಮ್ಮ ಜೊತೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ಯಾವತ್ತೂ ಕೂಡ ಅಣ್ಣ ಎಂದು ಹೇಳದೆ ಮಾತನಾಡುತ್ತಿರಲಿಲ್ಲ. ಅಂಥ ಒಬ್ಬ ಸಜ್ಜನ ರಾಜಕಾರಣಿ, ವಿನಯಶೀಲ ವ್ಯಕ್ತಿ ಇವತ್ತು ನಮ್ಮನ್ನಗಲಿದ್ದಕ್ಕೆ ನಮಗೆ ನೋವಾಗಿದೆ. ಮೃತರ ಆತ್ಮಕ್ಕೆ ಶಾಂತಿಯ-ನ್ನು ಕೋರುತ್ತಿದ್ದೇನೆ. ಇನ್ನು, ಜಿ.ಜಿ. ಯಲ್ಲಗುತ್ತಿಯವರು ೧೯೮೯ರಲ್ಲಿ ಬೀಳಗಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾದವರು. ಯಲ್ಲಗುತ್ತಿಯವರನ್ನು ಅಖಂಡ

ಬಿಜಾಪುರ ಜಿಲ್ಲೆಯಲ್ಲಿ ಯಲ್ಲಿಗುತ್ತಿ ಸಾಹುಕಾರರೆಂದೇ ಗುರುತಿಸುತ್ತಿದ್ದರೇ ಹೊರತು ಅವರನ್ನು ರಾಜಕಾರಣಿ ಎಂದು ಯಾರೂ ಗುರುತಿಸುತ್ತಿರಲಿಲ್ಲ. ಅಂಥ ಒಬ್ಬ ಸರಳ ಸಜ್ಜನ ವ್ಯಕ್ತಿ ಇವತ್ತು ನಮ್ಮನ್ನಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅದೇ ರೀತಿಯಾಗಿ ವಿಲಾಸರಾವ್ ದೇಶಮುಖ್‌ರವರ ಬಗ್ಗೆ ಕಾಕಾಸೋ ಪಾಂಡುರಂಗ ಪಾಟೀಲ್‌ರವರು ಮಾತನಾಡುವ ಸಂದರ್ಭದಲ್ಲಿ, ಅವರೊಬ್ಬ ಸಜ್ಜನ ರಾಜಕಾರಣಿ, ಅಷ್ಟೇ ಅಲ್ಲದೆ ಗಡಿ ಭಾಗದಲ್ಲಿರುವ ಜಿಲ್ಲೆಗಳ ಬಗ್ಗೆ ಅಪಾರವಾದ ಪ್ರೀತಿ, ಕಳಕಳಿ ಹೊಂದಿದವರಾಗಿದ್ದರು ಎಂದು ಹೇಳುತ್ತಿದ್ದರು. ನಾವು ಎಷ್ಟೋ ಬಾರಿ ಕೃಷ್ಣಾ, ಭೀಮಾ ನದಿಗೆ ನೀರು ಕೊಡಬೇಕೆಂದು ಕೇಳಿದಾಗ ಬಹಳ ಖುಷಿಯಿಂದ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಂಡಿ-ದ್ದರು. ಬಹಳ ಸಹಕಾರ ಮನೋಭಾವದಿಂದ ನಡೆದುಕೊಂಡಂಥ ವ್ಯಕ್ತಿ. ಅವರ ಅಗಲಿಕೆಯಿಂದ ನಮಗೆ ನೋವಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಹಾಗೆಯೇ ಹಿರಿಯ ಪತ್ರಕರ್ತರಾದ ವಿ.ಎನ್. ಸುಬ್ಬರಾವ್ ರವರು ಯಾರ್‍ಯಾರು ವಿಧಾನಸಭೆಗೆ ಹೊಸದಾಗಿ ಆಯ್ಕೆಯಾಗಿ ಬರುತ್ತಾರೆ, ಅವರೆಲ್ಲರಿಗೂ ಮಿತ್ರರಾಗಿರುತ್ತಿದ್ದರು. ಅವರಿಗೆ ಮಾರ್ಗದರ್ಶನ ಮಾಡತಕ್ಕಂಥ-ದ್ದು, ಸಭೆಯ ನಡವಳಿಕೆಯಲ್ಲಿ ಯಾವ ರೀತಿಯಾಗಿ ಭಾಗವಹಿಸಬೇಕೆಂಬ ಬಗ್ಗೆ ಸಾಕಷ್ಟು ಮಾರ್ಗದರ್ಶನ ಮಾಡುತ್ತಿದ್ದರು. ತಮ್ಮ ಜೀವನದಲ್ಲಿ ೪೦ ವರ್ಷಗಳ ಕಾಲ ಈ ರಾಜ್ಯದಲ್ಲಿ ಕಂಡಂಥ ಅನುಭವಗಳನ್ನು ಹೇಳುವುದರ ಮೂಲಕ ನಮಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಿಕೊಡುತ್ತಿದ್ದರು. ಅವರ ನಿಧನದಿಂದ ನಮಗೆ ನೋವಾಗಿದೆ. ಅವರ ಆತ್ಮಕ್ಕೂ ಕೂಡ ಶಾಂತಿ ಕೋರುತ್ತೇನೆ. ಅದೇ ರೀತಿಯಾಗಿ ಇನ್ನುಳಿದ ಗಣ್ಯ ಮಾನ್ಯರು ಏನು ನಮ್ಮನ್ನು ಅಗಲಿದ್ದಾರೆ ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿಪುರಂ):- ಮಾನ್ಯ ಅಧ್ಯಕ್ಷರೆ, ಸುವರ್ಣ ವಿಧಾನಸೌಧದಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇವತ್ತು ನಾವು ಸ್ಮರಣೆ ಮಾಡಿಕೊಳ್ಳು-ತ್ತಿರುವ ತಾವು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಐ.ಕೆ. ಗುಜ್ರಾಲ್‌ರವರ ಕಾರ್ಯಚಟುವಟಿಕೆಗಳನ್ನು ಬಹಳ ವಿಶೇಷವಾಗಿ ಗಮನಿಸಿರುವವರಲ್ಲಿ ನಾನೂ ಒಬ್ಬ. ಘಟಾನುಘಟಿ ರಾಜಕಾರಣಿ-ಗಳ ಮಧ್ಯೆ ಸದ್ದುಗದ್ದಲವಿಲ್ಲದೆ ಕೆಲವೇ ತಿಂಗಳುಗಳ ಕಾಲ ಪ್ರಧಾನಿಯಾಗಿ ಅವರು ಅಧಿಕಾರದಲ್ಲಿದ್ದಂಥ ಅವಧಿಯಲ್ಲಿ ಒಂದು ರೀತಿಯಾಗಿ ವಿದೇಶಾಂಗ ನೀತಿಯಲ್ಲಿ ಅವರು ಬಿಟ್ಟುಹೋಗಿರತಕ್ಕಂಥ ಪಂಚಸೂತ್ರಗಳನ್ನು ಓದಿದಾಗ ನಿಜವಾಗಿಯೂ ಈ ಪಂಚಸೂತ್ರಗಳು ಕೇವಲ ಏಷ್ಯಾಕ್ಕಾಗಲಿ ಅಥವಾ ನಮ್ಮ ಸುತ್ತಮುತ್ತ ಇರುವ ರಾಷ್ಟ್ರಕ್ಕಲ್ಲ, ಇಡೀ ಜಗತ್ತಿ-ನಲ್ಲಿ ಶಾಂತಿಯ ದೂತನಾಗಿ ಅವರು ಕೊಟ್ಟಿರುವ ಪಂಚ ಸೂತ್ರಗಳು ಒಂದು ರೀತಿಯಾಗಿ ದಾರಿದೀಪವಾಗಿವೆ. ಅವರು ಒಂದು ಕಡೆ ಹೇಳುತ್ತಿದ್ದರು. ನಮ್ಮ ದೇಶದ ಸುತ್ತಮುತ್ತವಿರುವ ಬಾಂಗ್ಲಾದೇಶವಿರಬಹುದು, ಬರ್ಮಾ, ಶ್ರೀಲಂಕಾ ಇರಬಹುದು, ಇವರ ಜೊತೆಗೆ ಕೇವಲ ವ್ಯಾವಹಾರಿಕವಾಗಿ ಮಾತ್ರ ಸ್ನೇಹ ಇಟ್ಟುಕೊಳ್ಳತಕ್ಕಂಥದ್ದಲ್ಲ, ವಿಶ್ವಾಸಾರ್ಹತೆಯ ಆಧಾರದ ಮೇಲೆ ನಮ್ಮಲ್ಲಿ ವಿದೇಶಾಂಗ ನೀತಿ ಇರಬೇಕೆಂದು ಹೇಳಿದ್ದು ಬಹುಶ: ಇದು ಎಲ್ಲ ರಾಷ್ಟ್ರಗಳಿಗೂ ಅನ್ವಯವಾಗತ-ಕ್ಕಂಥದ್ದು. ಅವರು ಹೇಳಿದ ಎರಡನೇ ಪಂಚ ಸೂತ್ರದ ಬಗ್ಗೆ ಹೇಳುವುದಾದರೆ, ಮತ್ತೊಂದು ದೇಶ ಪಕ್ಕದ ರಾಷ್ಟ್ರದಲ್ಲಿ ತನ್ನ ಹಿತಾಸಕ್ತಿಗೆ ಧಕ್ಕೆ ಬಾರದ ರೀತಿಯಲ್ಲಿ ಯಾವುದೇ ರೀತಿಯಾದ ಒಂದು ರೀತಿಯಾಗಿ ತನ್ನ ವಿರುದ್ಧವಾಗಿ ಸಂಚು ರೂಪಿಸಲು ಜಾಗವನ್ನು ನೀಡಬಾರದೆನ್ನತಕ್ಕಂಥ ನೀತಿ ಇದೆಯಲ್ಲ, ಇಡೀ ವಿಶ್ವದಲ್ಲೇ ಬಹುಶ: ಇದನ್ನು ಎಲ್ಲರೂ ಸಹ ಅರ್ಥ ಮಾಡಿಕೊಂಡು ಪ್ರಜಾಪ್ರಭುತ್ವವನ್ನು ಗೌರವಿಸತಕ್ಕಂಥ ರಾಷ್ಟ್ರಗಳು ಆ ದೃಷ್ಟಿಕೋನದಲ್ಲಿ ಇದನ್ನು

ತಮ್ಮ ನೀತಿಯಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ ಮತ್ತು ಯಾವುದೇ ದೇಶ ಮತ್ತೊಂದು ದೇಶದ ಜೊತೆ ತನ್ನ ಆಂತರಿಕ ವ್ಯವಹಾರದಲ್ಲಿ ತಲೆ ಹಾಕಬಾರದೆನ್ನುವ ಮೂರನೇ ನೀತಿಯಾಗಲಿ ಮತ್ತು ದಕ್ಷಿಣ ಏಷ್ಯಾದ ಎಲ್ಲಾ ದೇಶಗಳು ಪರಸ್ಪರ ಗಡಿಯನ್ನು ಮತ್ತು ಸಾರ್ವಭೌಮತೆಯನ್ನು ಹೆಚ್ಚಿಸಬೇಕು ಮತ್ತು ಗೌರವಿಸಬೇಕೆನ್ನುವುದು, ಐದನೆಯದಾಗಿ, ಇವತ್ತು ತಮ್ಮಲ್ಲಿ ಉಂಟಾ-ಗತಕ್ಕಂಥ ಮನಸ್ತಾಪಗಳನ್ನು ಪರಸ್ಪರ ಮಾತುಕತೆಯಿಂದ ಬಗೆ ಹರಿಸಿಕೊಳ್ಳಬೇಕು ಎನ್ನುವ ಗುಜ್ರಾಲ್‌ರವರ doctrine ಏನಿದೆ, ಅದು ನಿಜವಾಗಿಯೂ ಒಂದು ರೀತಿಯಾಗಿ ವಿಶ್ವಮಾನ್ಯ. ಬಹುಶ: ಇದನ್ನು ನಾವು ಗಮನಿಸಬೇಕು. ಅವರು ವಿದ್ಯಾರ್ಥಿದಿಸೆಯಲ್ಲಿ ೧೯೩೧ರಲ್ಲಿ ಸ್ವಾತಂತ್ರ್ಯ ಸಂಗ್ರಾ-ಮದ ಚಳವಳಿಯಲ್ಲಿ ಧುಮುಕಿದ್ದರು. ೧೯೯೯ರಲ್ಲಿ ರಾಜಕೀಯದಿಂದ ನಿವೃತ್ತಿ ಹೊಂದಿದಂಥ ದಿನಗಳಲ್ಲಿ ಅವರು ಕೊಟ್ಟಿರತಕ್ಕಂಥ ಕೊಡುಗೆ, ಅವರಲ್ಲಿದ್ದಂಥ ಕವಿತ್ವ ಬಹುಶ: ಶ್ಲಾಘನೀಯ. ಡಾ: ವರ್ಗೀಸ್ ಕುರಿಯನ್‌ರವರ ಬಗ್ಗೆ ನಾನು ಹೇಳಲೇಬೇಕಾಗುತ್ತದೆ. ಬಹುಶ: ಈ ದೇಶದ ಬೆನ್ನೆಲುಬಾಗಿರತಕ್ಕಂಥ ರೈತನ ಉತ್ಪನ್ನವಾಗಿರುವ ಹಾಲಿಗೆ ಆ ಒಂದು ಸ್ವರೂಪವನ್ನು ನೀಡಿ milk processing ಮಾಡಿ ಬಹುಶ:ರಾಷ್ಟ್ರೀಯ domestic market ಅನ್ನು monopoly ಮಾಡಿಕೊಳ್ಳುತ್ತಾ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡಬೇಕೆನ್ನುವ ದೂರದೃಷ್ಟಿಯ ಆಧುನಿಕ ತಂತ್ರಜ್ಞಾನವನ್ನು ಕೊಟ್ಟ ಸ್ವರೂಪ ನಿಜವಾಗಿಯೂ ಶ್ಲಾಘನೀಯ. ಬಹುಶ: ಆ ದಿಕ್ಕಿನಲ್ಲಿ ಸಹ ತರಕಾರಿ ಬೆಳೆಯನ್ನೂ ಸಹ ನಮ್ಮ ದೇಶದಲ್ಲಿ ಕೊಡಲಿಕ್ಕಾಗದಂಥದ್ದರಲ್ಲಿ ಕುರಿಯನ್‌ರಂಥ ಒಬ್ಬ ಮಹಾನುಭಾವ ಹುಟ್ಟಿ ಬರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು, ವಿಲಾಸರಾವ್ ದೇಶಮುಖ್‌ರವರು ಬಹುಶ: ಬಹಳ ಹತ್ತಿರವಾಗಿ, ಅವರು ಮುಖ್ಯಮಂತ್ರಿಯಾಗಿದ್ದಾಗ, ತದನಂತರ, ನಮ್ಮ ರಾಜ್ಯದ ಕಾಂಗ್ರೆಸ್‌ನ ಉಸ್ತುವಾರಿ ಕಾರ್ಯದರ್ಶಿಯಾಗಿದ್ದಾಗ ಅವರ

ಒಡನಾಡಿಯಾಗಿದ್ದೆ. ಮೊದಲನೇ ಸಾರಿ ನಾನು ಶಾಸಕನಾದಾಗ ನನ್ನ ಆಯ್ಕೆಯಲ್ಲಿ ಅವರೂ ಸಹ ಇದ್ದಂಥವರು. ಈ ಸಂದರ್ಭದಲ್ಲಿ ಅವರನ್ನು ಸ್ಮರಣೆ ಮಾಡಿಕೊಳ್ಳಲೇ ಬೇಕಾ-ಗುತ್ತದೆ. ಅವರಲ್ಲಿದ್ದ ಮಿತ್ರತ್ವ ಮತ್ತು ever smiling ಗಮನಿಸಬೇಕು. ಅವರನ್ನು TV ಯಲ್ಲಿ ನೋಡಿದಾಗ ಅವರ ಆರೋಗ್ಯ ಸ್ಥಿತಿ ಗಂಭೀರವೆಂದು ತಿಳಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಅಷ್ಟು ಲವಲವಿಕೆಯಲ್ಲಿದ್ದಂಥವರು ಅವರಿಗೆ ಏಕೆ ಹೀಗಾಯಿತು? ಏನಾಯಿತು? ಎಂದು ಗೊತ್ತಾಗಲಿಲ್ಲ. ಬಹುಶ: ಅವರನ್ನು ನಾವು ಮರೆಯಲಿಕ್ಕೆ ಸಾಧ್ಯವಿಲ್ಲ. ಅವರು ಅಷ್ಟು ಸ್ನೇಹಜೀವಿ. ಎಲ್ಲರ ಜೊತೆಯಲ್ಲಿ ಬೆರೆಯುತ್ತಿದ್ದಂಥ ಮಹಾನ್‌ವ್ಯಕ್ತಿ. ಆ ರೀತಿಯಾಗಿ ಒಬ್ಬ ಮುಖ್ಯಮಂತ್ರಿ, ಕೇಂದ್ರ ಸಚಿವರಾಗಿದ್ದವರನ್ನು ಇವತ್ತು ಕಳೆದುಕೊಂಡಿದ್ದು ದೇಶಕ್ಕೆ ತುಂಬಲಾರದ ನಷ್ಟ. ಈ ಸಂದರ್ಭದಲ್ಲಿ ನಮ್ಮ ಪತ್ರಕರ್ತರಾಗಿದ್ದಂಥ ವಿ.ಎನ್. ಸುಬ್ಬರಾವ್‌ರವರೂ ಅಷ್ಟೇ. ನಾವು ಲಾಂಚ್‌ನಲ್ಲಿ ಕುಳಿತಿದ್ದಾಗ, ಜೀವರಾಜ ಆಳ್ವರವರ ಜೊತೆ ಇದ್ದಾಗ, dining table ನಲ್ಲಿ ಬೆಳಗ್ಗೆ breakfast ಗೆ ಕುಳಿತುಕೊಳ್ಳುತ್ತಿದ್ದೆವು. ಅವತ್ತಿನಿಂದ ಇಲ್ಲಿ ನಾನು ಶಾಸಕನಾಗಿ ಬಂದ ದಿವಸದಿಂದ ಕೂಡ ನನಗೆ advice ಮಾಡುತ್ತಿದ್ದರು. ಜೊತೆಗೆ, ಅಷ್ಟೇ frequency ಯಲ್ಲಿ ಮಾತನಾಡುತ್ತಿದ್ದರು. ನಮ್ಮ frequency ಎಂದರೆ ಆ ರೀತಿಯ ಸ್ನೇಹಜೀವಿ, ಪತ್ರಕರ್ತರನ್ನು ಕಳೆದುಕೊಂಡಿದ್ದೇವೆ. ಶಿವಸೇನಾ ಮುಖ್ಯಸ್ಥರಾಗಿದ್ದ ಬಾಳಾಸಾಹೇಬ್ ಠಾಕ್ರೆಯವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತೇನೆ. ಅವರ ಸಂಘಟನೆ ಎಲ್ಲಾ ಓ.ಕೆ. ಆದರೆ, ಕರ್ನಾಟಕದ ಬಗ್ಗೆ ಅವರು ಮಾತನಾಡುತ್ತಿದ್ದ ಮಾತುಗಳು ನಮ್ಮನ್ನು ಪ್ರಚೋದಿಸುತ್ತಿತ್ತು. ಅಷ್ಟೇ ಅಲ್ಲದೆ, ಒಂದು ರೀತಿಯಾಗಿ ರಾಜ್ಯ ಮತ್ತು ಬೆಳಗಾವಿ ಬಗ್ಗೆ, ಭಾಷೆ ಬಗ್ಗೆ ಅವರು ರಾಷ್ಟ್ರಪ್ರೇಮಿ ಎಂದು ಹೇಳುತ್ತಿದ್ದರು. ಆದರೆ, ಕರ್ನಾಟಕದ ಬಗ್ಗೆ

ಅವರು ಎಲ್ಲೋ ಒಂದು ಕಡೆ ನಮ್ಮನ್ನು ಪ್ರಚೋದನೆ ಮಾಡುವ ರೀತಿಯಲ್ಲಿ ಒಂದು ರೀತಿಯಲ್ಲಿ ಭಾಗ ಮಾಡುವ ರೀತಿಯಲ್ಲಿ ಮಾತನಾಡುತ್ತಿದ್ದರಲ್ಲ ಎನ್ನುವ ನೋವಾಗುತ್ತಿತ್ತು. ಇಂಥ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಈ ದೇಶದಲ್ಲಿ ಹಲವಾರು ರೀತಿಯ ವ್ಯಕ್ತಿಗಳನ್ನು ಕಂಡಿದ್ದೇವೆ. ಅವರು ಒಬ್ಬರು ಮಹಾಸಂಘಟಕರಾಗಿದ್ದವರು. ಈ ಸಂದರ್ಭದಲ್ಲಿ ಅವರೆಲ್ಲರ ಆತ್ಮಕ್ಕೂ ಸಹ ಶಾಂತಿಯನ್ನು ಕೋರುತ್ತಾ, ಈ ಸಂದರ್ಭದಲ್ಲಿ ನೀವು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಸಹಮತಿಯನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಸೋಮಶೇಖರ ರೆಡ್ಡಿ (ಬಳ್ಳಾರಿ):- ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ. ನಮ್ಮ ದೇಶದ ಮಾಜಿ ಪ್ರಧಾನಿಗಳಾದ ಐ.ಕೆ. ಗುಜ್ರಾಲ್, ನಮ್ಮ ರಾಜ್ಯದ ಮಾಜಿ ಮಂತ್ರಿ-ಗಳಾದ ಬಿ.ಮುನಿಯಪ್ಪ ಮುದ್ದಪ್ಪ, ಡಾ: ಹೆಚ್. ಪುಟ್ಟದಾಸ್, ಜಿ.ಜಿ. ಯಲ್ಲಿ-ಗುತ್ತಿ, ಬಿ.ಆರ್. ಧನಂಜಯ ಮತ್ತು ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲ್ಲೂಕಿನ ಎಂ.ಶಂಕರ ರೆಡ್ಡಿಯವರು, ಡಿ.ಬಿ. ಗಂಗಾಧರಪ್ಪ, ಡಾ: ಸಿ.ಬಂದೀಗೌಡರವರು, Central Minister ಆಗಿದ್ದ ವಿಲಾಸರಾವ್ ದೇಶಮುಖ್‌ರವರು, ಆರ್‌ಎಸ್-ಎಸ್ ಪ್ರಮುಖರಾದ ಕೆ.ಎಸ್. ಸುದರ್ಶನ್‌ರವರುಬಾಳಾ ಸಾಹೇಬ್ ಠಾಕ್ರೆಯವರು ಮತ್ತು ಡಾ: ವರ್ಗೀಸ್ ಕುರಿಯನ್‌ರವರ ಅಗಲಿಕೆ ದು:ಖಕರ-ವಾಗಿದೆ. ನಾನು ಕರ್ನಾಟಕ ಹಾಲು ಮಹಾಮಂಡಲದ ಅಧ್ಯಕ್ಷನಾಗಿ ಡಾ: ಕುರಿಯನ್‌ರವರ ಬಗ್ಗೆ ಎರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಡಾ: ಕುರಿಯನ್‌ರವರು ೧೯೪೦, ೧೯೪೪ರಲ್ಲಿ ಕಾಲೇಜು ಶಿಕ್ಷಣ ಮುಗಿಸಿ ಮೆಕ್ಯಾನಿಕಲ್ ಇಂಜಿನಿಯರ್ ಆಗಿ ಹೊರಹೊಮ್ಮಿ ಆನಂದ್ ಡೇರಿಯಲ್ಲಿ ಇಂಜಿನಿಯರ್ ಆಗಿ ಸೇರಿ ಕ್ಷೀರ ಕ್ರಾಂತಿಯನ್ನು ಮೊಟ್ಟಮೊದಲನೇ step

ಹಾಕಿ ನಮ್ಮ ದೇಶದ ಪ್ರಧಾನಮಂತ್ರಿಯಾಗಿದ್ದ ಲಾಲ್‌ಬಹದ್ದೂರ್ ಶಾಸ್ತ್ರಿಯ-ವರ ಮನೆಗೆ ಹೋದಾಗ ಅವರು ಬೇರೆ ಕಡೆ ಟೂರ್‌ನಲ್ಲಿದ್ದರೂ ಕೂಡ ಅವರ ಶ್ರೀಮತಿಯವರು, ಅವರು ಹೊರಗಡೆ ಹೋಗಿದ್ದಾರೆ ಎಂದು ಹೇಳಿದ್ದರು. ಅದಕ್ಕೆ ಇವರು ನಾನು ಅವರು ಬರುವವರೆಗೂ ಇಲ್ಲಿಯೇ ಇರುತ್ತೇನೆ ಎಂದು ಅವರ ಮನೆಯಲ್ಲಿಯೇ ವಾಸ ಮಾಡಿ next day ಅವರು ಬಂದ ಮೇಲೆ ಅವರನ್ನು ಭೇಟಿಯಾಗಿ ಗುಜರಾತಿನಲ್ಲಿ ಇರುವ ಅಮುಲ್‌ನಲ್ಲಿ ಏನು ಕ್ಷೀರ ಕ್ರಾಂತಿ ಮಾಡುತ್ತಿದ್ದೀರಿ, ಅದನ್ನು ಇಡೀ ದೇಶದಲ್ಲಿ ಅಳವಡಿಸಿಕೊಳ್ಳಬೇಕೆನ್ನುವ ಅವರ ಸಲಹೆಸೂಚನೆಗಳನ್ನು ತೆಗೆದುಕೊಂಡು ಅಲ್ಲಿಂದ ದೆಹಲಿಗೆ ಬಂದು ಅದನ್ನು ಕೂಡ ಅವರು ಪಾಲಿಸಿದ್ದಾರೆಂದರೆ, ನಿಜವಾಗಿಯೂ ಇವತ್ತು ಹೈನು-ಗಾರಿಕೆಯಲ್ಲಿ ಜನ ಮೂರು ಹೊತ್ತು ಅನ್ನ ತಿನ್ನುತಿದ್ದಾರೆಂದರೆ ಅದಕ್ಕೆ ನಾವು ಆ ಪಿತಾಮಹನನ್ನು ನೆನೆಸಿಕೊಳ್ಳಬೇಕಾಗುತ್ತದೆ. ಹಾಗಾಗಿ ಇವತ್ತು ಗುಜರಾತ್ ರಾಜ್ಯ ನಂಬರ್ ೧ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ. ಅವರು ಅನಾರೋಗ್ಯ ದಲ್ಲಿದ್ದಾಗ ನಾನು ಅವರನ್ನು Apollo ಆಸ್ಪತ್ರೆಗೆ ಹೋಗಿ ಮಾತನಾಡಿಸಿದೆ. ಆಗ ಅವರು, ಕರ್ನಾಟಕ ರಾಜ್ಯಕ್ಕೆ ಉಜ್ವಲ ಭವಿಷ್ಯತ್ ಇದೆ. ತಾವೂ ಕೂಡ ಗುಜರಾತ್ ಹತ್ತಿರ ಹತ್ತಿರ ಬರುತ್ತೀರಿ, ತಾವು ಕೃಷಿ ಮಾಡಿ ಎಂದು ನನಗೆ ಸಲಹೆ ಕೊಟ್ಟಿದ್ದರು. ಆಶೀರ್ವಾದ ಮಾಡಿದರು. ಸದಾನಂದ ಗೌಡರು ಮುಖ್ಯಮಂತ್ರಿಯಾಗಿದ್ದಾಗ, ಕರ್ನಾಟಕಕ್ಕೆ ಕರೆಸಿ ಅವರಿಗೆ ದೊಡ್ಡ ಸನ್ಮಾನ ಕಾರ್ಯಕ್ರಮ ಏರ್ಪಾಡು ಮಾಡಿದ್ದೆವು. ಆವತ್ತೂ ಕೂಡ ನಮಗೆ ಅವರು ಆಶೀರ್ವಾದ ಮಾಡಿ ಇಲ್ಲಿಂದ ಹೋಗಿದ್ದರು. ಅವರ ಆತ್ಮಕ್ಕೆ ಮತ್ತು ಇತರ ಎಲ್ಲಾ ಅಗಲಿದ ಗಣ್ಯರ ಆತ್ಮಕ್ಕೆ ಶಾಂತಿ ಸಿಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು:- ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದಸನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು:- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಸಿದ್ದರಾಮಯ್ಯ:- ನಾನು ನಿಯಮ ೬೦ರಡಿಯಲ್ಲಿ ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು:- ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ:- ನಾನೂ ಒಂದು ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು:- ಮೊದಲು ಊಟ ಆಗಲಿ. ಆಮೇಲೆ ತೆಗೆದುಕೊಳ್ಳೋಣ.

೨. ಪ್ರಕಟಣೆ:

ವಿಷಯ: ಶ್ರೀ ಬಿ.ಎಸ್.ಯಡಿಯೂರಪ್ಪನವರು ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡುವ ಬಗ್ಗೆ :-

ಅಧ್ಯಕ್ಷರು :- ೧೩ನೇ ವಿಧಾನಸಭೆಗೆ ಶಿಕಾರಿಪುರ ವಿಧಾನಸಭಾ ಕ್ಷೇತ್ರ ಸಂಖ್ಯೆ ೧೧೫ ರಿಂದ ಚುನಾಯಿತರಾಗಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ವಿಧಾನಸಭಾ ಸದಸ್ಯತ್ವಕ್ಕೆ ರಾಜಿನಾಮೆಯನ್ನು ದಿನಾಂಕ: ೩೦-೧೧-೨೦೧೨ರಂದು ನೀಡಿದ್ದು ಸದರಿಯವರ ರಾಜೀನಾಮೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಎಂದು ಈ ಮೂಲಕ ಸದನಕ್ಕೆ ತಿಳಿಯಪಡಿಸಲಾಗಿದೆ.

ಅಧ್ಯಕ್ಷರು:- ಈಗ ಸದನವನ್ನು ಮಧ್ಯಾಹ್ನ ೨-೩೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ ೧-೩೪ ಗಂಟೆಗೆ ಮುಕ್ತಾಯವಾಗಿ ಪುನ: ಮಧ್ಯಾಹ್ನ ೨-೩೦ಗಂಟೆಗೆ ಸೇರಲು ನಿಶ್ಚಯಿಸಿತು)